# ಶ್ರೀಸೂಕ್ತಭಾಷ್ಯ

ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ-೫೭೩೨೧೧
೨೦೦೪

ಇದೇ ಲೇಖಕರಿಂದ ಪ್ರಕಾಶನಗೊಂಡಿರುವ ಗ್ರಂಥಗಳು

## I. ವೇದಸಾಹಿತ್ಯಪ್ರಿಯರಿಗೆ (ಕರ್ಮಕಾಂಡದಲ್ಲಿ ಶ್ರದ್ಧಾವಂತರಿಗೆ)

| | | ಪುಟಗಳು |
|---|---|---|
| 1. | **ರುದ್ರಭಾಷ್ಯ ಪ್ರಕಾಶ :** (ನಮಸ್ತೇ ರುದ್ರ - ಎಂಬ ವೇದಭಾಗದ ಲಲಿತವಾದ ಕನ್ನಡ ವಿವರಣೆ | 156 |
| 2. | **ಚಮಕಾಧ್ಯಾಯಭಾಷ್ಯ :** (ಚಮೇ - ಎಂಬ ವೇದಭಾಗದ ಸರಳ ವ್ಯಾಖ್ಯಾನ) | 82 |
| 3. | **ಪುರುಷಸೂಕ್ತಭಾಷ್ಯ :** (ಸಹಸ್ರಶೀರ್ಷಾ - ಎಂಬ ಸೂಕ್ತದ ಅರ್ಥ ವಿವರಣೆ) | 107 |
| 4. | **ಶ್ರೀಸೂಕ್ತಭಾಷ್ಯ :** (ಹಿರಣ್ಯವರ್ಣಾಂ - ಎಂಬ ಸೂಕ್ತದ ಅರ್ಥ) **ಈಗ ಇದು ನಿಮ್ಮ ಕೈಯಲ್ಲಿದೆ** | 64 |
| 5. | **ವಿಷ್ಣುಸೂಕ್ತಭಾಷ್ಯ :** (ಋಗ್ವೇದದ ವಿಷ್ಣುಸೂಕ್ತದ 45 ಋಕ್ಕುಗಳ - ಅರ್ಥ ವಿವರಣೆ, - ನಾರಾಯಣ ಸೂಕ್ತಭಾಷ್ಯ ಸಮೇತ) | 107 |
| 6. | **ಸೌರಸೂಕ್ತಭಾಷ್ಯ :** (ಋಗ್ವೇದದ ಸೌರಸೂಕ್ತದ 64 ಋಕ್ಕುಗಳ - ಅರ್ಥ ವಿವರಣೆ) | 104 |

## II. ಪುರಾಣ ಸ್ತೋತ್ರಪ್ರಿಯರಿಗೆ (ಭಕ್ತಿ ಪ್ರಧಾನ ಸಾಧಕರಿಗೆ)

| | | |
|---|---|---|
| 7. | **ಅಧ್ಯಾತ್ಮ ರಾಮಾಯಣ :** (ಸಂಪೂರ್ಣ ಮೂಲ, ಭಾವಾರ್ಥ ಸಹಿತ) | 612 |
| 8. | **ಅಧ್ಯಾತ್ಮ ಶಂಕರವಿಜಯ :** (ಶಂಕರರ ಜೀವನಚರಿತ್ರೆ) | 188 |
| 9. | **ಶ್ರೀ ಗುರುಚರಿತಾಮೃತ :** (ಶ್ರೀಶ್ರೀಗಳವರ ಜೀವನ ಚರಿತ್ರೆ ಮತ್ತು- ಕಾರ್ಯಾಲಯದ ಇತಿಹಾಸ) | 104 |
| 10. | **ಸ್ತೋತ್ರಮಾಲಾ - ಭಾಗ ೧, ಪಂಚರತ್ನಗಳು :** (೧) ಭೀಷ್ಮಸ್ತವರಾಜ, (೨) ಹರಿಶರಣಾಷ್ಟಕ (೩) ಅನುಸ್ಮೃತಿ, (೪) ಗಜೇಂದ್ರಮೋಕ್ಷ (೫) ಆದಿತ್ಯಹೃದಯ | 103 |
| 11. | **ಸ್ತೋತ್ರಮಾಲಾ - ಭಾಗ ೨ :** ೪ ಗಣಪತಿ ಸ್ತೋತ್ರಗಳು, ೧೧ ಶಿವಸ್ತೋತ್ರಗಳು, ೨ ವಿಷ್ಣುಸ್ತೋತ್ರಗಳು, ಪಾಂಡವಗೀತೆ - ಸಹಿತ) | 84 |
| 12. | **ಶಿವಾಪರಾಧಕ್ಷಮಾಪಣಾ ಸ್ತೋತ್ರ :** (ವಿವರಣೆ ಸಹಿತ) | 38 |
| 13. | **ಭಗವನ್ನಾಮಚಂದ್ರಿಕೆ :** (ಅಷ್ಟೋತ್ತರಗಳ ಸಂಗ್ರಹ) | 52 |
| 14. | **ಸನತ್ಸುಜಾತೀಯಮ್ :** (ಪ್ರಕರಣಗಳು ಸಂಪುಟ ೭) (ಮಹಾಭಾರತಾಂತರ್ಗತ ಸನತ್ಸುಜಾತೀಯ ಶಾಂಕರಭಾಷ್ಯ ಅನುವಾದ ಸಹಿತ) | 254 |

ರಕ್ಷಾಕವಚದ ಮರು ಹಾಳೆಯಲ್ಲಿ ಮುಂದುವರೆದಿದೆ.

ಅಧ್ಯಾತ್ಮಗ್ರಂಥಾವಳಿ

# ಶ್ರೀಸೂಕ್ತಭಾಷ್ಯ

(ಶ್ರೀಸೂಕ್ತದ ಆಧ್ಯಾತ್ಮಿಕತತ್ತ್ವವಿವೇಚನೆ)


ಲೇಖಕರು:

ಅಧ್ಯಾತ್ಮವಿದ್ಯಾಪ್ರವೀಣ, ವೇದವಿದ್ಯಾಭೂಷಣ

ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿ


ಕ್ರಮಾಂಕ ೧೮೩


ಪ್ರಕಾಶಕರು :

ಅಧ್ಯಾತ್ಮಪ್ರಕಾಶಕಾರ್ಯಾಲಯ

ಹೊಳೆನರಸೀಪುರ-೫೭೩ ೨೧೧

೨೦೦೪

| | | |
|---|---|---|
| ಮೊದಲನೆಯ ಮುದ್ರಣ | : ೧೯೮೨ | ೧೦೦೦ ಪ್ರತಿಗಳು |
| ಎರಡನೆಯ ಮುದ್ರಣ | : ೧೯೮೫ | ೨೦೦೦ ಪ್ರತಿಗಳು |
| ಮೂರನೆಯ ಮುದ್ರಣ | : ೧೯೯೫ | ೨೦೦೦ ಪ್ರತಿಗಳು |
| ನಾಲ್ಕನೆಯ ಮುದ್ರಣ | : ೨೦೦೪ | ೨೦೦೦ ಪ್ರತಿಗಳು |

ಪುಟಗಳು : iv + 60

ಬೆಲೆ : 15/- ರೂ.

ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು
(All Rights Reserved)

ಅಕ್ಷರ ಜೋಡಣೆ
**ಪ್ರಶಾಂತ್ ಎಂಟರ್‌ಪ್ರೈಸಸ್**
ನಂ. 213, ಬಾಲಾಜಿ ರಸ್ತೆ
ತ್ಯಾಗರಾಜನಗರ, ಬೆಂಗಳೂರು - 28 ✆ : 26764650

ಮುದ್ರಣಸ್ಥಾನ :
**ಶ್ರೀ ಗಣೇಶಮಾರುತಿ ಪ್ರಿಂಟರ್ಸ್**
76, ಮೂರನೇ ಬ್ಲಾಕ್, 6ನೇ ಮೇನ್
ತ್ಯಾಗರಾಜನಗರ, ಬೆಂಗಳೂರು - 560 028
✆ : 26766342

# ಮುನ್ನುಡಿ
## (ಮೂರನೆಯ ಮುದ್ರಣಕ್ಕೆ)

ಶ್ರೀಸೂಕ್ತವು ವೈದಿಕಕರ್ಮಕಾಂಡಕ್ಷೇತ್ರದಲ್ಲಿ ಪ್ರಸಿದ್ಧವೇದಭಾಗವಾಗಿದ್ದು ಮತತ್ರಯಾನುಯಾಯಿಗಳೂ ದೇವೀಭಕ್ತರುಗಳೂ ಪೂಜೆ, ಹೋಮ, ಜಪಾನುಷ್ಠಾನ ಗಳಲ್ಲಿ ಇದನ್ನು ಹೆಚ್ಚಾಗಿ ಬಳಸುತ್ತಾರೆ. ಇದರ ಜನಪ್ರಿಯತೆಯನ್ನು ಮನಗಂಡು ಇದರ ಭಾವಾರ್ಥವಿವರಣರೂಪವಾದ ಲೇಖನಗಳನ್ನು ಮೊದಲು ನಮ್ಮ **ಅಧ್ಯಾತ್ಮಪ್ರಕಾಶ** ಮಾಸಪತ್ರಿಕೆಯಲ್ಲಿ ಪ್ರಕಟಿಸಿ ಅನಂತರ ಪ್ರತ್ಯೇಕವಾಗಿ ಪುಸ್ತಕರೂಪದಲ್ಲಿಯೂ ಎರಡುಬಾರಿ ಪ್ರಕಟಿಸಲಾಯಿತು. ಪ್ರತಿಗಳೆಲ್ಲ ಮುಗಿದುಹೋದದ್ದರಿಂದ ಈಗ ಮೂರನೆಯಬಾರಿಗೆ ಪುನರ್ಮುದ್ರಣ ಮಾಡಿಸಿ ಪ್ರಕಟಿಸಲಾಗಿದೆ.

ಶ್ರೀಸೂಕ್ತವು ಋಗ್ವೇದದ ಖಿಲಭಾಗವಾದದ್ದರಿಂದಲೊ, ಏನೊ - ಈ ಸೂಕ್ತದ ಪಾಠವು ವೈದಿಕರಲ್ಲಿ ಭಿನ್ನಭಿನ್ನವಾಗಿದೆ. ವೇದಭಾಗಕ್ಕೆ ಸೇರಿರುವ ಹದಿನೈದು ಋಕ್ಕುಗಳು ಎಲ್ಲಾ ಪಾಠಗಳಲ್ಲಿಯೂ ಸಮನಾಗಿವೆ. ಅನಂತರ ೧೬ನೆಯ ಋಕ್ಕು ಫಲಶ್ರುತಿರೂಪವಾಗಿದೆ. ಈ ೧೫ ಋಕ್ಕುಗಳನ್ನು ಶ್ರೀಕಾಮನಾದವನು ಸತತವಾಗಿ ಜಪಿಸಬೇಕೆಂದೂ ಪ್ರತಿದಿನವೂ ಈ ಹದಿನೈದು ಋಕ್ಕುಗಳಿಂದ ತುಪ್ಪವನ್ನು ಅಗ್ನಿಯಲ್ಲಿ ಹೋಮಮಾಡಬೇಕೆಂದೂ ತಿಳಿಸಲಾಗಿದೆ. ಆದ್ದರಿಂದ ಶ್ರೀಕಾಮರಾದವರಿಗೆ ವೇದವು ದಯಪಾಲಿಸಿರುವ ಈ ಮಂತ್ರಗಳು ಜಪಕ್ಕೂ ಹೋಮಕ್ಕೂ ವಿನಿಯೋಗವಾಗಿದ್ದು ಅವಶ್ಯವಾಗಿ ಫಲವನ್ನುಂಟುಮಾಡುವದರಲ್ಲಿ ಸಂಶಯವಿಲ್ಲ.

ಈಗ ವೈದಿಕರಲ್ಲಿ ಈ ಸೂಕ್ತವು ಹೆಚ್ಚಾಗಿ ಬಳಕೆಯಲ್ಲಿದ್ದರೂ ಇದರ ಅರ್ಥಾನುಸಂಧಾನವನ್ನು ಮಾಡಿರುವಂಥವರು ಅಪರೂಪರಾಗಿಯೇ ಇದ್ದಾರೆ. ಆದ್ದರಿಂದ ಜನಸಾಮಾನ್ಯರಿಗೂ ಈ ಸೂಕ್ತದ ಅಭಿಪ್ರಾಯವನ್ನು ಮನನಮಾಡಲು ಸಾಧ್ಯವಾಗುವಂತೆ ಆಧ್ಯಾತ್ಮಿಕಹಿನ್ನೆಲೆಯಿಂದ ಇದರ ಅರ್ಥವನ್ನು ಇಲ್ಲಿ ವಿಚಾರ ಮಾಡಲಾಗಿದೆ. ಶ್ರೀಕಾಮರಲ್ಲದವರು ಈಗ ಯಾರೂ ಇಲ್ಲವೆಂದೇ ಹೇಳಿದರೂ ತಪ್ಪಾಗಲಾರದು. ಏಕೆಂದರೆ ಹಣವಿಲ್ಲದೆ ವ್ಯವಹಾರವು ಈಗ ನಡೆಯುವಂತಿಲ್ಲ. ಆದರೆ ಆ ಹಣವನ್ನು ಹೇಗೆ ಸಂಪಾದಿಸಬೇಕು? ಹೇಗೆ ಗೌರವಿಸಬೇಕು? ಹೇಗೆ ವಿನಿಯೋಗ ಮಾಡಬೇಕು? ಹೇಗೆ ನಮ್ಮ ಪುರುಷಾರ್ಥಸಾಧನವಾಗಿ ಮಾಡಿಕೊಳ್ಳಬೇಕು?-

ಎಂಬಿದು ಅನೇಕರಿಗೆ ತಿಳಿಯದು. ಇನ್ನು ಕೆಲವರಿಗೆ ಯಾವದಾದರೊಂದು ಪ್ರಕಾರದಿಂದ ಧನಸಂಪಾದನೆ ಮಾಡುವ ಜಾಣತನವಿರಬಹುದಾದರೂ ಅದರಿಂದ ಸುಖಪಡುವದು ಹೇಗೆ? ಅದರಲ್ಲಿಯೂ ಪಾರಲೌಕಿಕಸುಖಕ್ಕೆ ಧನವನ್ನು ಸಾಧನವಾಗಿ ಮಾಡಿಕೊಳ್ಳುವದು ಹೇಗೆ? ಎಂಬುದು ತಿಳಿಯದು. ಈ ಪುಸ್ತಕವನ್ನು ಓದಿದರೆ ಇಂಥ ವಿಚಾರಗಳೆಲ್ಲವೂ ಮನದಟ್ಟಾಗುವವು. ನೀತಿಶಾಸ್ತ್ರದವರು ಸಹ **'ಧನಾತ್ ಧರ್ಮಂ ತತಃ ಸುಖಮ್'** ಎಂದೇ ಹೇಳಿದ್ದಾರೆಯೇ ಹೊರತು **'ಧನಾತ್ ಸುಖಂ '** ಎಂದು ಹೇಳಿಲ್ಲ. ಹಾಗಿದ್ದಿದ್ದರೆ ಧನವಿರುವವರೆಲ್ಲರೂ ಸುಖವಾಗಿರಬಹುದಾಗಿತ್ತು. ಆದ್ದರಿಂದ ಧನವನ್ನು **ಶ್ರೀ** ಎಂದೂ ಆಕೆಯು ಮಹಾವಿಷ್ಣುವಿನ ಪತ್ನಿಯೂ ವಿಭೂತಿಯೂ ಆಗಿದ್ದಾಳೆಂದೂ ಆಕೆಯ ಮಹಿಮೆಯನ್ನು ಅರಿತು ನಾವು ಭಕ್ತಿಶ್ರದ್ಧೆಗಳಿಂದ ಆರಾಧಿಸಬೇಕೆಂದೂ ಇಲ್ಲಿ ತಿಳಿಸಲಾಗಿದೆ. ಇದರಲ್ಲಿ ವಿವರಿಸಿರುವ ವಿಷಯಗಳನ್ನು ವಾಚಕರು ಮನನಮಾಡಿ ನಿಜವಾದ ದೇವೀಭಕ್ತರಾಗಿ ಬಾಳುವಂತೆ ಶ್ರೀದೇವಿಯು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ.

ಕಾರ್ಯಾಲಯದ ಉಳಿದ ಗ್ರಂಥಗಳಂತೆಯೇ ಈ ಗ್ರಂಥವನ್ನೂ ವಾಚಕರು ಆದರದಿಂದ ಬರಮಾಡಿಕೊಂಡು ಪ್ರೋತ್ಸಾಹಿಸುವರೆಂದು ನಂಬಿದೆ.

ತಾ : ೧೫-೦೨-೧೯೬೫ ಇತಿ-

**ಹೆಚ್.ಎಸ್.ಲಕ್ಷ್ಮೀನರಸಿಂಹಮೂರ್ತಿ**

**ನಾಲ್ಕನೆಯ ಮುದ್ರಣಕ್ಕೆ**

ಮೂರನೆಯ ಬಾರಿಗೆ ಮುದ್ರಿಸಿದ್ದ ಪುಸ್ತಕಗಳೆಲ್ಲವೂ ಮಾರಾಟವಾಗಿದ್ದರಿಂದ, ಪರಿಷ್ಕರಿಸಿ ಪುನಃ ನಾಲ್ಕನೆಯ ಬಾರಿಗೆ ಮುದ್ರಿಸಲಾಗಿದೆ.

ತಾರಣ ಸಂವತ್ಸರ
ಚೈತ್ರ ಬಹುಳ ಸಪ್ತಮಿ
೧೧-೦೪-೨೦೦೪

**ಪ್ರಕಾಶಕರು**

॥ ಓಂ ॥

# ಶ್ರೀಸೂಕ್ತಭಾಷ್ಯ

## ಪೀಠಿಕೆ

**ಓಂ॥ ಸರ್ವಮಂಗಳಮಾಂಗಲ್ಯೇ ಶಿವೇ ಸರ್ವಾರ್ಥಸಾಧಿಕೇ ।**
**ಶರಣ್ಯೇ ತ್ರ್ಯಂಬಕೇ ದೇವಿ ನಾರಾಯಣಿ ನಮೋಽಸ್ತು ತೇ ॥**

ಶ್ರೀಸೂಕ್ತದ ವಿವರಣೆಯನ್ನು ಯಥಾಮತಿಯಾಗಿ ಬರೆಯಲು ಈಗ ಉಪಕ್ರಮಿಸುತ್ತೇನೆ. ಇದು ಋಗ್ವೇದದ ಖಿಲಮಂತ್ರಗಳಲ್ಲಿ ಸೇರಿರುತ್ತದೆ. ಸಾಯಣಾಚಾರ್ಯರ ಭಾಷ್ಯವು ಇದಕ್ಕೆ ಇದೆ. ಆ ಭಾಷ್ಯಾನುಸಾರವಾಗಿಯೇ ವ್ಯಾಖ್ಯಾನವನ್ನು ಮಾಡಲಿದ್ದೇನೆ.

ಶ್ರೀಸೂಕ್ತವನ್ನು ಋಗ್ವೇದದ ನಾಲ್ಕನೆಯ ಅಷ್ಟಕದ ನಾಲ್ಕನೆಯ ಅಧ್ಯಾಯದ ಮೂವತ್ತನಾಲ್ಕನೆಯ ವರ್ಗದ ಅನಂತರ ಬರುವ ಇಪ್ಪತ್ತೇಳು ಋಕ್ಕುಗಳ ಖಿಲಭಾಗವೆಂತ ಪರಿಗಣಿಸಲಾಗಿದೆ. ಋಗ್ವೇದದ ನಾಲ್ಕನೆಯ ಅಷ್ಟಕದ ನಾಲ್ಕನೆಯ ವರ್ಗದ ಕೊನೆಯ ಮಂತ್ರಕ್ಕೆ ಸರಿಯಾಗಿ ಮಂಡಲದ ಪರಿಗಣನೆಯಂತೆ ಐದನೆಯ - ಆತ್ರೇಯ ಮಂಡಲವೂ ಪೂರೈಸಿದೆ. ಆದ್ದರಿಂದ ಶ್ರೀಸೂಕ್ತವು ಐದನೆಯ ಮಂಡಲದ ಖಿಲಭಾಗವಾದಂತಾಯಿತು. ಶ್ರೀಸೂಕ್ತದಲ್ಲಿ ಈಗಿನ ಪಾಠಕ್ರಮದಂತೆ ಅಡಕವಾಗಿರುವ 'ವರ್ಷಂತು ತೇ ವಿಭಾವರೀ' ಎಂಬ ಋಕ್ಕು ಮಾತ್ರ ಮೂವತ್ತೊಂದನೆಯ ವರ್ಗದ ಪರಿಶಿಷ್ಟವೆಂದು ಕಂಡುಬಂದಿದೆ. ಆದ್ದರಿಂದ ಅದೂ ಸೇರಿದರೆ ಒಟ್ಟು ೨೮ ಋಕ್ಕುಗಳಾಗುವವು. ಈಗ ಪ್ರಚಾರದಲ್ಲಿರುವ ಶ್ರೀಸೂಕ್ತಪಾಠಗಳಲ್ಲಿ ಬಹಳ ವ್ಯತ್ಯಾಸಗಳಿವೆ. ಕೆಲವು ಶ್ಲೋಕಗಳೂ ಸೇರಿಹೋಗಿವೆ. ಯಾವವು ಋಕ್ಕುಗಳು, ಯಾವವು ಶ್ಲೋಕಗಳು? ಎಂಬಿದನ್ನು ಗೊತ್ತುಪಡಿಸುವದೇ ಕಷ್ಟವಾಗಿದೆ. ಆದ್ದರಿಂದ ನಾನು

ಸಾಯಣಭಾಷ್ಯಸಹಿತವಾದ, ಹಾಗೂ ಪದಪಾಠವುಳ್ಳ, ದೇವನಾಗರೀಲಿಪಿಯ ಋಗ್ವೇದಗ್ರಂಥದ - ಎಂಟನೆಯ ಭಾಗದ ಕಡೆಯಲ್ಲಿ ಪರಿಶಿಷ್ಟದಲ್ಲಿ ಕೊಟ್ಟಿರುವ ಶ್ರೀಸೂಕ್ತಪಾಠವನ್ನು ಪ್ರಾಮಾಣಿಕವೆಂತ ಪರಿಗಣಿಸಿ ಅದರಂತೆ ವಿವರಣೆಯನ್ನು ಬರೆಯುವೆನು. 'ಆಹ್ನಿಕಚಂದ್ರಿಕಾ' ಎಂಬ ಪುಸ್ತಕದಲ್ಲಿಯೂ ಸಾಯಣಭಾಷ್ಯ ಸಹಿತವಾದ ಶ್ರೀಸೂಕ್ತವಿದೆ. ಆ ಪಾಠವು ಸಂಹಿತಾಗ್ರಂಥಪಾಠಕ್ಕೆ ಅನುಗುಣವಾಗಿದೆ. ಹೀಗೆ ಎರಡು ಮೂಲಗ್ರಂಥಗಳ ಆಧಾರದಿಂದ ಶ್ರೀಸೂಕ್ತಪಾಠವನ್ನು ನಿರ್ಣಯಿಸಿರುತ್ತೇನೆ.

ಈಗ ಶ್ರೀಸೂಕ್ತದ ಒಳವಿಭಾಗವನ್ನು ನೋಡೋಣ. ಮೊದಲನೆಯ ಹದಿನೈದು ಋಕ್ಕುಗಳನ್ನು ಮಾತ್ರ ಸಾಯಣಾಚಾರ್ಯರು ಶ್ರೀಸೂಕ್ತವೆಂದು ಕರೆದು ಭಾಷ್ಯವನ್ನು ಬರೆದಿರುತ್ತಾರೆ. ಹದಿನಾರನೆಯ ಋಕ್ಕು ಅದರ ವಿನಿಯೋಗವನ್ನೂ ಫಲವನ್ನೂ ತಿಳಿಸುತ್ತದೆ. ಭಾಷ್ಯಕಾರರು ಎರಡು ಮೂರು ವಿಧದಿಂದ ವಿನಿಯೋಗದ ವಿವರನ್ನು ತಿಳಿಸಿದ್ದಾರೆ. ಹೇಗೆಂದರೆ : ೧) ಶ್ರೀಕಾಮನಾದವನು ಶುಚಿರ್ಭೂತನಾಗಿ ಶ್ರದ್ಧೆಯಿಂದ ತಾನು ಸಂಕಲ್ಪಮಾಡಿದ ದಿನದಿಂದ ಹಿಡಿದು ಹದಿನೈದು ವರ್ಷಗಳ ಕಾಲ ಪ್ರತಿದಿನವೂ ಈ ಶ್ರೀಸೂಕ್ತಮಂತ್ರಗಳಿಂದ ಹದಿನೈದು ಆಜ್ಯಾಹುತಿಗಳನ್ನು ಅಗ್ನಿಯಲ್ಲಿ ಅರ್ಪಿಸಬೇಕು. ಅನಂತರ ಇಡಿಯ ಶ್ರೀಸೂಕ್ತದ ಹದಿನೈದು ಋಕ್ಕುಗಳನ್ನೂ ಒಮ್ಮೆಗೇ ಪಠನಮಾಡಿ ಒಂದು ಆಹುತಿಯನ್ನು ಕೊಡಬೇಕು. ಯಥಾಶಕ್ತಿಯಾಗಿ ಅಖಂಡಪಾರಾಯಣವನ್ನು ಮಾಡಬೇಕು. ೨) ಅಥವಾ ೧೫ ಬಾರಿ ಅಖಂಡವಾಗಿ ಪಾರಾಯಣಮಾಡಿ ಅನಂತರ ಒಂದೊಂದು ಋಕ್ಕನ್ನೂ ಶಕ್ತಿಯಿದ್ದಷ್ಟು ಜಪಿಸಬೇಕು. ೩) ಅದು ಸಾಧ್ಯವಾಗದಿದ್ದರೆ ಲೌಕಿಕಾಗ್ನಿಯಲ್ಲಿ ಹದಿನೈದು ಋಕ್ಕುಗಳಿಂದ ೧೫ ದಿನಗಳು ಪ್ರತಿದಿನವೂ ಹದಿನೈದು ಆಹುತಿಗಳನ್ನು ಅರ್ಪಿಸಿ ಹದಿನೈದು ಬಾರಿ ಶ್ರೀಸೂಕ್ತಪಾರಾಯಣ ಮಾಡಬೇಕು - ಎಂದು ಮೂರು ರೀತಿಯಿಂದ ವಿನಿಯೋಗವನ್ನು ತಿಳಿಸಿರುತ್ತಾರೆ. ಇದಲ್ಲದೆ ತಂತ್ರಗ್ರಂಥಗಳಲ್ಲಿಯೂ ಸ್ಮೃತಿಗಳಲ್ಲಿಯೂ ಇನ್ನೂ ಅನೇಕ ವಿಧವಾದ ವಿನಿಯೋಗಗಳು ಕಾಮ್ಯಾನುಸಾರವಾಗಿ ಈ ಮಂತ್ರಗಳಿಗೆ ಹೇಳಲ್ಪಟ್ಟಿವೆ. ಯಾವದೇ ಒಂದಾನೊಂದು ವಿಧಿಗೆ ಅನುಸಾರವಾಗಿ ಅನುಷ್ಠಾನಮಾಡಿದಲ್ಲಿ

ಈ ಜನ್ಮದಲ್ಲಿಯೇ ಅತಿ ಹೆಚ್ಚಿನ ಐಶ್ವರ್ಯಪ್ರಾಪ್ತಿಯಾಗುವದೆಂದೂ ಒಂದುವೇಳೆ ವಿಧಿಯಲ್ಲಿ ಲೋಪವಾದರೆ ಮಾಡಿದ್ದಕ್ಕೆ ತಕ್ಕಷ್ಟು ಫಲವಾಗುವದೆಂದೂ, ಹಾಗೂ ಅಲ್ಲದೆ ಪಾಪದೋಷಗಳೇ ಹೆಚ್ಚಾಗಿದ್ದು ಅಡ್ಡಿಗಳು ಒದಗಿದರೆ ಜನ್ಮಾಂತರಗಳಲ್ಲಿ-ಯಾದರೂ ಫಲವುಂಟಾಗಿಯೇ ತೀರುವದೆಂದೂ ದೇವತೆಗಳನ್ನು ಸಂತೋಷಗೊಳಿಸಿದುದರ ಫಲವು ಎಂದಿಗೂ ವ್ಯರ್ಥವಾಗಲಾರದೆಂದೂ ಭಾಷ್ಯದಲ್ಲಿ ತಿಳಿಸಲಾಗಿದೆ. ಆದ್ದರಿಂದ ೧೫ ಋಕ್ಕುಗಳ ಭಾಗವಂತೂ ನಿಜವಾದ ಹಾಗೂ **ಮೂಲಭೂತವಾದ ಶ್ರೀಸೂಕ್ತ**ವೆಂದಾಯಿತು. ಉಳಿದ ಹನ್ನೆರಡು ಋಕ್ಕುಗಳಿಗೆ ಸಾಯಣರು ಭಾಷ್ಯವನ್ನು ರಚಿಸಿರುವದಿಲ್ಲ. ಅವುಗಳೆಲ್ಲ ನಿರುಕ್ತಕಾರರು ಹೇಳಿರುವ ಫಲಶ್ರುತಿಗಳೆಂದು ಪ್ರಸಿದ್ಧವಾಗಿವೆ.

ಈಗ ಅಧ್ಯಾತ್ಮದೃಷ್ಟಿಯಿಂದ ಶ್ರೀಸೂಕ್ತದ ಪ್ರಯೋಜನವನ್ನು ಚಿಂತಿಸೋಣ. ಶ್ರೀಸೂಕ್ತವಲ್ಲದೆ ಉಪನಿಷತ್ತಿನಲ್ಲಿ ಶ್ರೀಕಾಮನಾದವನಿಗಾಗಿಯೇ ಹೋಮಕ್ಕಾಗಿ ಮೀಸಲಾದ ಮಂತ್ರಗಳಿವೆ. ಇವು ತೈತ್ತಿರೀಯೋಪನಿಷತ್ತಿನ ಶೀಕ್ಷಾವಲ್ಲಿಯಲ್ಲಿವೆ. ಶ್ರೀಶಂಕರಾಚಾರ್ಯರು 'ಈ ಮಂತ್ರಗಳು ಶ್ರೀಕಾಮನಿಗೆ ಹೋಮಕ್ಕಾಗಿ ಹೇಳಲ್ಪಟ್ಟಿವೆ' - ಎಂದು ಉಲ್ಲೇಖಿಸಿದ್ದಾರೆ. 'ಆವಹಂತೀ ವಿತನ್ವಾನಾ'... ಎಂಬಲ್ಲಿಂದಾರಂಭಿಸಿ 'ಲೋಮಶಾಂ ಪಶುಭಿಃ ಸಹ ಸ್ವಾಹಾ' ಎಂಬಲ್ಲಿಯವರೆಗಿನ ಮಂತ್ರಗಳೇ ಇವು. ಇವುಗಳನ್ನು ಯಥಾಶಕ್ತಿಯಾಗಿ ಸಂಖ್ಯಾಬದ್ಧವಾಗಿ ಹೋಮಮಾಡಿದಲ್ಲಿ ಐಶ್ವರ್ಯಪ್ರಾಪ್ತಿಯಾಗುವದಾಗಿ ವೇದದಲ್ಲಿ ತಿಳಿಸಿದೆ. ಆದರೆ ಈ ಪ್ರಾಪ್ತಿಗಿಂತ ಮುಂಚೆ ಮನುಷ್ಯನು ಮೇಧಾ-ಪ್ರಾಪ್ತಿಯನ್ನೂ ಕೇಳಿಕೊಳ್ಳಬೇಕು. ಹಾಗಿಲ್ಲದಿದ್ದರೆ ಮೇಧಾವಂತನಲ್ಲದವನಿಗೆ ಸಂಪತ್ತುಂಟಾದರೆ ಅದು ಅನರ್ಥಕ್ಕೇ ಕಾರಣವಾಗುತ್ತದೆ - ಎಂದು ಭಾಷ್ಯಕಾರರು ಎಚ್ಚರಿಸಿರುತ್ತಾರೆ. ಅನಂತರ ಈ ಬ್ರಹ್ಮವಿದ್ಯಾಪ್ರಕರಣದಲ್ಲಿ ಶ್ರೀಕಾಮನ ವಿಚಾರವು ಏತಕ್ಕೆ ಬಂದಿದೆ? ಎಂಬುದನ್ನು ಹೀಗೆ ವಿವರಿಸಿದ್ದಾರೆ : 'ಈ ಸಂದರ್ಭದಲ್ಲಿ ಶ್ರೀಕಾಮನಿಗೆ ಹೋಮಮಂತ್ರಗಳನ್ನು ಹೇಳಿರುವದು ಧನಕ್ಕಾಗಿ. ಧನವಾದರೊ, ವೈದಿಕಕರ್ಮಾನುಷ್ಠಾನಕ್ಕಾಗಿ ; ಆ ಅನುಷ್ಠಾನವಾದರೊ, ಪಾಪಗಳ ಕ್ಷಯಕ್ಕಾಗಿ ; ಹಾಗೆ ಪಾಪಗಳು ಸವೆದರೆತಾನೆ ಚಿತ್ತದಲ್ಲಿ ಬ್ರಹ್ಮವಿದ್ಯೆಯು ಪ್ರಕಾಶಿಸಲು

ಸಾಧ್ಯವಾದೀತು ?' ಎಂದಿದ್ದಾರೆ. ಮುಂದುವರೆದು ವ್ಯಾಸರ ವಚನವೊಂದನ್ನೂ ಉದಾಹರಿಸಿದ್ದಾರೆ : ಏನೆಂದರೆ, 'ಮನುಷ್ಯರಿಗೆ ಪಾಪಗಳು ಕ್ಷೀಣವಾಗಲಾಗಿ ಅಂತಃಕರಣವು ಬೆಳಗುವದು. ಹೇಗೆ ಕಂಚಿನ ಕನ್ನಡಿಯು ಚೆನ್ನಾಗಿ ಬೆಳಗಲ್ಪಟ್ಟರೆ ಪ್ರತಿಬಿಂಬವನ್ನು ಗ್ರಹಿಸಬಲ್ಲದೋ ಹಾಗೆ ಅಂತಃಕರಣವು ಶುದ್ಧವಾಗಿದ್ದರೆ ಆತ್ಮನ ಸ್ವರೂಪವನ್ನು ಗ್ರಹಿಸಬಲ್ಲದು'- ಎಂದು ವಿವರಿಸಿದ್ದಾರೆ. ಆದ್ದರಿಂದ ಶ್ರೀಸೂಕ್ತಪಾರಾಯಣವೂ ಅನುಷ್ಠಾನವೂ ಅಧ್ಯಾತ್ಮಸಾಧಕರಿಗೂ ಅವಶ್ಯವೆಂದೇ ಸಿದ್ಧವಾಯಿತು. ಇನ್ನು ಮುಂದೆ ಶ್ರೀಸೂಕ್ತದ ಋಕ್ಕುಗಳನ್ನು ಒಂದೊಂದಾಗಿ ವಿಚಾರಮಾಡಲು ಪ್ರಾರಂಭಿಸೋಣ. ಮೊದಲನೆಯ ಋಕ್ಕು ಹೀಗಿದೆ :

## ೧. ಹಿರಣ್ಯವರ್ಣಾಮ್

**ಓಂ ॥ ಹಿರಣ್ಯವರ್ಣಾಂ ಹರಿಣೀಂ ಸುವರ್ಣರಜತಸ್ರಜಾಮ್ ।**
**ಚಂದ್ರಾಂ ಹಿರಣ್ಮಯೀಂ ಲಕ್ಷ್ಮೀಂ ಜಾತವೇದೋ ಮ ಆವಹ ॥ ೧ ॥**

**'ಚಿನ್ನದ ಕಾಂತಿಯುಳ್ಳವಳೂ ಹರಿಣೀರೂಪಳೂ ಚಿನ್ನ-ಬೆಳ್ಳಿಗಳ ಹೂವುಗಳ ಮಾಲೆಗಳುಳ್ಳವಳೂ ಚಂದ್ರನಂತೆ ಪ್ರಕಾಶಮಾನಳೂ ಚಿನ್ನದಂತೆ ಶರೀರವುಳ್ಳವಳೂ ಆದ ಲಕ್ಷ್ಮಿಯನ್ನು ಎಲೈ ಜಾತವೇದನಾದ ಅಗ್ನಿಯೆ, ನನಗಾಗಿ ಕರೆಯುವವನಾಗು.'**

ಇಲ್ಲಿ ಲಕ್ಷ್ಮೀದೇವಿಯನ್ನು ಕರೆಯುವಂತೆ ಅಗ್ನಿಯನ್ನು ಕುರಿತು ಪ್ರಾರ್ಥಿಸಲಾಗಿದೆ. ದೇವತೆಗಳನ್ನು ಕರೆಯುವ ಕೆಲಸವು ಅಗ್ನಿಗೇ ಸೇರಿದ್ದಾಗಿದೆ. ಆದ್ದರಿಂದ ಅಗ್ನಿಯನ್ನು ಕೇಳಿಕೊಂಡಿದೆ. ಅಗ್ನಿಯ ಆರಾಧನೆಯಿಂದಲೇ ಸಂಪತ್ತು ದೊರಕುವದೆಂದೂ ಅಭಿಯುಕ್ತರ ವಚನವಿದೆ. ಬ್ರಹ್ಮಚಾರಿಗಳು ಮಾಡುವ 'ಅಗ್ನಿಕಾರ್ಯ' ಹಾಗೂ ಗೃಹಸ್ಥರು ಮಾಡುವ ಔಪಾಸನ'ವೆಂಬ ವೈದಿಕಕರ್ಮಗಳ ಕೊನೆಯಲ್ಲಿ 'ಸ್ವಸ್ತಿ ಶ್ರದ್ಧಾಂ... ಶ್ರಿಯಂ ಬಲಂ.... ದೇಹಿ ಮೇ ಹವ್ಯವಾಹನ' ಎಂಬ ಪ್ರಾರ್ಥನೆಯಿರುತ್ತದೆ. ಆದ್ದರಿಂದ ಅಗ್ನಿಗೂ ಶ್ರೀದೇವಿಗೂ ಬಹಳ ನಿಕಟವಾದ ಸಂಬಂಧವಿದೆ. ಬ್ರಾಹ್ಮಣರು ಕ್ರಮವಾಗಿ ಅಗ್ನಿಯ ಆರಾಧನೆಯನ್ನು ಮಾಡಿದ್ದೇ ಆದರೆ ಬಡತನವು ಪರಿಹಾರವಾದೀತು. ಇರಲಿ. ಈ ಅಗ್ನಿಯನ್ನು ಕುರಿತು 'ಎಲೈ ಜಾತವೇದನೆ, ನೀನು ಲಕ್ಷ್ಮಿಯನ್ನು ನನಗಾಗಿ ಕರೆಯುವವನಾಗು'

ಎಂದು ಕೇಳಿಕೊಳ್ಳಲಾಗಿದೆ. ಅನಂತರ ಲಕ್ಷ್ಮಿಯ ಸ್ವರೂಪವನ್ನುವರ್ಣಿಸಿದೆ. ದೇವತೆಗಳೆಲ್ಲರಿಗೂ ಶರೀರವೂ ಆಕಾರವೂ ಗೊತ್ತಾದ ಅಲಂಕಾರ, ಸ್ಥಾನ, ಪರಿಜನ, ಪರಿವಾರಗಳೂ ಉಂಟೆಂದು ಪುರಾಣಗಳಲ್ಲಿಯೂ ತಂತ್ರ, ಆಗಮ ಶಾಸ್ತ್ರಗಳಲ್ಲಿಯೂ ಪ್ರಸಿದ್ಧವಾಗಿರುತ್ತದೆ. ಶ್ರೀಶಂಕರಾಚಾರ್ಯರು ಬ್ರಹ್ಮಸೂತ್ರ ಭಾಷ್ಯದಲ್ಲಿ ದೇವತೆಗಳಿಗೆ ಶರೀರಾದಿಗಳು ಉಂಟು - ಎಂದೇ ಪ್ರತಿಪಾದಿಸಿದ್ದಾರೆ. ಆದ್ದರಿಂದ ಈಗ ನಾವು ಬಯಸುತ್ತಿರುವ ಶ್ರೀಲಕ್ಷ್ಮಿಯ ಸ್ವರೂಪವನ್ನು ಪರಿಚಯಮಾಡಿಕೊಳ್ಳಬೇಕು. ಈಕೆಯು ಚಿನ್ನದಂತೆ ಕಾಂತಿಯುಳ್ಳವಳೂ ಚಿನ್ನದ ಶರೀರವುಳ್ಳವಳೂ ಆಗಿರುತ್ತಾಳೆ. ಚಿನ್ನದ ಶರೀರವೆಂದರೆ ಅಲ್ಲಿಯೂ ಈಕೆಯ ತೇಜೋರೂಪವನ್ನೇ ಗ್ರಹಿಸಬೇಕು. ಲೋಹಗಳಲ್ಲಿ ಸುವರ್ಣವು ತೈಜಸದ್ರವ್ಯವೆಂದೂ ಉಳಿದವು ಪಾರ್ಥಿವಗಳೆಂದೂ ಹೇಳುತ್ತಾರೆ. ದೇವತೆಗಳೆಲ್ಲ ತೇಜೋಮಯಶರೀರಿಗಳಾದ್ದರಿಂದ ಇಲ್ಲಿ ಹಾಗೆ ಸ್ತುತಿಸಿದೆ. ಮತ್ತು ಲಕ್ಷ್ಮಿಯು ಶೋಭನವಾದ ಬಣ್ಣವುಳ್ಳ ಥಳಥಳಿಸುವ ಬೆಳ್ಳಿಯ ಹೂಗಳ ಮಾಲೆಯನ್ನೂ ಧರಿಸಿದ್ದಾಳೆ. ಚಂದ್ರನಂತೆ ಬಿಳುಪಾಗಿರುತ್ತಾಳೆ. ಮತ್ತು ಆಕೆಯು ಹರಿಣಿಯು ; ಜಿಂಕೆಯ ರೂಪದಿಂದ ಒಮ್ಮೆ ಕಾಡಿನಲ್ಲಿ ತೋರಿಕೊಂಡಿದ್ದಳು. ಇಂಥ ಲಕ್ಷ್ಮಿಯನ್ನು ಆಹ್ವಾನಿಸುವವನಾಗು - ಎಂದು ಕೇಳಲಾಗಿದೆ.

ಈ ವರ್ಣನೆಯಲ್ಲಿ ನಮಗೆ ಪ್ರಧಾನವಾಗಿ ಕಾಣುವದೇನೆಂದರೆ : 'ಭಾಗ್ಯಾಧಿದೇವತೆಯಾದ ಲಕ್ಷ್ಮಿಯು ಚಿನ್ನಬೆಳ್ಳಿಗಳ ಸಂಪರ್ಕವುಳ್ಳವಳಾಗಿರುವದರಿಂದ, ಅದರಲ್ಲಿಯೂ ಅತ್ಯಂತ ಬೆಲೆಬಾಳುವ ಚಿನ್ನದ ಸಂಬಂಧವುಳ್ಳವಳಾದ್ದರಿಂದ ಈಗಿನ ನಾಗರಿಕರು ತಿಳಿದಿರುವಂತೆ ಚಿನ್ನಬೆಳ್ಳಿಗಳೇ ಲಕ್ಷ್ಮಿ - ಎಂಬಿದು ಸಿದ್ಧವಾಯಿತು'- ಎಂದು ಭಾವಿಸುವಂತಾಗುತ್ತದೆ. ಇದು ಸಾಮಾನ್ಯಾರ್ಥದಲ್ಲಿ ಸರಿ. ಆದರೆ ಆಂತರಿಕಾರ್ಥದಲ್ಲಿ ನೋಡಿದರೆ ಒಂದು ದೇವತೆಯನ್ನು ಕೇವಲ ಲೋಹಮಯವಾಗಿ ವರ್ಣಿಸುವದು ಹೇಗೆ ಸರಿ? ದೇವತೆ ಎಂದರೆ ಚೇತನಸ್ವರೂಪಳಾಗಿರಬೇಕಲ್ಲವೆ? ಎಂದು ಸಂಶಯವಾಗಬಹುದು. ನಿಜವೇನೆಂದರೆ : ಚಿನ್ನಬೆಳ್ಳಿಗಳೆರಡನ್ನೂ ಅವುಗಳ ಸ್ವಭಾವಾನುಗುಣವಾಗಿ ಇಲ್ಲಿ ಸತ್ತ್ವಗುಣಕ್ಕೆ ಪ್ರತಿನಿಧಿಯಾಗಿ ಸ್ವೀಕರಿಸಲಾಗಿದೆ. ಆದ್ದರಿಂದ ದೇವಿಯು

ಬೆಳ್ಳಿಯಂತೆ ಪರಿಶುದ್ಧಳೂ ಸಾತ್ತ್ವಿಕಳೂ ಆಗಿರುತ್ತಾಳೆ. ಆಕೆಯ ಶರೀರವು ಪ್ರಾಕೃತವಲ್ಲ. ಅದು ಕೇವಲ ತೇಜೋಮಯವು. ಅದನ್ನು ಹಿರಣ್ಮಯೀ - ಎಂದು ಕರೆಯಲಾಗಿದೆ. ಹೀಗೆ ದೇವಿಯು ಪರಮಸಾತ್ತ್ವಿಕಳೂ ತೇಜೋಮಯಳೂ ಆಗಿದ್ದು ಯಾವಾಗಲೂ ವಿಷ್ಣುವಿನೊಡನೆಯೇ ಕೂಡಿಕೊಂಡಿರುವಳು. ಆ ಭಗವಂತನನ್ನು 'ಲಕ್ಷ್ಮೀನಾರಾಯಣ'ನೆಂದು ಶ್ರೀದೇವಿಯ ಹೆಸರಿನಿಂದ ಆರಂಭಿಸಿಯೇ ಕರೆಯಲಾಗಿದೆ. ಆತನ ಸಾತ್ತ್ವಿಕಶಕ್ತಿಯೇ - ಕಾಂತಿಯೇ, ಮಹಾಲಕ್ಷ್ಮೀಯು - ಎಂದಭಿಪ್ರಾಯ. ವ್ಯವಹಾರದಲ್ಲಿ ಚಿನ್ನವು ಬಹಳ ಬೆಲೆಬಾಳುವ ವಸ್ತುವಾಗಿದ್ದು ಮಾನವನಿಗೆ ಅದರ ವ್ಯಾಮೋಹವು ಅನಾದಿಕಾಲದಿಂದಲೂ ಇದ್ದುಕೊಂಡಿರುವದರಿಂದ ಆ ಚಿನ್ನವನ್ನೇ ಲಕ್ಷ್ಮೀಯೆಂದು ಉಪಾಸನೆಮಾಡಿದರೆ ವ್ಯಾಮೋಹದಿಂದ ಬಿಡುಗಡೆಯಾದೀತು - ಎಂದು ಭಾವಿಸಿ ಶ್ರೀದೇವಿಯ ಸ್ವರೂಪವನ್ನು ಹೀಗೆ ವರ್ಣಿಸಿರುತ್ತದೆ. ಹಾಗಿಲ್ಲದೆ ಚಿನ್ನವನ್ನು ಕೇವಲ ಜಡವಸ್ತುವಾಗಿ ಚಿಂತಿಸಿ ಮುಚ್ಚಿಟ್ಟುಕೊಂಡಲ್ಲಿ ಕಾಮಕ್ರೋಧಗಳಿಂದಲೇ ಮಾನವನು ಕಡೆಯವರೆಗೂ ಸಂಕಟಪಡುತ್ತಾ ದೇಹತ್ಯಾಗಸಮಯದಲ್ಲಿಯಾದರೂ ಎಲ್ಲವನ್ನೂ ಬಿಟ್ಟು ತೆರಳಲೇಬೇಕಾಗುವದು. ಲಕ್ಷ್ಮೀಯ ಅನುಗ್ರಹವಂತೂ ದೊರಕಲಾರದು. ಆದ್ದರಿಂದ ಸುವರ್ಣದ ನೆಪದಿಂದ ಶ್ರೀಯನ್ನು ಉಪಾಸನೆ ಮಾಡಬೇಕೆಂಬುದೇ ಈ ಮಂತ್ರದ ಅಭಿಪ್ರಾಯವೆಂದು ಊಹಿಸಬಹುದಾಗಿದೆ.

***

## ೨. ಶ್ರಿಯಂ ದೇವೀಮುಪಹ್ವಯೇ

ಶ್ರೀಸೂಕ್ತದ ಮಂತ್ರಗಳ ಅರ್ಥವನ್ನು ವಿಚಾರಮಾಡಲು ಪ್ರಾರಂಭಿಸಿ ಮೊದಲನೆಯ ಮಂತ್ರವನ್ನು ಅನುಸಂಧಾನಮಾಡಿದ್ದಾಗಿದೆ. ಈಗ ಎರಡನೆಯ ಋಕ್ಕನ್ನು ನೋಡೋಣ :

**ಓಂ ॥ ತಾಂ ಮ ಆವಹ ಜಾತವೇದೋ ಲಕ್ಷ್ಮೀಮನಪಗಾಮಿನೀಮ್**
**ಯಸ್ಯಾಂ ಹಿರಣ್ಯಂ ವಿಂದೇಯಂ ಗಾಮಶ್ವಂ ಪುರುಷಾನಹಮ್ ॥ ೨ ॥**

**'ಯಾವಾಗಲೂ ಬಿಟ್ಟಗಲದೆ ಇರುವಂಥ ಆ ಲಕ್ಷ್ಮೀದೇವಿಯನ್ನು ಎಲೈ ಜಾತವೇದನೆ, ನನಗೋಸ್ಕರವಾಗಿ ಕರೆಯುವವನಾಗು. ಏಕೆಂದರೆ ಆಕೆಯು ಪ್ರಸನ್ನಳಾಗಲಾಗಿ ನಾನು ಚಿನ್ನ, ಗೋವು, ಕುದುರೆ, ಸೇವಕರುಗಳನ್ನು ಪಡೆಯುವವನಾಗುವೆನು.'**

ಈ ಮಂತ್ರದಲ್ಲಿ ಲಕ್ಷ್ಮಿಯು ನಮ್ಮನ್ನು ಬಿಟ್ಟಗಲದೆ ಯಾವಾಗಲೂ ಇರುವ ಗುಣವುಳ್ಳವಳಾಗಿದ್ದುಕೊಂಡು ಧನಕನಕಾದಿಗಳನ್ನೂ ಕೊಡುತ್ತಿರುವಂತಾಗಬೇಕು - ಎಂದು ಪ್ರಾರ್ಥಿಸಲಾಗಿದೆ. ಲಕ್ಷ್ಮಿಯು ಯಾರಲ್ಲಿಯೂ ಶಾಶ್ವತಳಲ್ಲ - ಎಂಬಿದು ಪ್ರಸಿದ್ಧವು. ಆದರೆ ಇದು ಸರಿ ಎಂದು ಹೇಳಲಾಗದು. ಏಕೆಂದರೆ ಅವಳು ಯಾರನ್ನು ಬಿಟ್ಟಗಲುವಳೋ ಅವರಲ್ಲೇ ತಪ್ಪುಗಳು ಕಂಡುಬರುತ್ತವೆ. ಉದಾಹರಣೆಗೆ : ರಾವಣ - ದುರ್ಯೋಧನಾದಿಗಳನ್ನು ಆಕೆ ಅಗಲಿದಾಗ ಅವರುಗಳ ಕೆಟ್ಟ ನಡೆನುಡಿಗಳೇ ಆಕೆಯು ಅಗಲಲು ಕಾರಣವಾಯಿತು. ಬಲಿರಾಜನೇನೋ ಸತ್ಕರ್ಮಪರನಾಗಿದ್ದರೂ ತ್ರೈಲೋಕ್ಯಲಕ್ಷ್ಮಿಯು ಅವನನ್ನು ಬಿಟ್ಟದ್ದಕ್ಕೆ ಕಾರಣವೆಂದರೆ ಅವನ ಅತಿಯಾದ ದಾನವು. 'ಅತಿ ಸರ್ವತ್ರ ವರ್ಜಯೇತ್' ಎಂಬಿದನ್ನು ಅವನು ಗಮನಿಸಲಿಲ್ಲ. ಜೊತೆಗೆ ಗುರುಗಳ ಶಾಪಕ್ಕೂ ಗುರಿಯಾಗಿದ್ದನು. ಹೀಗೆ ಲಕ್ಷ್ಮಿಯು ಅಗಲುವದಕ್ಕೆ ಏನಾದರೊಂದು ಸನ್ನಿವೇಶವು ಇದ್ದೇ ಇರುವದು. ಆದ್ದರಿಂದ ಆಕೆಯು ಬಿಟ್ಟಗಲದೆ ಇರಬೇಕಾದರೆ ಅವಳಿಗೆ ಅಪಚಾರವಾಗುವಂಥ ಯಾವ ಕೆಟ್ಟ ಆಚರಣೆಗಳನ್ನೂ ನಾವು ಮಾಡಬಾರದು. ಮಾನವನಿಗೆ ಇದೇ ಬಹಳ ಕಷ್ಟಸಾಧ್ಯವಾಗಿರುತ್ತದೆ. ಏಕೆಂದರೆ ಹಣವುಳ್ಳವನಲ್ಲಿ ದುರ್ಗುಣ, ದುರಾಚಾರಗಳು ಬೇಡವೆಂದರೂ ಮನೆಮಾಡಿಕೊಂಡುಬಿಡುವವು. ಅದಕ್ಕಾಗಿಯೇ ಇಲ್ಲಿ ಎಚ್ಚರಿಸಿ ಅನಪಗಾಮಿನಿಯಾದ ಲಕ್ಷ್ಮಿಯನ್ನು ಕರೆಯುವಂತೆ ಜಾತವೇದನನ್ನು ಕೇಳಿಕೊಂಡಿದೆ. ಜಾತವೇದಾಗ್ನಿಯು ನಮಗೂ ಲಕ್ಷ್ಮಿಗೂ ಮಧ್ಯಸ್ಥನಾದರೆ ನಮ್ಮಲ್ಲಿ ಆಕೆಯು ಶಾಶ್ವತವಾಗಿ ಉಳಿಯುತ್ತಾಳೆ. ಹೇಗೆಂದರೆ : ಅಗ್ನಿದೇವನು ನಮಗೆ ಪೂಜ್ಯನಾದಾಗ ಸತ್ಕಾರ್ಯಗಳನ್ನೇ ಆತನು ಪ್ರೇರಿಸುವನು.

ದೇವತಾರಾಧನೆಗಳೇ ನಮ್ಮಲ್ಲಿ ನಡೆಯುವವು. ನಮ್ಮ ಕರ್ಮಗಳು ಯಜ್ಞರೂಪವಾಗಿಯೇ ನಡೆಯುತ್ತಿದ್ದರೆ ಪಾಪಕರ್ಮಗಳಿಗಾಗಲೀ ಪಾಪಾಲೋಚನೆಗಳಿಗಾಗಲಿ ಅವಕಾಶವೇ ಇಲ್ಲವಾಗಿ ಲಕ್ಷ್ಮಿಯು ಕುಪಿತಳಾಗುವ ಸನ್ನಿವೇಶವು ಬರಲಾರದು. ದೇವತೆಗಳನ್ನೇ ಆರಾಧನೆಮಾಡುತ್ತಿದ್ದರೆ ಆ ದೇವತೆಗಳು ಸಂತುಷ್ಟರಾಗಿ ನಮಗೆ ಪುತ್ರಪೌತ್ರಧನಧಾನ್ಯಗಳನ್ನು ಮಳೆಗರೆಯುವರು. ಆ ಮೂಲಕ ಲಕ್ಷ್ಮಿಯು ಪ್ರಸನ್ನಳಾಗಿಯೇ ಇರುವಳು. ಹೀಗೆ ಆಗರ್ಭಶ್ರೀಮಂತರಾಗಿ ಲಕ್ಷ್ಮೀಪುತ್ರರಾಗಿಯೇ ಬಾಳುತ್ತಾ ಕೀರ್ತಿಯನ್ನೂ ಸುಖವನ್ನೂ ನಾವು ಪಡೆಯಬಹುದಾಗುವದು. ಇಂಥ ಅನಪಗಾಮಿನಿಯಾದ ಲಕ್ಷ್ಮಿಯನ್ನು ಜಾತವೇದನು ನಮಗಾಗಿ ಆಹ್ವಾನಿಸಿದಲ್ಲಿ ನಾವು ಎಲ್ಲಾ ವಿಧವಾದ ಲೌಕಿಕಸಂಪತ್ತುಗಳಿಂದಲೂ ಕೂಡಿದವರಾಗಿ ಸುಖವಾಗಿ ಬಾಳಬಹುದಾಗಿದೆ. ಚಿನ್ನ, ಗೋವುಗಳು, ದಾಸದಾಸಿಯರು, ಕುದುರೆಗಳೇ ಮುಂತಾದ ಎಲ್ಲಾ ಭೋಗಸಾಮಗ್ರಿಗಳನ್ನೂ ನಾನು ಪಡೆಯುವಂತಾಗಲಿ! ಎಂದು ಕೇಳಿಕೊಂಡಿದೆ. ಹಣವಿದ್ದರೆ ಈಗಿನ ಕಾಲಕ್ಕೆ ತಕ್ಕಂಥ ಭೋಗಸಾಮಗ್ರಿಗಳನ್ನೂ ಹೊಂದಬಹುದಲ್ಲವೆ? ಆದ್ದರಿಂದ ಲಕ್ಷ್ಮೀಪ್ರಾರ್ಥನೆಯು ಎಲ್ಲಾ ಕಾಲಕ್ಕೂ ಅವಶ್ಯವೆಂದೇ ಆಗುತ್ತದೆ.

ಈಗ ಮೂರನೆಯ ಮಂತ್ರವನ್ನು ನೋಡೋಣ :

**ಓಂ ॥ ಅಶ್ವಪೂರ್ವಾಂ ರಥಮಧ್ಯಾಂ ಹಸ್ತಿನಾದಪ್ರಬೋಧಿನೀಮ್ ।**
**ಶ್ರಿಯಂ ದೇವೀಮುಪಹ್ವಯೇ ಶ್ರೀರ್ಮಾ ದೇವೀಜುಷತಾಮ್ ॥ ೩ ॥**

**'ಅಶ್ವಪೂರ್ವಳೂ ರಥಮಧ್ಯಳೂ ಹಸ್ತಿನಾದಪ್ರಬೋಧಿನಿಯೂ ಆದ ಶ್ರೀದೇವಿಯನ್ನು ನಾನು ಸಮೀಪಕ್ಕೆ ಕರೆಯುತ್ತಿರುವೆನು. ಆ ಶ್ರೀದೇವಿಯು ನನ್ನನ್ನು ಸೇವಿಸುವವಳಾಗಲಿ.'**

ಈ ಮಂತ್ರದಲ್ಲಿ ಕೆಲವು ವಿಶೇಷಣಗಳಿಂದ ಶ್ರೀದೇವಿಯನ್ನು ಸ್ತುತಿಸಲಾಗಿದೆ. ಈಕೆಯು **ಅಶ್ವಪೂರ್ವಳು.** ಎಂದರೆ ಕುದುರೆಗಳನ್ನು ಮುಂದಾಗಿ ಉಳ್ಳವಳು. **ರಥಮಧ್ಯಳು;** ಮಧ್ಯಭಾಗದಲ್ಲಿ ರಥವುಳ್ಳವಳು. ಹಾಗೂ ಆನೆಗಳ ಘೀಂಕಾರದಿಂದ ಚೆನ್ನಾಗಿ ನೆನಪಾಗುವವಳು. ಆದ್ದರಿಂದ

**ಹಸ್ತಿನಾದಪ್ರಬೋಧಿನಿಯು.** ಪ್ರಕಾಶಮಾನಳಾದ್ದರಿಂದ **ದೇವಿಯು.** ಇದು ರಾಜಮಹಾರಾಜರ ಐಶ್ವರ್ಯಲಕ್ಷ್ಮಿಯನ್ನು ಕುರಿತು ವರ್ಣಿಸಲ್ಪಟ್ಟದ್ದಾಗಿದೆ. ಹಿಂದಿನ ಕಾಲಕ್ಕೆ ಐಶ್ವರ್ಯ ಎಂದರೆ ಆನೆ, ಕುದುರೆ, ಹಸುಗಳು, ಧಾನ್ಯರಾಶಿ, ಚತುರಂಗಬಲ - ಇವುಗಳನ್ನೇ ಕರೆಯುತ್ತಿದ್ದರು. ಈಗಲೂ ಸ್ವಲ್ಪಮಟ್ಟಿಗೆ ಇವು ಇದ್ದೇ ಇವೆ. ವಿಜ್ಞಾನದ ಪ್ರಭಾವದಿಂದ ಯಂತ್ರಗಳು ಹೆಚ್ಚಾಗಿ ಉತ್ಪತ್ತಿಯಾಗಿ ಪ್ರಚಾರಕ್ಕೂ ಉಪಯೋಗಕ್ಕೂ ಬಂದಿರುವದರಿಂದ ಈ ಪ್ರಾಚೀನೈಶ್ವರ್ಯವು ಈಗ ಮಾಯವಾಗುತ್ತಿದೆ. ಆದರೆ ಯಂತ್ರಸ್ಥಾವರಗಳು ಸ್ವತಃ ಚೇತನಗಳಲ್ಲ. ಅವುಗಳ ಚಲನೆಗೆ ಅಗತ್ಯವಾದ ಇಂಧನವು ಬೇಕು. ಈಗಾಗಲೇ ಇಂಧನಕೊರತೆ ಹೆಚ್ಚಾಗಿದ್ದು ಕೆಲವು ವರ್ಷಗಳ ಅನಂತರ ಇಂಧನವೆಲ್ಲ ಪೂರೈಸಿ ಹೋದರೆ ಮತ್ತೆ ಶ್ರೀಸೂಕ್ತವನ್ನೇ ಜ್ಞಾಪಿಸಿಕೊಳ್ಳಬೇಕಾಗುವದು. ಯಂತ್ರಗಳು ಮಾನವಸೃಷ್ಟಿ ; ಪ್ರಾಣಿಗಳು ದೈವಸೃಷ್ಟಿ. ಆದ್ದರಿಂದ ಪ್ರಾಣಿಗಳ ಚಲನೆಗೆ ಇಂಧನದ ಕೊರತೆ ಅಡ್ಡಿಯಾಗುವದಿಲ್ಲ. ಕೊಂಚ ತಡವಾದರೂ ಸುರಕ್ಷಿತವಾದ ಪ್ರಯಾಣ, ಮನೆಯಲ್ಲಿ ದನಕರುಗಳಿರುವಾಗ ಅವುಗಳ ಗೊಬ್ಬರದಿಂದ ಇಂಧನದ ಪೂರೈಕೆ, ಕೃಷಿಗೆ ಅಗತ್ಯವಾದ ಸಹಾಯ - ಇವುಗಳೆಲ್ಲ ಹಸು, ಕುದುರೆಗಳಿಂದ ದೊರಕುತ್ತವೆ. ಆದ್ದರಿಂದ ಯಂತ್ರಲಕ್ಷ್ಮಿಗಿಂತ ಅಶ್ವ-ಗಜ-ಗೋಲಕ್ಷ್ಮಿಯರು ಶ್ರೇಷ್ಠರೆಂದು ಬೇರೆ ಹೇಳಬೇಕಾಗಿಲ್ಲ. ಮತ್ತು ಅಚೇತನವಸ್ತುವು ಚೇತನಕ್ಕೆ ಎಂದೂ ಸರಿಸಾಟಿಯಾಗಲಾರದು. ಆದ್ದರಿಂದ ಇಲ್ಲಿ ಅಶ್ವಾದಿಗಳನ್ನು ಲಕ್ಷ್ಮೀದೇವಿಯ ವಿಭೂತಿಗಳೆಂದು ಗುರುತಿಸಲಾಗಿದೆ. ಆಕೆಯು ಅಚೇತನಕ್ಕಿಂತ ಚೇತನರೂಪದಲ್ಲಿದ್ದರೆ ಮಾನವನ ಭೋಗಕ್ಕೆ ಹೆಚ್ಚು ಉಪಯುಕ್ತಳಾಗುತ್ತಾಳೆ. ಧಾನ್ಯಾದಿಗಳನ್ನೂ ಸಸ್ಯರೂಪದಿಂದ ಚೇತನಗಳೆಂದೇ ಇಲ್ಲಿ ಗ್ರಹಿಸಬೇಕು. ಹೀಗೆ ರಾಜ್ಯಲಕ್ಷ್ಮಿಯಾಗಿರುವ ಶ್ರೀದೇವಿಯು ಕುದುರೆಗಳ ಪುರೋಗಾಮಿನಿಯಾಗಿ ರಥಗಳ ಮಧ್ಯವರ್ತಿನಿಯಾಗಿ ಆನೆಗಳ ಕಂಠಧ್ವನಿಯಿಂದ ನೆನಪಾಗುವವಳಾಗಿರುತ್ತಾಳೆ. ಆಕೆಯನ್ನು ನಾನು ಆಹ್ವಾನಿಸುವೆನು. ಅವಳು ಯಾವಾಗಲೂ ನನ್ನನ್ನು ಬಂದು ಸೇರುತ್ತಿರಲಿ - ಎಂದು ಇಲ್ಲಿ ಕೇಳಿಕೊಳ್ಳಲಾಗಿದೆ.

ಮತ್ತೊಂದು ವಿಷಯ. ಯಂತ್ರಗಳಿಂದ ನಿಬಿಡವಾಗಿ ಹೋಗಿರುವ ಆಧುನಿಕಜನಜೀವನದಲ್ಲಿ ಆರೋಗ್ಯ, ಆಯುಷ್ಯ, ಮಾನಸಿಕಶಾಂತಿ-ಮುಂತಾದವುಗಳಿಗೆ ಅವುಗಳಿಂದ ಬಹಳ ಧಕ್ಕೆಯುಂಟಾಗಿರುವದು ಈಗ ನಮಗೆ ಚೆನ್ನಾಗಿ ಅರಿವಾಗುತ್ತಿದೆ. ಅಪಘಾತಗಳಂತೂ ಕಟ್ಟಿಟ್ಟ ಬುತ್ತಿಯಾಗಿವೆ. ಜೊತೆಗೆ ಮಾನವನಿಗೆ ಆಲಸ್ಯವನ್ನೂ, ಶಾರೀರಕದೌರ್ಬಲ್ಯವನ್ನೂ ನಿರುದ್ಯೋಗವನ್ನೂ ಉಂಟುಮಾಡಿ ಅವನು ಎಲ್ಲಾ ವಿಧದಿಂದಲೂ ಪರಾಧೀನನೂ, ದರಿದ್ರನೂ ಆಗಲು ಈ ಯಂತ್ರಗಳೇ ಕಾರಣವೆಂದರೆ ತಪ್ಪಾಗಲಾರದು. ಈಗಲಾದರೂ ಇವುಗಳ ಅತಿಸೃಷ್ಟಿಯನ್ನು ತಡೆಗಟ್ಟಬೇಕು. ಈ ಯಂತ್ರಗಳು ವಾತಾವರಣವನ್ನು - ಕೂಡ ಕಲುಷಿತಗೊಳಿಸುತ್ತಿವೆ. ದೈವಸೃಷ್ಟಿಯಾದ ಪ್ರಾಣಿಗಳೋ, ಎಂದಿಗೂ ಹಾಗೆ ಆಗಲಾರವು. ಅವು ಮಾನವನೊಡನೆ ಬಾಳುತ್ತಾ ಪುಷ್ಟಿ, ತುಷ್ಟಿಗಳನ್ನುಂಟು ಮಾಡುತ್ತಾ ಭಗವಂತನ ನೆನಪನ್ನು ತರುವ ಪ್ರತಿನಿಧಿಗಳಾಗಿರುವವು. ಅವನಿಗೆ ಉದ್ಯೋಗವನ್ನೂ ಕಲ್ಪಿಸಿಕೊಡುವವು, ಈಗಲೂ ಅರಣ್ಯಗಳಲ್ಲಿ ಮರಗಳನ್ನು ಆನೆಗಳಿಂದ ಎತ್ತಿಸುವದುಂಟು. ಕುದುರೆ, ದನಗಳಂತೂ ಅತ್ಯುಪಯುಕ್ತಜೀವಿಗಳು. ಆದ್ದರಿಂದ ಇಹಪರಗಳಲ್ಲಿ ನಾವು ಹೆಚ್ಚಿನ ಸೌಖ್ಯವನ್ನು ಪಡೆಯಲು ಚೇತನವಾದ ಪ್ರಾಣಿಗಳ ರೂಪದ ಲಕ್ಷ್ಮಿಯನ್ನೇ ಅನುಸಂಧಾನಮಾಡಬೇಕು. ಆಕೆಯನ್ನೇ ಹತ್ತಿರಬರುವಂತೆ ಬಯಸಬೇಕು. ಈಗಿನ ಕಾಲಕ್ಕೆ ಯಂತ್ರಗಳ ಉಪಯೋಗವು ಅನಿವಾರ್ಯವಾಗಿದ್ದರೂ ಪ್ರಾಣಿಗಳ ಉಪಯೋಗವನ್ನು ಪೂರ ನಿರ್ಲಕ್ಷಿಸುವದು ತಪ್ಪು. ದೂರಪ್ರಯಾಣಕ್ಕೆ ತೈಲವಾಹನಗಳಿರಲಿ ; ಎರಡು ಮೈಲಿಯ ದೂರದ ಹಳ್ಳಿಗೇಕೆ ಬೇಕು? ಅಲ್ಲೆಲ್ಲ ಎತ್ತಿನಬಂಡಿಯೇ ಏಕಿರಬಾರದು ? ಬಂಡಿಯ ಪ್ರಯಾಣವು ಭೂಮಿಯ ಪರಿಚಯವನ್ನೂ ಚೆನ್ನಾಗಿ ಮಾಡಿಕೊಡುತ್ತದೆ. ಗಿಡಮರಗಳ ತಿಳಿವಳಿಕೆಗೂ ಉಪಯುಕ್ತವಾದೀತು. ವೇಗವಾದ ಚಲನೆಯುಳ್ಳ ತೈಲವಾಹನಗಳಲ್ಲಿ ಪ್ರಯಾಣಮಾಡುವದರಿಂದ ಇಂಥ ಲಾಭಗಳಿಲ್ಲವಾಗುವವು. ಹೀಗೆ ವಿಚಾರಮಾಡಿದಲ್ಲಿ ಶ್ರೀಸೂಕ್ತದ ಮಹತ್ತ್ವದ ಅರಿವಾಗುವದು.

***

# ೩. ತಾಮಿಹೋಪಹ್ವಯೇ ಶ್ರಿಯಮ್

ಶ್ರೀಸೂಕ್ತದ ನಾಲ್ಕನೆಯ ಮಂತ್ರವನ್ನು ಈಗ ವಿಚಾರಮಾಡಬೇಕಾಗಿದೆ. ಅದು ಹೀಗಿದೆ:

**ಓಂ॥ ಕಾಂ ಸೋಸ್ಮಿತಾಂ ಹಿರಣ್ಯಪ್ರಕಾರಾಮಾರ್ದ್ರಾಂ ಜ್ವಲಂತೀಂ ತೃಪ್ತಾಂ ತರ್ಪಯಂತೀಮ್ । ಪದ್ಮೇ ಸ್ಥಿತಾಂ ಪದ್ಮವರ್ಣಾಂ ತಾಮಿಹೋಪಹ್ವಯೇ ಶ್ರಿಯಮ್ ॥ ೪ ॥**

**'ವಾಙ್ಮನಸ್ಸುಗಳಿಗೆ ಅಗೋಚರಳಾದ, ಮುಗುಳುನಗೆಯಿಂದ ಕೂಡಿದ, ಚಿನ್ನದ ಆಕೃತಿಯುಳ್ಳ, ಆರ್ದ್ರಳಾದ, ಪ್ರಕಾಶಮಾನಳಾದ, ತೃಪ್ತಳಾದ, ಭಕ್ತರನ್ನು ಸಂತೋಷಗೊಳಿಸುತ್ತಿರುವ, ಪದ್ಮದಲ್ಲಿದ್ದುಕೊಂಡಿರುವ ಪದ್ಮವರ್ಣಳಾದ ಆಕೆಯನ್ನು ನಾನು ಕರೆಯುವೆನು.'**

ಈ ಮಂತ್ರದಲ್ಲಿ ಲಕ್ಷ್ಮೀದೇವಿಯ ಗುಣಸಮೂಹಗಳ ವಿವರವೂ ಪರಮಾರ್ಥವಾದ ಆಕೆಯ ನಿಜರೂಪವೂ ವರ್ಣಿಸಲ್ಪಟ್ಟಿದೆ. ಈಕೆಯು **ಸೋಸ್ಮಿತಳು** - ಎಂದರೆ ಸ್ವಲ್ಪ ಮುಗುಳುನಗೆಯಿಂದ ಕೂಡಿದ ಮುಖವುಳ್ಳವಳು. ಸಾತ್ತ್ವಿಕಳಾದ ದೇವಿಯಾದ್ದರಿಂದ ಯಾವಾಗಲೂ ಇವಳು ಶಾಂತಳೂ ಸಮಾಧಾನವುಳ್ಳವಳೂ ಆಗಿರುತ್ತಾಳೆಂದು ಮುಖಭಾವದಿಂದಲೇ ತಿಳಿದುಬರುತ್ತದೆ - ಎಂದರ್ಥ. **ಹಿರಣ್ಯಪ್ರಕಾರಳು** ಎಂಬಿದಕ್ಕೆ ಎರಡು ರೀತಿಯಿಂದ ಅರ್ಥಮಾಡಬಹುದು. ಚಿನ್ನದ ಕೋಟೆಯುಳ್ಳ ಅರಮನೆಯಲ್ಲಿ ವಾಸ ಮಾಡುವವಳು - ಎಂದು ಒಂದರ್ಥ. ಇನ್ನೊಂದರ್ಥದಲ್ಲಿ ಪ್ರಕೃಷ್ಟವಾದ ಆಕಾರವುಳ್ಳವಳು ಎಂದು ಬಿಡಿಸಿದರೆ ಚಿನ್ನದಂಥ ಉತ್ಕೃಷ್ಟವರ್ಣದ ಆಕೃತಿಯುಳ್ಳವಳು ಎಂದೂ ಅರ್ಥವಾಗುತ್ತದೆ. ಎರಡೂ ದೇವಿಗೆ ಹೊಂದುತ್ತವೆ. **ಆರ್ದ್ರಳು** - ಎಂದರೆ ಕ್ಷೀರಸಮುದ್ರದಿಂದ ಮೇಲೆದ್ದು ಬಂದವಳಾದುದರಿಂದ ತಂಪಾದ ಪ್ರಕೃತಿಯುಳ್ಳವಳು ಎಂದು ಹೇಳಬಹುದು. ಅಥವಾ ಆರಿದ್ರಾ ನಕ್ಷತ್ರದಲ್ಲಿ ಹುಟ್ಟಿದವಳು - ಎಂಬರ್ಥವನ್ನೂ ಸ್ವರವಿಶೇಷದಿಂದ ತೆಗೆಯಬಹುದು - ಎಂದು ಭಾಷ್ಯಕಾರರು ತಿಳಿಸಿದ್ದಾರೆ. ಆಗ ದೇವಿಯು ರುದ್ರನ

ಶಕ್ತಿರೂಪಳಾಗಿಯೂ ಇರುವಳು - ಎಂದು ತಿಳಿಯಬೇಕು. ಏಕೆಂದರೆ ಆರಿದ್ರಾನಕ್ಷತ್ರಕ್ಕೆ ರುದ್ರನೇ ಅಧಿದೇವತೆಯೆಂದು ವೇದಗಳಲ್ಲಿ ತಿಳಿಸಿದೆ. ಇನ್ನು **ಜ್ವಲಂತೀ** - ಎಂದರೆ ತೇಜೋಮಯಳಾಗಿದ್ದು ಯಾವಾಗಲೂ ಬೆಳಗುತ್ತಿರುವವಳು ಎಂದಭಿಪ್ರಾಯ. **ತೃಪ್ತಳು** ಎಂದರೆ ಪರಿಪೂರ್ಣಕಾಮಳು. **ತರ್ಪಯಂತೀ** ಎಂದರೆ ಭಕ್ತರಿಗೆ ಅವರವರ ಕಾಮಗಳನ್ನು ಕೊಟ್ಟು ಸಂತೋಷಗೊಳಿಸುವವಳು- ಎಂದರ್ಥ. **ಪದ್ಮದಲ್ಲಿರುವವಳು- ಪದ್ಮವರ್ಣಳು** - ಇವಿಷ್ಟು ದೇವಿಯ ಸಗುಣಸಾಕಾರಗಳ ವರ್ಣನೆಯಾಗಿರುತ್ತದೆ. ಇಂಥ ಲಕ್ಷ್ಮೀದೇವಿಯನ್ನು ನಾನು ವ್ಯಾವಹಾರಿಕವಾಗಿ - ಎಂದರೆ ನಾನು ಭಕ್ತನು, ಆಕೆಯು ಭಜನೀಯಳು - ಎಂದು ಭಾವಿಸಿ ಆಹ್ವಾನಿಸುತ್ತೇನೆ. ಆದರೆ ನಿಜವಾಗಿ ಆಕೆಯು ''ಕಾಂ'' ಎಂದರೆ ದುರ್ನಿರೂಪಳಾದ ಸ್ವರೂಪಳಾಗಿರುತ್ತಾಳೆ. ಮಾತುಮನಗಳಿಗೂ ಮೀರಿದ ಬ್ರಹ್ಮರೂಪಳಾಗಿದ್ದಾಳೆ - ಎಂದು ಈ ಮಂತ್ರದ ಅಭಿಪ್ರಾಯ.

ಈಗ ಐದನೆಯ ಮಂತ್ರವನ್ನು ನೋಡೋಣ.

**ಓಂ|| ಚಂದ್ರಾಂ ಪ್ರಭಾಸಾಂ ಯಶಸಾ ಜ್ವಲಂತೀಂ ಶ್ರಿಯಂ ಲೋಕೇ ದೇವಜುಷ್ಟಾಮುದಾರಾಮ್ । ತಾಂ ಪದ್ಮಿನೀಮೀಂ ಶರಣಂ ಪ್ರಪದ್ಯೇಽಲಕ್ಷ್ಮೀರ್ಮೇ ನಶ್ಯತಾಂ ತ್ವಾಂ ವೃಣೇ || ೫ ||**

**'ಚಂದ್ರನಂತೆ ಪ್ರಕಾಶಮಾನಳಾದ ಪ್ರಕೃಷ್ಟವಾದ ಕಾಂತಿಯುಳ್ಳ ಕೀರ್ತಿಸಂಪನ್ನಳಾದ ದೇವತೆಗಳಿಂದ ಸೇವಿತಳಾದ ಉದಾರಳಾದ ಪದ್ಮಲತಾಕಾರಳಾದ ದೇವಿಯನ್ನು ಶರಣುಹೊಂದುವೆನು. ಎಲೈ ದೇವಿಯೆ, ನನ್ನ ಬಡತನವು ನೀಗಲಿ! ನಿನ್ನನ್ನು ಬೇಡಿಕೊಳ್ಳುವೆನು.'**

ಈ ಮಂತ್ರದಲ್ಲಿ 'ಶರಣಂ ಪ್ರಪದ್ಯೇ' ಎಂಬಲ್ಲಿ 'ಶರಣಮಹಂ ಪ್ರಪದ್ಯೇ' ಎಂದು ಹೇಳುವ ವಾಡಿಕೆಯಿದೆ. ಇದು ತಪ್ಪು- ಎಂದು ಭಾಷ್ಯಕಾರರು ತಿಳಿಸಿದ್ದಾರೆ. ಇರಲಿ. ಈಗ ಮಂತ್ರಾರ್ಥವನ್ನು ಕುರಿತು ಚಿಂತಿಸೋಣ. ಇಲ್ಲಿಯೂ ದೇವಿಯನ್ನು ಹೊಗಳುವ ಕೆಲವು ವಿಶೇಷಣಗಳಿವೆ. **ಚಂದ್ರಾಂ**- ಎಂದರೆ ಚಂದ್ರನಂತೆ ಆಹ್ಲಾದಕರಳಾದ ಹಾಗೂ ಕೋಮಲಳಾದ ಎಂದರ್ಥ. **ಪ್ರಭಾಸಾಂ**-

ಪ್ರಕೃಷ್ಟವಾದ ಭಾ ಎಂದರೆ ಕಾಂತಿಯುಳ್ಳವಳು. ಕೀರ್ತಿಯಿಂದ ವಿರಾಜಮಾನಳಾಗಿರುವದೇ **ಯಶಸಾ ಜ್ವಲಂತೀಂ** - ಎಂಬಿದರ ಅಭಿಪ್ರಾಯವು. ಕೀರ್ತಿಯೆಂಬುದು ಮನುಷ್ಯನಿಗೆ ಹಣವು ದೊರೆತ ಅನಂತರ ಬೇಕೆನಿಸುವ ಒಂದು ವಸ್ತು. ಆದರೆ ಅದು ಹಣದಷ್ಟು ಸುಲಭವಾಗಿ ಸಿಗುವ ವಸ್ತುವಲ್ಲ. ಅನೇಕರು ಕೀರ್ತಿಗಾಗಿ ಹಣವನ್ನು ಖರ್ಚುಮಾಡುತ್ತಾರೆ. ಆದರೇನು? ಅವರಿಗೆ ಸಿಗುವದು ಕೀರ್ತಿಯ ಆಭಾಸಮಾತ್ರ. ಆದ್ದರಿಂದಲೇ ಲಕ್ಷ್ಮೀದೇವಿಯ ಅನುಗ್ರಹದಿಂದಲೇ ನಿಜವಾದ ಕೀರ್ತಿಯು ಸಿಗಬೇಕಾಗಿದೆ. ರಾಮನಿಗಿಂತಲೂ ರಾವಣನು ಹೆಚ್ಚಿನ ಐಶ್ವರ್ಯವಂತನಾಗಿದ್ದನು. ಆದರೆ ಪಾಪಹರವಾದ ಶಾಶ್ವತವಾದ ಕೀರ್ತಿಯು ರಾಮನಿಗೆ ಮಾತ್ರ ಲಭಿಸಿತು. ಇಂದಿಗೂ ನಾವು ರಾಮನ ನಾಮವನ್ನೇ ಕೀರ್ತನೆಮಾಡುವೆವು. ಇಂಥ ಕೀರ್ತಿಯು ಶ್ರೀದೇವಿಯ ಮಹಿಮೆಯೇ. ಹೀಗೆ ಕೀರ್ತಿಯಿಂದ ಹೊಳೆಯುತ್ತಿರುವವಳು ಲಕ್ಷ್ಮಿಯು. ಮತ್ತು ಈಕೆಯು **ದೇವಜುಷ್ಟಳು** ಎಂದರೆ ಇಂದ್ರಾದಿದೇವತೆಗಳಿಂದಲೂ ಸೇವಿಸಲ್ಪಡುವವಳು. ಲಕ್ಷ್ಮಿಯ ಉಪಾಸಕರು ದೇವತೆಗಳಲ್ಲಿಯೂ ಬಹುಮಂದಿಯಿರುತ್ತಾರೆ. ಇನ್ನು ದೇವಿಯು **ಉದಾರಳೂ** ಆಗಿದ್ದಾಳೆ. ಉದಾರತೆಯೆಂದರೆ ಬೇಡಿದವರಿಗೆ ಧಾರಾಳವಾಗಿ ಕೊಡುವದು. ಇದು ದೇವಿಯೊಬ್ಬಳಿಂದಲೇ ಸಾಧ್ಯ. ಮನುಷ್ಯರಲ್ಲಿಯೂ ಉದಾರಚರಿತರಿರುವರು. ಆದರೂ ಅವರ ಔದಾರ್ಯವು ಸೀಮಿತವಾಗಿರುವದು. ಎಲ್ಲರಿಗೂ ಸಾಕಷ್ಟು ಕೊಟ್ಟು ತೃಪ್ತಿಪಡಿಸಲು ಯಾರಿಂದಲೂ ಸಾಧ್ಯವಿಲ್ಲ. ದೇವಿಯು ಮಾತ್ರ ಅಪರಿಮಿತವಾದ ಉದಾರಶೀಲಳಾಗಿದ್ದಾಳೆ. ಭಕ್ತರಿಗೆ ಬೇಕಾದದ್ದನ್ನು ಬೇಕಾದಷ್ಟು ಆಕೆಯು ನೀಡಬಲ್ಲಳು ಎಂದರ್ಥ. ಇಂಥ, ಪದ್ಮಪುಷ್ಪಾಕಾರಳಾದ - ಎಂದರೆ ಅದರಂತೆ ಮೃದುಶರೀರಳೂ ಕೋಮಲಳೂ ಆಗಿರುವ ಶ್ರೀದೇವಿಯನ್ನು ನಾನು ಶರಣಾಗತನಾಗಿದ್ದೇನೆ- ಎಂದು ಇಲ್ಲಿ ಪ್ರಾರ್ಥಿಸಿದೆ. ಪದ್ಮಿನೀ ಮೀಂ ಎಂಬಲ್ಲಿ ಮೀಂ ಎಂಬಿದು ಅರ್ಥವಿಲ್ಲದ ಒಂದು ಅಕ್ಷರವು. ಇದನ್ನು ನಿಪಾತವೆನ್ನುವರು. ಹೀಗೆ ಶರಣಾಗತನಾದ ಭಕ್ತನು ಮತ್ತೆ ಕೇಳಿಕೊಳ್ಳುವದೇನೆಂದರೆ 'ಎಲೌ ತಾಯೆ, ನನ್ನ ಅಲಕ್ಷ್ಮಿಯು ನಾಶವಾಗಲಿ! ಹಾಗೆಂದು ನಿನ್ನನ್ನು ಬೇಡುವೆನು.'

ಇಲ್ಲಿ ಭಕ್ತನು ಶ್ರೀದೇವಿಯನ್ನು ಮೊರೆಹೊಕ್ಕು ಅಲಕ್ಷ್ಮಿಯನ್ನು ನಾಶಗೊಳಿಸುವಂತೆಯೂ ಪ್ರಾರ್ಥಿಸುತ್ತಿದ್ದಾನೆ. ಅಲಕ್ಷ್ಮಿ ಎಂದರೇನು? ಮಾನವನಲ್ಲಿ ಸಹಜವಾಗಿದ್ದುಕೊಂಡಿರುವ ದುರ್ಗುಣಗಳನ್ನೇ ಅಲಕ್ಷ್ಮಿಯೆನ್ನಬಹುದು. ಆಕೆಯಿರುವವರೆಗೆ ಲಕ್ಷ್ಮಿಯು ಕೂಡುವದಿಲ್ಲ. ಈ ಅಲಕ್ಷ್ಮಿಯು ಲಕ್ಷ್ಮಿಯಂತೆಯೇ ನಾನಾರೂಪಳಾಗಿರುತ್ತಾಳೆ. ಇವಳು ನಮ್ಮ ಶರೀರೇಂದ್ರಿಯಗಳಲ್ಲೇ ಹುಟ್ಟಿರುತ್ತಾಳೆ. ಹೀಗೆ ನಮ್ಮ ದೇಹಸಂಬಂಧಿನಿಯೇ ಆದರೂ ಅವಳು ಹಿತಳಲ್ಲ. ನಾವು ಬಾಲಕರಾಗಿರುವಾಗ ಅಲಕ್ಷ್ಮಿಯು ಹೆಚ್ಚಾಗಿ ನಿದ್ರಾರೂಪದಲ್ಲಿಯೂ ಮರೆವು, ಅಸಡ್ಡೆ, ಆಲಸ್ಯ- ಮುಂತಾದ ರೂಪದಲ್ಲಿಯೂ ಇರುತ್ತಾಳೆ. ಚಿಕ್ಕಂದಿನಿಂದಲೇ ಈ ಅಲಕ್ಷ್ಮಿಯರನ್ನು ನಾವು ದೂರಮಾಡಬೇಕು. ಯೌವನವಂತರಾದಾಗ ಸ್ತ್ರೀ ವ್ಯಾಮೋಹ, ಮೈಗಳ್ಳತನ, ಸುಳ್ಳು , ವಂಚನೆ - ಮುಂತಾದ ರೂಪದಿಂದ ಅಲಕ್ಷ್ಮಿಯು ಆವಿರ್ಭವಿಸಿಬಿಡುವಳು. ಆಗಲೂ ನಾವು ಎಚ್ಚರಿಕೆಯಿಂದಿದ್ದು ಈಕೆಯನ್ನು ಹೊರಹಾಕಬೇಕು. ಕೆಲವು ವೇಳೆ ಈಕೆಯು ದರ್ಪ, ಗರ್ವ, ದುರಭಿಮಾನ, ಸ್ವೇಚ್ಛಾಚಾರಗಳ ರೂಪದಿಂದಲೂ ಯುವಕರನ್ನು ಪೀಡಿಸುತ್ತಾಳೆ. ಇವಳ ನಿವಾರಣೆಗೆ ಶ್ರೀದೇವಿಯ ಉಪಾಸನೆಯೊಂದೇ ಮಾರ್ಗವು. ವೃದ್ಧರಾದಾಗಲೂ ಈ ಅಲಕ್ಷ್ಮಿಯು ಚಾಂಚಲ್ಯ, ಪೈಶುನ್ಯ, ಜಿಹ್ವಾ ಚಾಪಲ್ಯಾದಿಗಳ ರೂಪದಿಂದ ಕಾಡಿಸುತ್ತಾಳೆ. ಹೀಗೆ ಯಾವಾಗಲೂ ಅಲಕ್ಷ್ಮಿಯ ಕಾಟವು ಮಾನವನಿಗೆ ಇದ್ದೇ ಇದೆ. ಆದ್ದರಿಂದ ಆಯಾ ಕಾಲಕ್ಕೆ ತಕ್ಕಂತೆ ವಿದ್ಯಾಭ್ಯಾಸ, ಉದ್ಯೋಗ, ಚಟುವಟಿಕೆ, ಶ್ರದ್ಧೆ, ಪ್ರಜ್ಞೆ, ಮೇಧೆ, ತಪಸ್ಸೇ ಮುಂತಾದ ಸಾಧನಗಳಿಂದ ಲಕ್ಷ್ಮಿಯನ್ನು ಬರಮಾಡಿಕೊಂಡು ಅಲಕ್ಷ್ಮಿಯನ್ನು ಹೊರಹಾಕಬೇಕು. ಈ ಸಂದರ್ಭದಲ್ಲಿ ಪ್ರಯತ್ನವು ನಮ್ಮದು. ಫಲವು ದೇವಿಯ ಕೃಪಾಧೀನವು. ಹೀಗ ಮಹಾಲಕ್ಷ್ಮಿಯ ಉಪಾಸನೆಯನ್ನು ಬಾಲ್ಯದಿಂದಲೂ ನಾವು ಮಾಡುತ್ತಿದ್ದರೆ ಆಕೆಯು ಯಾವಾಗಲೂ ನಮ್ಮನ್ನು ನೆಮ್ಮದಿಯಾಗಿಡುತ್ತಾಳೆ. ಅಂತೂ ಇದರಿಂದ ತಿಳಿಯುವದೇನೆಂದರೆ ; ಮನುಷ್ಯನು ಕೇವಲ ಹಣವನ್ನು ಸಂಪಾದಿಸಿ ಕೂಡಿಟ್ಟಮಾತ್ರದಿಂದ ಲಕ್ಷ್ಮೀಕೃಪಾಪಾತ್ರನಾಗಲಾರನು. ಅವನು ಲಕ್ಷ್ಮಿಯ ಪೂರ್ಣಸಾಕ್ಷಾತ್ಕಾರವನ್ನು ಹೊಂದಿ ಸುಖಿಸಬೇಕಾದರೆ ಅಲಕ್ಷ್ಮಿಯನ್ನು ನಿರಾಕರಣಮಾಡಿಕೊಳ್ಳಬೇಕು. ಈ ಅಲಕ್ಷ್ಮಿಯ ವಿಷಯಕ್ಕೆ ಅಲಕ್ಷ್ಯದಿಂದ ಎಂದಿಗೂ ವರ್ತಿಸಬಾರದು - ಎಂದು ತಿಳಿಸಿದಂತಾಗಿರುತ್ತದೆ.

***

# ೪. ಉಪೈತು ಮಾಂ ದೇವಸಖಃ

ಶ್ರೀಸೂಕ್ತದ ಆರನೆಯ ಋಕ್ಕನ್ನು ಈಗ ವಿಚಾರಮಾಡೋಣ. ಅದು ಹೀಗಿದೆ:

**ಓಂ॥ ಆದಿತ್ಯವರ್ಣೇ ತಪಸೋಽಧಿಜಾತೋ ।**
**ವನಸ್ಪತಿಸ್ತವ ವೃಕ್ಷೋಽಥ ಬಿಲ್ವಃ ॥**
**ತಸ್ಯ ಫಲಾನಿ ತಪಸಾನುದಂತು ।**
**ಮಾಯಾಂತರಾಯಾಶ್ಚ ಬಾಹ್ಯಾ ಅಲಕ್ಷ್ಮೀಃ ॥ ೬ ॥**

**'ಎಲೈ ಆದಿತ್ಯವರ್ಣಳೆ, ನಿನ್ನ ತಪಸ್ಸಿನಿಂದ ಹುಟ್ಟಿದ ಬಿಲ್ವವೆಂಬ ವನಸ್ಪತಿಯ ಫಲಗಳು ನನ್ನ ಒಳಗಿನ ಹಾಗೂ ಹೊರಗಿನ ಅಲಕ್ಷ್ಮಿಯನ್ನು ನಿವಾರಣೆಮಾಡಲಿ.'**

ಈ ಮಂತ್ರದಲ್ಲಿ ಲಕ್ಷ್ಮಿಯನ್ನು ಸೂರ್ಯನಂತೆ ಹೊಂಬಣ್ಣದ ಹಾಗೆ ಕಾಂತಿಯುಕ್ತವಾದ ಸ್ವಚ್ಛವಾದ ವರ್ಣದವಳೆಂದು ಸಂಬೋಧಿಸಲಾಗಿದೆ ಇಂಥ ಮಹಾಲಕ್ಷ್ಮಿಯೆ, ನಿನ್ನ ತಪಸ್ಸಿನ ಫಲವಾಗಿ ಒಂದು ವನಸ್ಪತಿಯು ನಿನ್ನ ಕೈಯಲ್ಲಿಯೇ ಹುಟ್ಟಿತಲ್ಲವೆ? ಅದು - ಎಂದರ್ಥ. ವನಸ್ಪತಿ ಎಂದರೆ ಹೂವು ಬಿಡದೆ ಹಣ್ಣಾಗುವ ಮರಗಳು ಎಂದಭಿಪ್ರಾಯ. ಬಿಲ್ವವು ಅಂಥ ವನಸ್ಪತಿಯಾಗಿರುತ್ತದೆ. ಈ ಬಿಲ್ವವೃಕ್ಷಕ್ಕೆ ಶ್ರೀವೃಕ್ಷವೆಂದೇ ಹೆಸರಿರುತ್ತದೆ. ಇದು ಮಹಾಲಕ್ಷ್ಮಿಯ ಕರಕಮಲದಿಂದ ಹುಟ್ಟಿರುತ್ತದೆ - ಎಂದು ಪುರಾಣದಲ್ಲಿ ತಿಳಿಸಿರುತ್ತದೆ. ಇಂಥ ಪವಿತ್ರವಾದ ಬಿಲ್ವಫಲವು ನಿನ್ನ ಅನುಗ್ರಹದಿಂದ ಒಳಗಿನ ಇಂದ್ರಿಯಗಳಿಗೆ ಸಂಬಂಧಪಟ್ಟ ಅಜ್ಞಾನವನ್ನೂ ಅದರ ಕಾರ್ಯಗಳನ್ನೂ ಮತ್ತು ಹೊರಗಿನ ಇಂದ್ರಿಯಗಳಿಗೆ ಸಂಬಂಧಿಸಿದ ಅಲಕ್ಷ್ಮಿಯನ್ನೂ ನಾಶಗೊಳಿಸಲಿ- ಎಂದು ಇಲ್ಲಿ ಪ್ರಾರ್ಥಿಸಲಾಗಿದೆ. ಇಂದ್ರಿಯಗಳಲ್ಲಿ ಹೊಕ್ಕಿರುವ ಅಲಕ್ಷ್ಮಿಯು ಯಾವದೆಂಬುದನ್ನು ವಿಚಾರಮಾಡಬೇಕು. ಇವುಗಳನ್ನು ಸ್ಮೃತಿಗಳ ಆಚಾರಕಾಂಡಗಳಲ್ಲಿ ತಿಳಿಸಿರುತ್ತದೆ. ಸುಮ್ಮನೆ ಕೈಕಾಲುಗಳನ್ನೂ ತೊಡೆಗಳನ್ನೂ ಅಲ್ಲಾಡಿಸುವದು, ಒದರುವದು, ಪೂಜ್ಯ ವಸ್ತುಗಳೆಡೆಗೆ ಕಾಲುಗಳನ್ನು ಚಾಚುವದು, ಹಲ್ಲುಕಿರಿಯುವದು, ನಗುವದು - ಮುಂತಾದ ಅಂಗಚೇಷ್ಟೆಗಳು

ವಿನಾಕಾರಣವಾಗಿ ಸಂಭವಿಸಿದಲ್ಲಿ ಅವು ಅಲಕ್ಷ್ಮಿಯೆನಿಸುತ್ತವೆ. ಹಾಗೂ ಗೌರವಕ್ಕೂ ಹಾನಿಯನ್ನು ತರುತ್ತವೆ. ಅನೇಕರಿಗೆ ಇದು ತಿಳಿಯುವದೇ ಇಲ್ಲ. ಗಾಂಭೀರ್ಯಕ್ಕೆ ವಿರುದ್ಧವಾದ ಈ ದೋಷಗಳು ಬಹಿರಿಂದ್ರಿಯಗಳಲ್ಲಿ ಅಡಗಿರುವ ಅಲಕ್ಷ್ಮಿಯು - ಎನಿಸುವದು. ಇನ್ನು ಅಂತಃಕರಣದಲ್ಲಿ ಸೇರಿರುವ ಮೌಢ್ಯ, ಆಲಸ್ಯ, ಅವಿದ್ಯೆ - ಮುಂತಾದವು ಆಂತರಿಕ ಅಲಕ್ಷ್ಮಿಯರಾಗಿರುವರು. ಇವರನ್ನೆಲ್ಲ ಮಾನವನು ಗೆಲ್ಲಬೇಕಾದರೆ ಮಹಾಲಕ್ಷ್ಮಿಯ ಪ್ರಸಾದವು ಬೇಕು. ಆಕೆಯು ಅಂಗೈಯಲ್ಲಿ ಧರಿಸಿರುವ ಬಿಲ್ವವೆಂಬುದು ಜ್ಞಾನಕ್ಕೆ ಪ್ರತಿನಿಧಿಯಾಗಿದೆ. ಅದನ್ನು ಶ್ರೀಫಲವೆನ್ನುವರು. ಈ ಶ್ರೀಫಲವು ಜ್ಞಾನರೂಪದಿಂದ ನಮಗೆ ದೇವಿಯ ಪ್ರಸಾದವಾಗಿ ದೊರಕಿದಲ್ಲಿ ಅಲಕ್ಷ್ಮಿಯರೆಲ್ಲ ನಾಶವಾಗುವರು. ಅದಕ್ಕೆ ತಪಸ್ಸು ಬೇಕು. ದೇವಿಯು ಕೂಡ ತಾನೂ ತಪಸ್ಸುಮಾಡಿಯೇ ಸದ್ಗುಣಗಳನ್ನೂ ಜ್ಞಾನವನ್ನೂ ಪಡೆದುಕೊಂಡಿರುತ್ತಾಳೆ. ಅವಳನ್ನು ನಾವು ಪ್ರಾರ್ಥಿಸಿಕೊಂಡಲ್ಲಿ ತನ್ನ ಭಕ್ತರಿಗೂ ಆಕೆಯು ಅದೇ ತಪಃಫಲವಾದ ಜ್ಞಾನಶಕ್ತಿಯಿಂದ ಅವಿದ್ಯಾಬೀಜಗಳನ್ನು ಕಳೆಯುತ್ತಾಳೆ - ಎಂದಭಿಪ್ರಾಯ.

ಇಲ್ಲಿ ಬಿಲ್ವವೃಕ್ಷದ ಪ್ರಸ್ತಾಪವಿದೆ. ಈಗಲೂ ಬಿಲ್ವಪತ್ರೆಮರಗಳನ್ನು ಲಕ್ಷ್ಮಿಯ ವಾಸಸ್ಥಾನವೆಂದು ಗೌರವಿಸುತ್ತಾರೆ. ಬಿಲ್ವವೃಕ್ಷಗಳು ಎಲ್ಲಾ ಕಡೆಗಳಲ್ಲಿಯೂ ಬೆಳೆಯುವದಿಲ್ಲ. ಅವು ಬೆಳೆದ ಭೂಮಿ ತಪೋಭೂಮಿಯೆನಿಸುತ್ತದೆ. ಬಿಲ್ವವೃಕ್ಷದ ಕೆಳಗೆ ಕುಳಿತು ಲಕ್ಷ್ಮೀಮಂತ್ರವನ್ನು ಪುರಶ್ಚರಣೆಮಾಡಿದರೆ ಸಿದ್ಧಿಯಾಗುವದೆಂತ ನಂಬಿಕೆಯಿದೆ. ಬಿಲ್ವಮರಗಳನ್ನು ಕಡಿಯಬಾರದೆಂದು ಶಿಷ್ಟಾಚಾರವಿದೆ. ಅವುಗಳನ್ನು ಕಡಿಯುವದು ಅಪರಾಧವೆನಿಸುತ್ತದೆ. ಆದರೂ ಕೆಲವು ಅಜ್ಞಜನರು ಇಂಥ ಕೆಲಸವನ್ನು ಮಾಡುತ್ತಾರೆ. ಅಂಥವರಿಗೆ ಅಲಕ್ಷ್ಮಿಯೇ ಅಂಟಿಕೊಳ್ಳುವದು ಖಂಡಿತ . ಇರಲಿ. ಬಿಲ್ವವು ಲಕ್ಷ್ಮೀದೇವಿಯ ಪ್ರತಿನಿಧಿಯಾಗಿದೆ. ತುಳಸಿ, ನೆಲ್ಲಿ, ಬಿಲ್ವ - ಈ ಮೂರು ಪಾರ್ವತಿ, ಸರಸ್ವತಿ, ಲಕ್ಷ್ಮೀಸ್ವರೂಪರಾದ ದೇವತೆಗಳ ಅಂಶವೆಂದೂ ಅವುಗಳ ಮಾಹಾತ್ಮ್ಯೆಯು ಅಪಾರವಾದುದೆಂದೂ ಪುರಾಣಗಳಲ್ಲಿ ಕಥೆಯಿರುತ್ತದೆ. ಹೀಗೆ ಶ್ರೀವೃಕ್ಷವು ಪೂಜ್ಯವಾಗಿದ್ದು ಬಿಲ್ವಪತ್ರೆಗಳಂತೂ ಶಿವನ ಪೂಜೆಗೆ ಪರಮಪವಿತ್ರವಾದ ವಸ್ತುವಾಗಿರುವವು. ಅದರ ಮೂರು ಎಲೆಗಳು ತ್ರಿಗುಣಗಳನ್ನು ಸೂಚಿಸುವವು.

ಬಿಲ್ವಪತ್ರೆ ಸಮರ್ಪಣೆಯು ನಮ್ಮ ತ್ರಿಗುಣಗಳನ್ನೂ ಪರಮೇಶ್ವರನಿಗೆ ಸಮರ್ಪಿಸುವದರ ಪ್ರತೀಕವಾಗಿದೆ. ಅಂತೂ ಶೈವ-ವೈಷ್ಣವ ಸಂಪ್ರದಾಯದವರಿಬ್ಬರಿಗೂ ಶ್ರೀವೃಕ್ಷವು ಪೂಜ್ಯವಾಗಿದೆ - ಎನ್ನಬಹುದು.

ಈಗ ಏಳನೆಯ ಮಂತ್ರವನ್ನು ನೋಡೋಣ :

**ಓಂ॥ ಉಪೈತು ಮಾಂ ದೇವಸಖಃ ಕೀರ್ತಿಶ್ಚ ಮಣಿನಾ ಸಹ ।**
**ಪ್ರಾದುರ್ಭೂತೋಽಸ್ಮಿ ರಾಷ್ಟ್ರೇಽಸ್ಮಿನ್ ಕೀರ್ತಿಮೃದ್ಧಿಂ ದದಾತು ಮೇ ॥ ೭ ॥**

**'ಮಹಾದೇವನ ಸಖನಾದ ಕುಬೇರನು ಕೀರ್ತಿ, ಮಣಿಭದ್ರನೊಡನೆ ನನ್ನಲ್ಲಿಗೆ ಬರುವವನಾಗಲಿ ; ನಾನು ಈ ರಾಷ್ಟ್ರದಲ್ಲಿ ಹುಟ್ಟಿರುವೆನು. ನನಗೆ (ಈ ದೇವತೆಗಳು) ಕೀರ್ತಿಯನ್ನೂ ಅಭಿವೃದ್ಧಿಯನ್ನೂ ಉಂಟುಮಾಡಲಿ !'**

ಈ ಮಂತ್ರದಲ್ಲಿ ಇಡಿಯ ಜಗತ್ತಿನಲ್ಲಿಯೇ ಅಪರಿಮಿತಧನಕನಾದಿಪತಿಯಾದ, ನವನಿಧಿಗಳೊಡೆಯನಾದ, ಮಹಾದೇವನ ಅತ್ಯಂತ ಸ್ನೇಹಿತನಾದ ಕುಬೇರನನ್ನು ಕುರಿತ ಪ್ರಾರ್ಥನೆಯಿದೆ. ಮಹಾವಿಷ್ಣುವು ಲಕ್ಷ್ಮೀಪತಿಯು. ಕುಬೇರನು ಲಕ್ಷ್ಮೀಪುತ್ರನು. ಪುತ್ರನಿಗೆ ತಾಯಿಯನ್ನು ಕಾಪಾಡುವದು ಮಾತ್ರ ಕರ್ತವ್ಯವಾಗಿರುತ್ತದೆ. ಆದರೆ ಪತಿಯಾದವನಿಗೆ ಲಕ್ಷ್ಮಿಯನ್ನು ಅನುಭವಿಸುವ ಅಧಿಕಾರವೂ ಇರುತ್ತದೆ. ಮಾನವರಲ್ಲಿ ಬಹುಜನ ಶ್ರೀಮಂತರು ಲಕ್ಷ್ಮೀಪುತ್ರರು ಮಾತ್ರ. ಅವರಿಗ ಹಣವನ್ನು ಕಾಪಾಡುವದೊಂದೇ ತಿಳಿದಿರುತ್ತದೆ. ಆದರೆ ಅಂಥ ಶ್ರೀಮಂತರಲ್ಲಿ ಸಾವಿರಕ್ಕೊಬ್ಬ ವಿಷ್ಣುವಿನ ಅಂಶದವನಿರುತ್ತಾನೆ. ಅವನು ಮಾತ್ರ ಲಕ್ಷ್ಮೀಪತಿಯಾಗಿದ್ದು ಭೋಗಿಸುತ್ತಾ ಇತರರಿಗೂ ಅನುಕೂಲಮಾಡಿಕೊಡುತ್ತಾನೆ. ಕುಬೇರನ ಅಂಶವು ಮಾತ್ರ ಇದ್ದವರು ಜಿಪುಣರೆನಿಸುತ್ತಾರೆ. ಮಹಾವಿಷ್ಣುವಿನ ಅಂಶವುಳ್ಳವರು ಉದಾರಿಗಳೂ ದಾನಧರ್ಮಶೀಲರೂ ಪರೋಪಕಾರಿಗಳೂ ಆಗಿರುತ್ತಾರೆ. ಅಂಥವರೇ ಕೀರ್ತಿಶಾಲಿಗಳೂ ಆಗಬಲ್ಲರು. ಆದ್ದರಿಂದ ನಾವು ಮೊದಲು ಕುಬೇರನಾಗುವದು ಸರಿಯಾದರೂ ಅನಂತರ ವಿಷ್ಣುವೂ ಆಗಲು ಪ್ರಯತ್ನಿಸಬೇಕು. ಹೀಗೆ ಕುಬೇರನಿಗೂ ವಿಷ್ಣುವಿಗೂ ಅಂತರವಿದ್ದು ಲಕ್ಷ್ಮಿಯು

ಇಬ್ಬರಲ್ಲಿಯೂ ನೆಲಸಿರುತ್ತಾಳೆ. ಇಂಥ ದೇವಸಖನಾದ ಕುಬೇರನು ಮೊದಲು ನಮ್ಮ ಕಡೆಗೆ ಬರಲಿ - ಎಂದರೆ ಆತನ ದರ್ಶನ, ಸಂಗಗಳ ಸಲುವಾಗಿ ನಾವು ಧನವಂತರಾಗೋಣ - ಎಂದಭಿಪ್ರಾಯ. ಕುಬೇರನು ಬರುವಾಗ ಸಪರಿವಾರನಾಗಿಯೇ ಬರಲಿ - ಎಂದೂ ಪ್ರಾರ್ಥನೆಯನ್ನು ಮುಂದುವರಿಸಲಾಗಿದೆ. ಅವನ ಪರಿವಾರದವರಲ್ಲಿ ದಕ್ಷನ ಮಗಳಾದ **ಕೀರ್ತಿ**ಯೆಂಬವಳೂ **ಮಣಿಭದ್ರ**ನೆಂಬ ಕೋಶಾಧ್ಯಕ್ಷ (Treasurer)ನೂ ಮುಖ್ಯರು. ಇವರುಗಳೊಡಗೂಡಿಯೇ ಕುಬೇರನು ಬರಲಿ - ಎಂದು ಕೇಳಿಕೊಂಡಿದೆ.

ಕುಬೇರನಂಥ ದೇವತೆಯೂ ಧನಪತಿಯೂ ಎಲ್ಲೆಡೆಗೂ ಬರಲಾರರು. ಅಥವಾ ಅವರು ಬಂದರೆ ಹಾಗೆಯೇ ಏನೂ ವರವನ್ನು ಕೊಡದೆ ಹೋಗಲಾರರು. ಉದಾಹರಣೆಗೆ : ನಮ್ಮ ಭಾರತದೇಶಕ್ಕೆ ಬರುವಂಥ ವಿದೇಶಿಗಣ್ಯರು ದೆಹಲಿಗೆ ಬರುತ್ತಾರೆಯೇ ಹೊರತು ಸಣ್ಣಪುಟ್ಟ ಊರುಗಳಿಗೆ ಬರುವದಿಲ್ಲ. ಹಾಗೇನಾರೂ ಬಂದರೆ ಆ ಊರಿನಲ್ಲಿ ಏನೋ ಅಭಿವೃದ್ಧಿ, ಬದಲಾವಣೆಗಳು ಸಂಭವಿಸುತ್ತವೆ, ಅಲ್ಲವೆ? ಹಾಗೆಯೇ ಕುಬೇರನು ನಮ್ಮಲ್ಲಿಗೆ ಬರಲಿರುವದಾದರೆ ನಾನು ಈ ರಾಷ್ಟ್ರದಲ್ಲಿಯೇ ಹುಟ್ಟುವವನಾಗಲಿ! ಏಕೆಂದರೆ ಕುಬೇರನ ಆಗಮನದಿಂದ ಸಂಪತ್‌ಸಮೃದ್ಧಿಯುಂಟಾಗಲಿದ್ದು ತಾನು ಶ್ರೀಮಂತನೇ ಆಗಬಹುದೆಂತ ಭಕ್ತನ ಅಭಿಪ್ರಾಯವಿದೆ. ಕೀರ್ತಿಯನ್ನೂ, ಪುರೋಭಿವೃದ್ಧಿಯನ್ನೂ ಬಯಸುತ್ತಿರುವ ತನಗೆ ಆ ಪರಿವಾರಸಹಿತನಾದ ಕುಬೇರನು ಇದೇ ಜನ್ಮಭೂಮಿಯಲ್ಲಿ ಎಲ್ಲ ಸಂಪತ್ತನ್ನೂ ಮಳೆಗರೆಯಲೆಂದು ಪ್ರಾರ್ಥಿಸಿದೆ. ಒಂದು ದೇಶದಲ್ಲಿ ಐಶ್ವರ್ಯವಂತರು ಹೆಚ್ಚಿದಂತೆಲ್ಲ - ಅದು ಬಲಿಷ್ಠವಾಗುತ್ತದೆ. ಆದ್ದರಿಂದ ಐಶ್ವರ್ಯವಂತರ ಧನವನ್ನು ಬಡವರಿಗೆ ಹಂಚಿ ಎಲ್ಲರನ್ನೂ ಬಡವರನ್ನಾಗಿ ಮಾಡುವದಕ್ಕಿಂತ ಬಡವರನ್ನೇ ಐಶ್ವರ್ಯವಂತರನ್ನಾಗಿ ಮಾಡುವಂಥ ಯೋಜನೆಗಳನ್ನು ಕೈಗೊಳ್ಳಬೇಕು. ಇದಕ್ಕೆ ಧನಿಕರೂ ಬೆಂಬಲವನ್ನೂ ನೀಡಬೇಕು. ತನ್ನಂತೆಯೇ ಮತ್ತೊಬ್ಬನೂ ಧನಿಕನಾಗಲಿ! ಎಂಬ ಉದಾರಬುದ್ಧಿಯು ಶ್ರೀಮಂತರಿಗೆ ಮೂಡಿದಾಗ ಅವರು ಶ್ರೀದೇವಿಯ ಮೆಚ್ಚಿನ ಭಕ್ತರಾಗುವದರಲ್ಲಿ ಸಂಶಯವಿಲ್ಲ. ಹಾಗಾಗಲೆಂದು ಹಾರೈಸೋಣ.

***

# ೫. ಅಲಕ್ಷ್ಮೀಂ ನಾಶಯಾಮ್ಯಹಮ್

ಶ್ರೀಸೂಕ್ತದ ಎಂಟನೆಯ ಮಂತ್ರವನ್ನು ಈಗ ವಿಚಾರಮಾಡಬೇಕಾಗಿದೆ. ಅದು ಹೀಗಿದೆ:

**ಓಂ॥ ಕ್ಷುತ್ಪಿಪಾಸಾಮಲಾಂ ಜ್ಯೇಷ್ಠಾಮಲಕ್ಷ್ಮೀಂ ನಾಶಯಾಮ್ಯಹಮ್ ।**
**ಅಭೂತಿಮಸಮೃದ್ಧಿಂ ಚ ಸರ್ವಾನ್ನಿರ್ಣುದ ಮೇ ಗೃಹಾತ್ ॥೮॥**

**'ಹಸಿವು ಬಾಯಾರಿಕೆಗಳೆಂಬ ದೋಷವುಳ್ಳ ಹಿರಿಯ ಲಕ್ಷ್ಮಿಯೆನಿಸಿರುವವಳಾದ ಅಲಕ್ಷ್ಮಿಯನ್ನು ನಾನು ನಾಶಗೊಳಿಸಿರುವೆನು. ಎಲೌ ಲಕ್ಷ್ಮಿಯೆ, ನೀನು ಎಲ್ಲಾ ದಾರಿದ್ರ್ಯವನ್ನೂ ಕೊರತೆಯನ್ನೂ ನನ್ನ ಮನೆಯಿಂದ ಹೋಗಲಾಡಿಸು.'**

ಈ ಮಂತ್ರದಲ್ಲಿ ಮೊದಲು ಅಲಕ್ಷ್ಮಿಯ ಪ್ರಸ್ತಾಪವಿದೆ. ಮನುಷ್ಯನು ಧನಿಕನಾಗುವ ಮುಂಚೆ ಬಡವನಾಗಿರುತ್ತಾನಾದ್ದರಿಂದ ಬಡತನವು ಸಿರಿಯ ಪೂರ್ವಸ್ಥಿತಿಯಾಗಿರುತ್ತದೆ. ಆದ್ದರಿಂದ ಅದನ್ನು ಜ್ಯೇಷ್ಠಾಲಕ್ಷ್ಮಿಯೆಂದೂ ಕರೆಯಲಾಗಿದೆ. ಆದರೆ ಇದೇ ಹೆಸರನ್ನು ಮಹಾಲಕ್ಷ್ಮಿಯ ಪರವಾಗಿ ಉಪಯೋಗಿಸುವಾಗ ಜ್ಯೇಷ್ಠಾಶಬ್ದಕ್ಕೆ ಬದಲು 'ವರ' ಎಂಬ ಶಬ್ದವನ್ನು ಉಪಯೋಗಿಸಲಾಗುವದು. ಆಗ 'ವರಲಕ್ಷ್ಮಿ'ಯಾಗಿ ವ್ಯವಹರಿಸಲ್ಪಡುವ ದೇವಿಯು ಶ್ರೀದೇವಿಯೇ ಆಗಿರುವಳು. ಜ್ಯೇಷ್ಠೆಯು ಅಲಕ್ಷ್ಮಿಯೆನಿಸುವಳು. ಈಕೆಯು ಪ್ರಾಣಿಗಳಲ್ಲಿಯೂ ಮನುಷ್ಯರಲ್ಲಿಯೂ ಪ್ರಧಾನವಾಗಿ ಹಸಿವುಬಾಯಾರಿಕಗಳ ರೂಪದಲ್ಲಿರುತ್ತಾಳೆ. ಇವಳನ್ನು ಮಾನವನು ಗೆದ್ದಾಗ ದೇವತೆಯಾಗುವನು. ದೇವತೆಗಳಿಗೆ ಹಸಿವುಬಾಯಾರಿಕೆಗಳಿರುವದಿಲ್ಲ. ಮಾನವನು ಮಾನವನಾಗಿರುವ ವರೆಗೂ ಈ ಹಸಿವುಬಾಯಾರಿಕೆಗಳನ್ನು ಪೂರ್ಣವಾಗಿ ಗೆಲ್ಲಲಾಗುವದಿಲ್ಲ. ಆದರೆ ಇವುಗಳಿಗೆ ತುತ್ತಾಗಿ ಪ್ರಾಣವನ್ನೇ ಕಳೆದುಕೊಳ್ಳುವಂಥ ಪರಿಸ್ಥಿತಿಯನ್ನು ಮಾತ್ರ ಸ್ವಪ್ರಯತ್ನದಿಂದ ಪರಿಹರಿಸಿಕೊಳ್ಳಬಹುದು. ಹೇಗೆಂದರೆ; ಮನೆಯಲ್ಲಿ ಬೇಕಾದಷ್ಟು ದವಸಧಾನ್ಯಗಳಿದ್ದರೆ ಹಸಿವು ಉಂಟಾದರೂ ಭಯವಿರುವದಿಲ್ಲ. ಆದ್ದರಿಂದ ವೃದ್ಧಿಯನ್ನು ಬಯಸುವವನಾಗಿ ಮನುಷ್ಯನು

ಮಹಾಲಕ್ಷ್ಮಿಯನ್ನು 'ಎಲೌ ತಾಯೆ, ನೀನು ಯಾವಾಗಲೂ ಧನಧಾನ್ಯರೂಪದಿಂದ ನನ್ನ ಗೃಹದಲ್ಲಿ ನೆಲಸಿ ದಾರಿದ್ರ್ಯವನ್ನೂ ಕೊರತೆಯನ್ನೂ ಕಳೆಯುವವಳಾಗು ; ಆಗ ನಾನು ಹಸಿವುಬಾಯಾರಿಕೆಗಳಿಂದ ಮುಕ್ತನಾಗುವೆನು' - ಎಂದು ಕೇಳಿಕೊಳ್ಳುತ್ತಿದ್ದಾನೆ. ಪದಾರ್ಥಗಳ ಸಮೃದ್ಧಿಯು ಯಾವಾಗಲೂ ತೃಪ್ತಿಯನ್ನೂ ಅಭಯವನ್ನೂ ನೀಡುತ್ತವೆ. ಆದ್ದರಿಂದ ಹಣಕ್ಕಿಂತಲೂ ಪದಾರ್ಥಗಳನ್ನೇ ಸಂಗ್ರಹಿಸಿಕೊಳ್ಳಬೇಕು. ಅದರಲ್ಲಿಯೂ ನಾವು ಊಟಮಾಡುವಂಥ ವಸ್ತುಗಳಿಗೆ ಮೊದಲನೆಯ ಸ್ಥಾನವನ್ನು ನೀಡಬೇಕು. ಆ ಪದಾರ್ಥಗಳನ್ನು 'ಲಕ್ಷ್ಮಿ'ಯೆಂದೇ ಗೌರವಿಸಿ ಪೂಜಿಸಬೇಕು.

ವೇದಗಳಲ್ಲಿ 'ಅನ್ನವನ್ನು ನಿಂದಿಸಬಾರದು ; ಅನ್ನವನ್ನು ಬೇಡವೆನ್ನಬಾರದು, ಅನ್ನವನ್ನು ಬಹುವಾಗಿ ಮಾಡಿಕೊಳ್ಳಬೇಕು' ಮುಂತಾದ ಉಪದೇಶಗಳಿವೆ. ಇವುಗಳೆಲ್ಲವೂ ಅಲಕ್ಷ್ಮಿಯನ್ನು ಪರಿಹರಿಸಿ - ಕೊಳ್ಳುವದಕ್ಕಾಗಿಯೇ ಹೇಳಲ್ಪಟ್ಟವಾಗಿವೆ. ಅನ್ನನಿಂದನೆ ಎಂದರೆ : 'ಹೊಟ್ಟೆ ತುಂಬಿದವನಿಗೆ ಹಿಟ್ಟು ಕಹಿ' ಎಂಬ ಗಾದೆಯಂತೆ ನಾವು ತೃಪ್ತರಾಗಿದ್ದಾಗ ಅದನ್ನು ಚೆಲ್ಲುತ್ತೇವೆ, ಅಥವಾ ಎಸೆಯುತ್ತೇವೆ, ಹಾಗೆ ಮಾಡಬಾರದು. ನಮಗೆ ಸಾಕಾದ ಕೂಡಲೇ ಕೊರತೆಯಿರುವ ಬೇರೊಬ್ಬನಿಗೆ ಅದನ್ನು ದಾನಮಾಡಿಬಿಡಬೇಕು. ಅದೇ ಅನ್ನದ ಪೂಜೆಯು. ಹಾಗೆಯೇ ಅನ್ನವು ಹೆಚ್ಚಾಗಿ ದೊರೆತಲ್ಲಿ ಅದನ್ನು ಸ್ವೀಕರಿಸಬೇಕು. ತಿರಸ್ಕರಿಸಬಾರದು. ಎಂದಿನಂತೆ ಹೆಚ್ಚಾದದ್ದನ್ನು ಹಂಚಬೇಕು. ಇನ್ನು ನಮ್ಮಲ್ಲಿಗೇ ಯಾರಾದರೂ ಅನ್ನಕ್ಕಾಗಿ ಬಂದರೆ, ಬೇಡಿದರೆ, ಇಲ್ಲವೆನ್ನಲೇಬಾರದು ; ಅದಕ್ಕಾಗಿಯೇ ಹೆಚ್ಚಿನ ಅನ್ನವನ್ನು ಕೂಡಿಹಾಕಬೇಕು. ಇವೆಲ್ಲ ಅನ್ನಲಕ್ಷ್ಮಿಯ ಆರಾಧನೆಯೇ ಆಗಿದೆ. ಹೀಗೆ ದಾನ - ವಿನಿಯೋಗ ಮಾಡಿದವನಿಗೆ ಅವನವನ ಮನೋಭಾವಕ್ಕೆ ತಕ್ಕಂತೆ ಅನ್ನವು ದೊರೆಯುತ್ತಲೇ ಇರುತ್ತದೆ - ಎಂದೂ ಉಪನಿಷತ್ತಿನಲ್ಲಿ ತಿಳಿಸಿದೆ. ಆಗ ಅಭೂತಿಯೂ ಅಸಮೃದ್ಧಿಯೂ ಹೇಳಹೆಸರಿಲ್ಲವಾಗುವವು. ಮತ್ತು ಮನೆಯಲ್ಲಿ ಆಹಾರವು ತುಂಬಿದ್ದರೆ ಹಸಿವು ಹೆಚ್ಚಾಗಿ ನಮ್ಮನ್ನು ಬಾಧಿಸುವದಿಲ್ಲ. ಸ್ವಲ್ಪವೇ ಊಟಮಾಡಿದರೂ ತೃಪ್ತಿಯಾಗಿಬಿಡುತ್ತದೆ. ಯಾವದೇ ಪದಾರ್ಥವು ಪೇಟೆಯಲ್ಲಿ

ಸಮೃದ್ಧವಾಗಿದ್ದರೂ ಸಾಕು, ಹಾಹಾಕಾರವಿರುವದಿಲ್ಲ. ಕೆಲವು ವೇಳೆ ಅತ್ಯಾಸೆಯಿಂದ ವರ್ತಕರೂ ದಲ್ಲಾಳಿಗಳೂ ಕೃತಕ ಅಭಾವವನ್ನು ಸೃಷ್ಟಿಸುತ್ತಾರೆ. ಪದಾರ್ಥಗಳಿಗೆ ಕಲೆಬೆರಕೆ ಮಾಡುತ್ತಾರೆ. ಎಲ್ಲರ ಸ್ವತ್ತಾದ ಅನ್ನವನ್ನು ಅನೇಕರಿಗೆ ದೊರೆಯದಂತೆ ಮಾಡುತ್ತಾರೆ. ಇವೆಲ್ಲ ಅನ್ನದ ವಿಷಯಕ್ಕೆ ಮಾನವನು ಮಾಡುವ ಮಹಾಪರಾಧಗಳಾಗಿವೆ. ಇವುಗಳನ್ನೆಲ್ಲ ಹಸಿವು ಬಾಯಾರಿಕೆಗಳಂತೆಯೇ 'ಅಲಕ್ಷ್ಮಿ'ಯೆಂದೇ ಕರೆಯಬೇಕು. ಇಂಥ ಜ್ಯೇಷ್ಠಾಲಕ್ಷ್ಮಿಯ ಉಪಾಸಕರಾದ ವರ್ತಕರೂ ರೈತರೂ ಎಂದಿಗೂ ಮಹಾಲಕ್ಷ್ಮಿಯ ಪ್ರಸಾದಪಾತ್ರರಾಗಲಾರರು. ಆದ್ದರಿಂದ ದುರಾಸೆ - ಎಂಬ ಹಸಿವೆಯೇ ಹೊಟ್ಟೆಹಸಿವೆಗಿಂತ ಹೆಚ್ಚಾಗಿ ಈಗ ತಾಂಡವವಾಡುತ್ತಿದೆ. ಅದು ಅಲಕ್ಷ್ಮಿಯ ಪ್ರತ್ಯಕ್ಷಾವತಾರವು. ಇದನ್ನು ಕಳೆಯಬೇಕೆಂದೇ ಮಹಾಲಕ್ಷ್ಮಿಯನ್ನು ನಾವು ಬೇಡಿಕೊಳ್ಳಬೇಕು. ಪಿಪಾಸೆಯೂ ಹಾಗೆಯೇ ಈಗ ಪ್ರಸಿದ್ಧವಾಗಿದೆ. 'ಹಣದ ದಾಹ'ವೆಂದೇ ಇದನ್ನು ಕರೆಯುತ್ತಾರೆ. ಈಗ ಮನುಷ್ಯನಿಗೆ ಎಲ್ಲರಿಗಿಂತ ಬೇಗನೆ ಹಣವಂತನಾಗಿಬಿಡಬೇಕು - ಎಂಬ ಜ್ಯೇಷ್ಠಾಲಕ್ಷ್ಮಿಯು ಅಂಟಿಕೊಂಡಿರುವಳು. ಆದರೆ ಆಕೆಯು ಮಾನವನನ್ನು ಕೊಲ್ಲುವವಳೇ ಹೊರತು ಕಾಪಾಡುವವಳಲ್ಲ. ಈ ವಿಷಯದಲ್ಲಿ ನಾವು ಎಚ್ಚರಿಕೆಯಿಂದಿರಬೇಕು.

ಈಗ ಒಂಭತ್ತನೆಯ ಮಂತ್ರವನ್ನು ವಿಚಾರಮಾಡೋಣ :

**ಓಂ॥ ಗಂಧದ್ವಾರಾಂ ದುರಾಧರ್ಷಾಂ ನಿತ್ಯಪುಷ್ಟಾಂ ಕರೀಷಿಣೀಮ್ ।**
**ಈಶ್ವರೀಂ ಸರ್ವಭೂತಾನಾಂ ತಾಮಿಹೋಪಹ್ವಯೇ ಶ್ರಿಯಮ್ ॥ ೯ ॥**

**'ಗಂಧದ್ವಾರಳೂ, ದುರಾಧರ್ಷಳೂ, ನಿತ್ಯಪುಷ್ಟಳೂ, ಕರೀಷಿಣಿಯೂ, ಎಲ್ಲಾ ಭೂತಗಳಿಗೂ ಒಡೆಯಳೂ ಆದ ಶ್ರೀದೇವಿಯನ್ನು ಇಲ್ಲಿ ನಾನು ಆಹ್ವಾನಿಸುತ್ತೇನೆ.'**

ಈ ಮಂತ್ರದಲ್ಲಿ ಭೂರೂಪಳಾದ ಶ್ರೀದೇವಿಯನ್ನು ಕರೆಯಲಾಗಿದೆ. ಲಲಿತಾಅಷ್ಟೋತ್ತರ ಶತನಾಮಗಳ ಮೊದಲನೆಯ ನಾಮವು 'ಭೂರೂಪ-ಸಕಲಾಧಾರಾಯೈ ನಮಃ' ಎಂದಿರುವದನ್ನು ಗಮನಿಸಬೇಕು. ಅದೇ ದೇವಿಯನ್ನು

ಇಲ್ಲಿ ಸ್ತುತಿಸಲಾಗಿದೆ. ಈ ಮಂತ್ರವನ್ನು 'ಗಂಧ' ಎಂಬ ಶಬ್ದದ ಪ್ರಯೋಗಬಲದಿಂದ ದೇವರಿಗೆ ಗಂಧವನ್ನರ್ಪಿಸುವಾಗ ವೈದಿಕರು ಬಳಸುತ್ತಾರೆ. ಆದರೆ ಅದು ಶ್ರೀದೇವಿಯ ಆಹ್ವಾನಮಂತ್ರವು. ತೈತ್ತಿರೀಯ ಮಹಾ ನಾರಾಯಣೋಪನಿಷತ್ತಿನಲ್ಲಿಯೂ ಈ ಮಂತ್ರವಿದೆ. ಪ್ರಧಾನವಾಗಿ ಶ್ರೀದೇವಿಯನ್ನು ಇಲ್ಲಿ ಭೂರೂಪಳಾಗಿ ಸ್ತೋತ್ರಮಾಡಿದೆ. ಭೂಮಿಯು ಪ್ರತ್ಯಕ್ಷ ದೇವತೆಯು. ನಾವೆಲ್ಲರೂ ಭೂಮಿಯ ಮೇಲೆಯೇ ವಾಸವಾಗಿರುವೆವು. ಭೂಗರ್ಭದಲ್ಲಿ ರತ್ನಗಳೂ ಖನಿಜಗಳೂ ಇರುವವು. ಸಸ್ಯಗಳೂ ಭೂಮಿಯ ಮೇಲೆಯೇ ಬೆಳೆಯುವವು. ಚೇತನರಾದ ಪ್ರಾಣಿಗಳೆಲ್ಲಕ್ಕೂ ಭೂಮಿಯೇ ಆಧಾರವಾಗಿರುವದು. ಈಕೆಯನ್ನು ವಿಷ್ಣುಪತ್ನಿಯೆಂದೂ ವರಾಹರೂಪಿ ಭಗವಂತನಿಂದ ಉದ್ಧೃತಳಾದವಳೆಂದೂ ವೇದವು ಹೊಗಳುತ್ತಿದೆ. ಈಕೆಯಲ್ಲಿ ಅಂತರ್ಯಾಮಿಯಾಗಿ ಭಗವಂತನೇ ಇದ್ದುಕೊಂಡಿರುವನೆಂದೂ ಮತ್ತೊಂದು ಶ್ರುತಿಯು ತಿಳಿಸುತ್ತಿದೆ. ಹೀಗೆ ಮಹಿಮಾನ್ವಿತಳಾದ ಭೂ ದೇವಿಯನ್ನು 'ಶ್ರೀಃ' ಎಂದು ಇಲ್ಲಿ ಕರೆಯಲಾಗಿದೆ.

ಈಗ ಈ ಶ್ರೀದೇವಿಯ ವಿಶೇಷಣಗಳನ್ನು ವಿಚಾರಮಾಡೋಣ. 'ಶ್ರೀಯತೇ ಆಶ್ರೀಯತೇ ಸರ್ವಜಂತುಭಿಃ ಇತಿ ಶ್ರೀಃ' ಎಂಬ ವ್ಯುತ್ಪತ್ತಿಯ ಪ್ರಕಾರ ಸರ್ವಾಧಾರಳಾಗಿರುವ ಭೂದೇವಿಯು ಶ್ರೀಃ ಎಂದು ಕರೆಯಲ್ಪಡಲು ತಕ್ಕವಳಾಗಿದ್ದಾಳೆ. ಉಳಿದ ಧನ-ಕನಕ-ವಸ್ತು-ವಾಹನಾದಿ ಗಜಾಂತ ಐಶ್ವರ್ಯವೆಲ್ಲ ಈ ಭೂದೇವಿಯ ಅಧೀನವಾಗಿಯೇ ಇರುತ್ತದೆ. ಈಕೆಯು ಗಂಧದ್ವಾರಳು. ಗಂಧವು ಪೃಥಿವಿಯ ಅಸಾಧಾರಣಲಕ್ಷಣವು. ಗಂಧದ ಮೂಲಕವೇ ಪೃಥಿವಿಯನ್ನು ನಾವು ಗೊತ್ತುಮಾಡುವೆವು. ಪೃಥಿವಿಯಲ್ಲಿರುವ ಪುಣ್ಯಗಂಧವೆಲ್ಲವೂ ಭಗವಂತನೇ ಎಂದು ಗೀತೆಯಲ್ಲಿ ತಿಳಿಸಿದೆ. ಆದ್ದರಿಂದ ಶ್ರೀಗಂಧ, ಚಂದನ, ಅರಗು, ಗುಗ್ಗುಳಾದಿಗಳು ಹಾಗೂ ಹೂಗಳಲ್ಲಿರುವ ಗಂಧ - ಮುಂತಾಗಿ ಪ್ರಧಾನವಾದ ಪರಿಮಳದ್ರವ್ಯಗಳೆಲ್ಲವೂ ಭೂದೇವಿಯ ಉತ್ಪನ್ನಗಳೇ ಆಗಿವೆ. ಬೇಸಿಗೆಯ ತಾಪದಿಂದ ಬಳಲಿದ ಭೂಮಿಯ ಮೇಲೆ ಹೊಸದಾಗಿ ಸಣ್ಣ ಮಳೆ ಬಿದ್ದಾಗ ಭೂಮಿಯೆಲ್ಲವೂ ಘಮಘಮಿಸುವದು ನಮಗೆ ಅನುಭವದಲ್ಲಿದೆ. ಹೀಗೆ

ಗಂಧದ್ವಾರಳಾದ ದೇವಿಯು **ದುರಾಧರ್ಷಳೂ** ಆಗಿರುವಳು. ಎಂಥ ಯಂತ್ರವಿಶೇಷಗಳಿಂದಾಗಲೀ ಸಾಧನಗಳಿಂದಾಗಲೀ, ಭೂಮಿಯನ್ನು ಅಗೆದರೂ ಆಕೆ ಅಲ್ಲಾಡುವದಿಲ್ಲ ಮತ್ತು ಅವಳನ್ನು ಎತ್ತಲಾಗುವದಿಲ್ಲ. ಇಂಥ ಸ್ಥಿರವಾದ ಹಾಗೂ ಅಲುಗಾಡಿಸಲು ಅಸಾಧ್ಯವಾದ ಸ್ವರೂಪವುಳ್ಳವಳು. ಭೂಕಂಪ ಎಂಬ ನಿಮಿತ್ತವಾಗಿ ಭೂಮಿಯ ಯಾವದೋ ಒಂದು ಭಾಗ ಅದುರಿದರೂ ಅದು ಇಡಿಯ ಭೂಮಂಡಲದ ದೃಷ್ಟಿಯಿಂದ ಅತ್ಯಲ್ಪವು. ಮನುಷ್ಯನು ರೆಪ್ಪೆಯಾಡಿಸಿದಷ್ಟು ಚಲನವಾಗಿರಬಹುದು. ಇನ್ನು ಈಕೆಯು **ನಿತ್ಯಪುಷ್ಟಳು.** ನಾನಾವಿಧವಾದ ಗಿಡಮರಸಸ್ಯಗಳಿಂದಲೂ ಬೆಟ್ಟ, ನದಿ, ಕಾಡುಪ್ರಾಣಿಗಳೇ ಮುಂತಾದ ವಸ್ತುಗಳಿಂದಲೂ ತುಂಬಿರುವಳು. ಮಾನವನ ದೃಷ್ಟಿಯಿಂದ ಪ್ರತಿಯೊಂದು ಭೂಭಾಗವೂ ಪದಾರ್ಥವೂ ಸಂಪತ್ತೇ ಆಗಿದೆ. ವ್ಯವಸಾಯದ ಭೂಮಿ, ವಾಸಭೂಮಿ - ಗಳಲ್ಲದೆ ಅರಣ್ಯಗಳು, ಗಣಿಗಳು, ನದಿಗಳು, ಜಲಪಾತಗಳು, ಕಾಡುಪ್ರಾಣಿಗಳು - ಇತ್ಯಾದಿ ಯಾವದೇ ವಸ್ತುವಾದರೂ ಎಂಥ ಬೆಲೆಬಾಳತಕ್ಕವುಗಳೆಂಬುದನ್ನು ಯೋಚಿಸಿದರೂ ಸಾಕು - ಭೂದೇವಿಯು ನಿತ್ಯಪುಷ್ಟಳೆಂಬುದು ಗೊತ್ತಾಗುವದು. ವರ್ಷದಲ್ಲಿ ಹನ್ನೆರಡು ತಿಂಗಳುಗಳಲ್ಲಿಯೂ ಋತುಧರ್ಮಕ್ಕೆ ಅನುಗುಣವಾಗಿ ಭೂಮಿಯು ಪೈರು ಪಚ್ಚೆಗಳಿಂದ ಕಂಗೊಳಿಸುತ್ತಲೇ ಇರುವದು. ಇಂಥ ಮಹಿಮೆಯು ಬೇರೆ ಯಾವ ದೇವತೆಗೆ ತಾನೆ ಇದ್ದೀತು? ಇನ್ನು ಈಕೆಯು **ಕರೀಷಿಣಿಯು** - ಎಂದರೆ ಬೇಸಾಯಗಾರರಿಂದ ಪೈರು ಬೆಳೆಯುವದಕ್ಕಾಗಿ ಕೃಷಿಮಾಡಲ್ಪಡುವವಳು. ಕೃಷ್ಯತೇ ಇತಿ ಕರೀಷಿಣೀ- ಎಂದ ವ್ಯುತ್ಪತ್ತಿಮಾಡಲಾಗಿದೆ. ವ್ಯವಸಾಯಗಾರರು ಭೂಮಿಯನ್ನು ಉತ್ತು, ಬಿತ್ತಿ ಹದಗೊಳಿಸಿದಾಗ ಆಕೆಯು ಶೋಭಿಸುತ್ತಾಳಲ್ಲವೆ ? ಅಥವಾ ಕರೀಷವೆಂದರೆ ಗೋಮಯವು (ಸಗಣಿಯು). ಅದನ್ನು ಉಳ್ಳವಳು. ಪ್ರಾಣಿಗಳಲ್ಲಿ ಶ್ರೇಷ್ಠವೆಂದೆಣಿಸಲ್ಪಟ್ಟಿರುವ ಹಾಗೂ ಸಾತ್ತ್ವಿಕವಾದ ಗೋವಿನ ಸಗಣಿಯು ಪಂಚಗವ್ಯಗಳಲ್ಲಿ ಒಂದೆಂದು ಗೌರವಿಸಲ್ಪಟ್ಟಿದೆ. ಇದರಂಥ ಗೊಬ್ಬರವೇ ಇಲ್ಲ. ಇದು ಭೂದೇವಿಯ ಪ್ರತಿನಿಧಿಯಾಗಿದೆ. ಆದ್ದರಿಂದಲೇ ಗೋಮಯವನ್ನು ಶುದ್ಧಿಗಾಗಿಯೂ ಗಣಪತಿಯ ಬಿಂಬವಾಗಿಯೂ ಉಪಯೋಗಿಸುವರು. ಆದ್ದರಿಂದ ಭೂದೇವಿಯು ಕರೀಷಿಣಿಯು.

ಕಡೆಯದಾಗಿ ಈ ಭೂದೇವಿಯನ್ನು ಸರ್ವಭೂತಗಳಿಗೂ ಈಶ್ವರಿಯೆಂದು ಸ್ತೋತ್ರಮಾಡಿದೆ. ಈಕೆಯ ದಯೆಯಿಂದಲೇ ನಾವೆಲ್ಲರೂ ಬದುಕಿದ್ದೇವೆ. ಆದರೂ ಇವಳನ್ನು ತನ್ನದಾಗಿ ಮಾಡಿಕೊಳ್ಳುವ ಭ್ರಾಂತಿಯಿಂದ ಅನೇಕ ರಾಜರುಗಳು ಹೊಡೆದಾಡಿ ಪ್ರಾಣಬಿಟ್ಟಿರುತ್ತಾರೆ. ಭೂವಿವಾದ, ಸುಧಾರಣೆಗಳ ಹೆಸರಿನಲ್ಲಿ ಈಗಲೂ ಈಕೆಯನ್ನು ವಶಗೊಳಿಸಿಕೊಳ್ಳಲು ಕೋರ್ಟಿಗೆ ಹೋಗುವವರಿಗೇನೂ ಕಡಿಮೆಯಿಲ್ಲ. ಇದೊಂದು ಮಾಯೆಯು. ಯಾರೊಡನೆಯೂ ಈಕೆ ಹಿಂಬಾಲಿಸಿ ಹೋಗಿರುವದಿಲ್ಲ. ಆದ್ದರಿಂದ ಇವಳೇ ಈಶ್ವರಿಯೇ ಹೊರತು ಮಾನವರಲ್ಲ. ಭೂಮಿಗೆ ತಾನು ಒಡೆಯನೆಂದು ಹೇಳಿಕೊಳ್ಳುವವನೊಬ್ಬ ಮೂರ್ಖನೇ ಸರಿ. ಆದ್ದರಿಂದ ನಾವು ಭೂದೇವಿಯ ನಿಜವಾದ ಭಕ್ತರು ಪುತ್ರರೂ ಆಗಿ ಬಾಳೋಣ.

***

## ೬. ಮಯಿ ಶ್ರೀಃ ಶ್ರಯತಾಮ್

ಶ್ರೀಸೂಕ್ತದ ಹತ್ತನೆಯ ಮಂತ್ರವನ್ನು ಈಗ ವಿಚಾರಮಾಡಬೇಕಾಗಿದೆ. ಅದು ಹೀಗಿದೆ:

**ಓಂ॥ ಮನಸಃ ಕಾಮಮಾಕೂತಿಂ ವಾಚಃ ಸತ್ಯಮಶೀಮಹಿ ।**
**ಪಶೂನಾಂ ರೂಪಮನ್ನಸ್ಯ ಮಯಿ ಶ್ರೀಃ ಶ್ರಯತಾಂ ಯಶಃ ॥೧೦॥**

**'ಎಲೌ ಶ್ರೀದೇವಿಯೆ, ಮನೋರಥವನ್ನೂ ಸಂಕಲ್ಪವನ್ನೂ ಮಾತಿನಲ್ಲಿ ನಿಜವನ್ನೂ ದನಕರುಗಳ ಉತ್ಪನ್ನಗಳನ್ನೂ ತಿನ್ನುವ ಪದಾರ್ಥಗಳ ಸಮೃದ್ಧಿಯನ್ನೂ ಯಶಸ್ಸನ್ನೂ ನಾನು ಪಡೆಯುವಂತಾಗಲಿ.'**

ಈ ಮಂತ್ರದಲ್ಲಿ ಲಕ್ಷ್ಮಿಯನ್ನು ಸಂಬೋಧಿಸಿ ಮತ್ತೊಮ್ಮೆ ಭೋಗ್ಯಪದಾರ್ಥಗಳನ್ನೆಲ್ಲ ತನಗೆ ಲಭಿಸಲೆಂದು ಕೇಳಿಕೊಳ್ಳಲಾಗಿದೆ. ಮೊದಲನೆಯದಾಗಿ ಮನೋರಥ ಪರಿಪೂರ್ತಿಯಾಗಬೇಕೆಂಬ ಪ್ರಾರ್ಥನೆಯಿದೆ.

ದರಿದ್ರನಾದವನಿಗೆ ಮನೋರಥಗಳು ಹುಟ್ಟಿ ಹಾಗೇ ನಾಶವಾಗುವವು. ಏಕೆಂದರೆ ಅವುಗಳನ್ನು ಪೂರೈಸಿಕೊಳ್ಳಲು ಸಂಪತ್ತುಗಳಿರುವದಿಲ್ಲ. ಮನೋರಥಗಳೇ ಉಂಟಾಗದಂತೆ ಮಾಡಿಕೊಳ್ಳಲು ಬಹಳ ಕಷ್ಟಪಡಬೇಕಾಗುವದು. ಪ್ರಪಂಚವನ್ನೇ ತ್ಯಾಗಮಾಡಿ ಬ್ರಹ್ಮನಿಷ್ಠನಾದರೆ ಮಾತ್ರ ಕಾಮಗಳು ಪೂರ್ಣವಾಗಿ ಅಡಗುವವು. ಅಂಥ ಯೋಗ್ಯತೆಯು ಬಹುಜನರಿಗೆ ಸಾಧ್ಯವಾಗುವದಿಲ್ಲ. ಆದ್ದರಿಂದ ದೇವಿಯನ್ನು ನಮ್ಮ ಮನೋರಥಪರಿಪೂರ್ತಿಗಾಗಿ ಕೇಳಿಕೊಂಡಿದೆ. ಆಕೆಯ ಅನುಗ್ರಹವು ನಮಗೆ ಸತ್ಕಾಮಗಳನ್ನೇ ಉಂಟುಮಾಡಬಲ್ಲದು. ಮತ್ತು ಅಂಥ ಕಾಮಗಳು ಫಲಪ್ರದವಾಗಿ ನಮ್ಮ ಇಷ್ಟಾರ್ಥವು ಪೂರೈಸುವಂತೆಯೂ ಮಾಡಬಲ್ಲದು. ಮಾನವನಿಗೆ ತನ್ನ ಮನೋರಾಜ್ಯದಲ್ಲಿ ಪೂರೈಸದೆ ಇರುವಂಥ ಕಾಮಗಳ ಗುಂಪುಗುಂಪುಗಳೇ ಇರುತ್ತವೆ. ಬಯಸಿದ್ದೆಲ್ಲವೂ ನೆರವೇರಿಬಿಟ್ಟಿದ್ದರೆ ಮನುಷ್ಯರನ್ನು ಹಿಡಿದುನಿಲ್ಲಿಸುವವರು ಯಾರಿರುತ್ತಿದ್ದರು? ಆದರೆ ಸಂಕಲ್ಪಿತಕಾಮಗಳಲ್ಲಿ ಶತಾಂಶವು ಸಿದ್ಧವಾಗಬೇಕಾದರೂ ಶ್ರೀದೇವಿಯ ಪ್ರಸಾದವು ಬೇಕೇಬೇಕು. ಹೀಗೆ ದೇವಿಯು ನಮ್ಮ ಮನಃಕಾಮಗಳನ್ನೂ ಹಾಗೆಯೇ ಸಂಕಲ್ಪಗಳನ್ನೂ ನೆರವೇರಿಸಿಕೊಡಲಿ - ಎಂದು ಪ್ರಾರ್ಥಿಸಿದೆ. ಸಂಕಲ್ಪಗಳು ಸತ್ಯಸಂಕಲ್ಪಗಳಾಗಿರಬೇಕಾದರೆ ಸತ್ಯಾತ್ಮಳಾದ ಶ್ರೀದೇವಿಯು ಅವುಗಳನ್ನು ಪ್ರೇರಿಸಬೇಕು. ದಾಸರು ಹಾಡಿರುವಂತೆ ಹರಿಚಿತ್ತವೇ ಸತ್ಯವು. ಹರಿಚಿತ್ತಕ್ಕೆ ಬಂದದ್ದೇ ಆದರೆ ಅದು ನಡೆದೇ ತೀರುವದು. ಮತ್ತು ಮಾತು ಕೂಡ ನಿಜವಾಗಬೇಕಾದರೆ ದೇವರೇ ನೆರವೇರಿಸಿಕೊಡಬೇಕು. ವಾಗ್ದಾನ ಮಾಡುವದು ಸುಲಭ. ಅದರಂತೆ ನಡೆಯುವದು ಬಲು ಕಷ್ಟ. ಹರಿಪತ್ನಿಯಾದ ಶ್ರೀದೇವಿಯು ನಮ್ಮ ವಾಗ್ದಾನಗಳನ್ನು ಸತ್ಯವಾಗಿ ಮಾಡಲಿ. ನಾವು ಎಂದಿಗೂ ಅನೃತವಾದ ಕಾಮಗಳನ್ನು ಬಯಸುವದಾಗಲಿ, ಸುಳ್ಳು ವಾಗ್ದಾನಗಳನ್ನು ನೀಡುವದಾಗಲಿ ಸಂಭವಿಸದಿರಲಿ - ಎಂದು ಅಭಿಪ್ರಾಯ.

ಮುಂದುವರೆದು ಪಶುಗಳು, ಅನ್ನ, ಯಶಸ್ಸುಗಳು ಕೂಡ ದೇವಿಯ ಅನುಗ್ರಹದಿಂದ ಲಭಿಸಲೆಂದು ಬೇಡಿಕೊಂಡಿದೆ. ಪಶುಗಳ ಪ್ರಾಪ್ತಿಯೂ ಅವುಗಳಿಂದ ನಮಗೆ ದೊರಕುವ ಪ್ರಯೋಜನಗಳೂ ದೇವಿಯ ಕೃಪೆಗೆ ಒಳಪಟ್ಟಿವೆ.

ಋಣಾನುಬಂಧರೂಪದಿಂದ ಪಶು-ಪತ್ನಿ-ಸುತ-ಆಲಯಗಳು ಲಭಿಸುವವೆಂಬ ಒಂದು ಮಾತು ಉಂಟು. ಇಲ್ಲಿ ಋಣವೆಂದರೆ ನಾವು ಹಿಂದೆ ಮಾಡಿ ದೇವಿಗೆ ಅರ್ಪಿಸಿರಬಹುದಾದ ಸತ್ಕರ್ಮಗಳು ಎಂದು ಭಾವಿಸಬಹುದು. ಅವು ಪುಣ್ಯರೂಪದಿಂದ ಈಗ ನಮಗೆ ಒದಗಿಬರಬೇಕಾಗಿದೆ. ಹಾಗೆ ದೊರಕಿದಮೇಲೂ ಆ ವಸ್ತುಗಳಿಂದ ಸುಖವು ಸಿಗಬೇಕಾದರೆ ಶ್ರೀ ದೇವಿಯ ಪ್ರಸಾದದಿಂದಲೇ ಸಾಧ್ಯವಾದೀತು. ಪ್ರಕೃತ ಶ್ರೀಯು ನಮ್ಮನ್ನು ಅನ್ನರೂಪದಿಂದಲೂ ಪಶ್ವಾದಿಸಂಪತ್ತುಗಳ ರೂಪದಿಂದಲೂ ಆಶ್ರಯಿಸಲಿ - ಎಂಬಿದು ಪ್ರಾರ್ಥನೆಯ ಸಾರವು. ಇಷ್ಟೆಲ್ಲ ದೊರೆತರೂ ಯಶಸ್ಸು ಸಿಗದಿದ್ದರೆ ಮನುಷ್ಯನಿಗೆ ತೃಪ್ತಿಯಿಲ್ಲ. ಬಡವರು ಹಣಕ್ಕಾಗಿ ಪರಿತಪಿಸುವಂತೆ ಶ್ರೀಮಂತರು ಕೀರ್ತಿಗಾಗಿ ಪರದಾಡುತ್ತಾರೆ. ಅದಕ್ಕಾಗಿಯೇ ಧರ್ಮಕಾರ್ಯಗಳನ್ನು ಮಾಡುತ್ತಾರೆ. ಅದನ್ನು ಪ್ರಕಟಪಡಿಸಿಕೊಳ್ಳುತ್ತಾರೆ. ತಮ್ಮ ಕಡೆಯ ಜನರಿಂದ ಪ್ರಚಾರಮಾಡಿಸಿಕೊಳ್ಳುತ್ತಾರೆ. ಇವೆಲ್ಲ ಕೀರ್ತಿಯ ಆಸೆಯಿಂದಲೇ ಆಗಿದೆ. ಆದರೆ ಭಗವತಿಯ ಅನುಗ್ರಹವಾದರೆ ಸಾಧಕನಿಗೆ ಕುಳಿತಲ್ಲಿಯೇ ಕೀರ್ತಿಯು ದೊರಕುವದು. ಅದು ಶಾಶ್ವತವಾಗಿಯೂ ಇರುವದು. ಋಷಿಮುನಿಗಳೆಲ್ಲರೂ ಕೀರ್ತಿವಂತರಾದುದು ಶ್ರೀದೇವಿಯ ದಯೆಯಿಂದಲೇ - ಎಂದು ತಿಳಿಯಬೇಕು. ಭೂಲೋಕವನ್ನು ಮೀರಿ ಸ್ವರ್ಗ ಲೋಕದವರೆಗೂ ಹರಡಿದ್ದ ಕೀರ್ತಿಯುಳ್ಳ ಶ್ರೀರಾಮನಂಥ ಕ್ಷತ್ರಿಯ ರಾಜರುಗಳನ್ನು ಇಲ್ಲಿ ನೆನೆಸಿಕೊಳ್ಳಬಹುದು. ಶ್ರೀದೇವಿಯ ಭಕ್ತರಿಗೆ ಕೀರ್ತಿಯೂ ಸತ್ಯವಾಕ್ಕೂ ಅನ್ನಾದಿಗಳೂ ನಿಯತವಾಗಿ ಲಭಿಸುವದರಲ್ಲಿ ಸಂಶಯವಿಲ್ಲ.

ಈಗ ಹನ್ನೊಂದನೆಯ ಮಂತ್ರವನ್ನು ವಿಚಾರಮಾಡೋಣ :

**ಓಂ|| ಕರ್ದಮೇನ ಪ್ರಜಾ ಭೂತಾ ಮಯಿ ಸಂಭವ ಕರ್ದಮ ।**
**ಶ್ರಿಯಂ ವಾಸಯ ಮೇ ಕುಲೇ ಮಾತರಂ ಪದ್ಮಮಾಲಿನೀಮ್ ॥೧೧॥**

**'ಎಲೈ ಕರ್ದಮನೆ, ನಿನ್ನಿಂದ ಪ್ರಜಾವಂತಳಾದ ಪದ್ಮಮಾಲಿನಿಯಾದ ಲಕ್ಷ್ಮಿಯನ್ನು ನನ್ನ ಕುಲದಲ್ಲಿ ವಾಸಮಾಡುವಂತೆ ಮಾಡು. ನೀನು ನನ್ನ ಗೃಹದಲ್ಲಿ ಇರುವವನಾಗು.'**

ಈ ಮಂತ್ರದಲ್ಲಿ ಲಕ್ಷ್ಮೀಪುತ್ರನಾದ ಕರ್ದಮನನ್ನು ಕುರಿತು ಪ್ರಾರ್ಥಿಸಲಾಗಿದೆ. ಶ್ರೀದೇವಿಗೆ ಆನಂದ, ಕರ್ದಮ, ಚಿಕ್ಲೀತ- ಎಂಬ ಹೆಸರಿನ ಮೂರು ಗಂಡುಮಕ್ಕಳಿರುವರು. ಇವರೆಲ್ಲರೂ ಮಹಾಋಷಿಗಳೇ. ದೇವಿಗೆ ಈ ಮಕ್ಕಳಲ್ಲಿ ಬಹು ಪ್ರೀತಿ. ತಾಯಿಗೆ ಮಕ್ಕಳಮೇಲೆ ಪ್ರೇಮವಿರುವದು ಸಹಜವಷ್ಟೆ! ಆದ್ದರಿಂದ ಮಕ್ಕಳನ್ನು ನಮ್ಮಲ್ಲಿ ವಾಸಮಾಡುವಂತೆ ಕೇಳಿಕೊಂಡರೆ ಅವರಿಗಾಗಿ ಶ್ರೀದೇವಿಯೂ ಬಂದೇಬರುತ್ತಾಳೆಂತ ಭಕ್ತನ ನಂಬಿಕೆ. ಆದ್ದರಿಂದ ಕರ್ದಮನನ್ನು ಕುರಿತು 'ನೀನು ನಮ್ಮ ಮನೆಯಲ್ಲಿ ವಾಸಿಸುವವನಾಗು- ಎಂದು ಕೇಳಲಾಗಿದೆ. ಋಷಿಗಳನ್ನು ಮನೆಗೆ ಕರೆಯುವದು ಸುಲಭವಲ್ಲ. ಏಕೆಂದರೆ ಅವರಿಗೆ ತಕ್ಕ ವಾತಾವರಣವು ಮನೆಯಲ್ಲಿಲ್ಲವಾದರೆ ಅವರುಗಳು ಬರುವದಿಲ್ಲ. ಬಂದರೂ ನಿಲ್ಲುವದಿಲ್ಲ. ಆದ್ದರಿಂದ ಗೃಹವು ಶುಚಿಯಾಗಿಯೂ ಶಾಂತವಾಗಿಯೂ ದೈವಿಕ ಭಾವನೆಗಳನ್ನು ತರುವ ಭಾವಚಿತ್ರಗಳು, ವಸ್ತುಗಳಿಂದ ಕೂಡಿದ್ದು ಉತ್ತಮ ಸನ್ನಿವೇಶವುಳ್ಳದ್ದಾಗಿರಬೇಕು. ಶ್ರೀದೇವಿಯೂ ಇಂಥ ಸಾನ್ನಿಧ್ಯವನ್ನು ಬಯಸುವಳು. ಶ್ರೀಪುತ್ರನು ತಾನು ನಿರಹಂಕಾರಿಯೂ ತಪಸ್ವಿಯೂ ಪರಿಶುದ್ಧನೂ ಆಗಿರುವದನ್ನು ಗಮನಿಸಿದಲ್ಲಿ ಲಕ್ಷ್ಮಿಯ ಪುತ್ರರಾಗಿ ನಾವು ಬಾಳಬೇಕಾದರೆ ಇವೇ ಆದರ್ಶಗಳನ್ನು ಪರಿಪಾಲಿಸಬೇಕೆಂದಾಗುತ್ತದೆ. ಆದರೆ ಲೋಕದಲ್ಲಿ ಲಕ್ಷ್ಮೀಪುತ್ರರೆನಿಸಿರುವವರು ಬಹಳಮಟ್ಟಿಗೆ ದುರಹಂಕಾರಿಗಳೂ ದುರ್ಮಾರ್ಗಿಗಳೂ ಆಗಿರುವರು. ಇಂಥವರು ನಿಜವಾದ ಲಕ್ಷ್ಮೀಪುತ್ರರಲ್ಲ. ಅನುಕರಣೀಯರೂ ಅಲ್ಲ. ತಾತ್ಕಾಲಿಕವಾಗಿ ಅವರಲ್ಲಿ ನೆಲೆಸಿರುವ ಲಕ್ಷ್ಮಿಯು ಕಾಲಕ್ರಮದಲ್ಲಿ ಅಂಥವರನ್ನು ಬಿಟ್ಟಗಲುವಳು. ಆದ್ದರಿಂದ ಕರ್ದಮಾದಿಋಷಿಗಳ ಆದರ್ಶವೇ ನಿತ್ಯಲಕ್ಷ್ಮೀಪ್ರಾಪ್ತಿಗೆ ಸಾಧನವಾಗಿರುತ್ತದೆ. ಶ್ರೀದೇವಿಯಾದರೊ, ಇಂಥ ಸತ್ಪುತ್ರರಿಂದಲೇ ಮಾತೆಯಾಗಿ ವಿರಾಜಮಾನಳಾಗಿದ್ದಾಳೆ. ಆಕೆಯ ಸಂತಾನವು ಲೋಕಪೂಜ್ಯವಾಗಿರುತ್ತದೆ. ಹೀಗೆ ಜಗತ್ಪೂಜ್ಯರಾದ ಪುತ್ರರನ್ನು ಪಡೆಯಬೇಕಾದರೆ ತಾಯಿಯಾಗಿರುವವಳು ಮಹಾತಪಸ್ವಿನಿಯಾಗಿರಲೇಬೇಕು. ಶ್ರೀದೇವಿಯು ಸದಾಕಾಲವೂ ನೆರವೇರಿಸುತ್ತಿರುವ ಶ್ರೀಮಹಾವಿಷ್ಣುವಿನ ಪಾದಸೇವೆಯೇ ಇಂಥ ತಪಸ್ಸಾಗಿದೆ. ಇದರ ಫಲವೇ ಈ ಕರ್ದಮಾದಿಋಷಿಗಳೆನ್ನಬಹುದು. ಆದ್ದರಿಂದ ಭಕ್ತನು 'ಎಲೈ ಕರ್ದಮನೆ, ನೀನು ನಮ್ಮ ಮನೆಯಲ್ಲಿ ವಾಸಮಾಡುತ್ತಾ ನಿನ್ನ

ತಾಯಿಯಾದ ಶ್ರೀದೇವಿಯೂ ನಮ್ಮ ಕುಲದಲ್ಲಿಯೇ ನೆಲೆಸುವಂತೆ ಮಾಡು'- ಎಂದು ಕೇಳಿಕೊಂಡಿರುತ್ತಾನೆ.

ಈ ಮಂತ್ರದಲ್ಲಿ ತಾಯಿಮಕ್ಕಳ ಸಂಬಂಧವೂ ಪ್ರಶಸ್ತಳಾದ ಮಾತೆ, ಪೂಜ್ಯನಾದ ಪುತ್ರನ ಆದರ್ಶಗಳೂ ಕಂಡುಬರುವವು. ನಮ್ಮ ಭರತಖಂಡದಲ್ಲಿ ಮಾತೃಭಕ್ತಿ, ಮಾತೃಪ್ರೇಮಕ್ಕೆ ಹೆಸರಾದ ಅನೇಕ ವ್ಯಕ್ತಿಗಳು ಆಗಿಹೋಗಿರುತ್ತಾರೆ. ಶ್ರೀಶಂಕರಾಚಾರ್ಯರ ಮಾತೃಭಕ್ತಿ, ಸುಪ್ರಸಿದ್ಧವಾದುದಾಗಿದೆ. ಶಿವಾಜಿಯು ತಾಯಿಯ ಉಪದೇಶದಿಂದಲೇ ವೀರನೂ ಶೂರನೂ ಗುಣಶಾಲಿಯೂ ಆದನೆಂದು ಇತಿಹಾಸವು ತಿಳಿಸುತ್ತದೆ. ತಾಯಂದಿರುಗಳು ಈ ವಿಚಾರವನ್ನು ಮನಸ್ಸಿಗೆ ತಂದುಕೊಳ್ಳಬೇಕು. ಅವರು ಗೃಹಿಣಿಯರಾಗಿ ಮಕ್ಕಳಿಗೆ ನೀಡಬೇಕಾದ ಪೋಷಣೆ, ಬೋಧೆ, ನಡೆನುಡಿಗಳಿಗೆ ಲೋಪವು ಬರಬಾರದು. ಹಾಗಾಗಲು ಅವರು ತಮ್ಮ ಪತಿದೇವರಲ್ಲಿ ಭಕ್ತಿಯುಳ್ಳವರಾಗಬೇಕು. ಯಜಮಾನನು ಪತ್ನಿ, ಮಕ್ಕಳುಗಳಿಗೆ ಆದರ್ಶನಾಗಲು ತಾನು ಸ್ವತಃ ಗುರು, ಶಾಸ್ತ್ರ , ಸಂಪ್ರದಾಯಗಳ ಅನುಕರಣೆಯನ್ನು ಆಶ್ರಯಿಸಬೇಕು. ಹೀಗೆ ಒಬ್ಬರಿಂದೊಬ್ಬರು ಸಂಸ್ಕೃತರಾದಾಗ ಅಂಥ ಕುಟುಂಬದಲ್ಲಿ ಶ್ರೀದೇವಿಯು ಅಕ್ಕರೆಯಿಂದ ನೆಲಸುವದರಲ್ಲಿ ಸಂಶಯವೇ ಇಲ್ಲ.

***

## ೭. ಶ್ರಿಯಂ ವಾಸಯ ಮೇ ಕುಲೇ

ಶ್ರೀಸೂಕ್ತದ ಹನ್ನೆರಡನೆಯ ಋಕ್ಕನ್ನು ಈಗ ವಿಚಾರಮಾಡೋಣ :

**ಓಂ॥ ಆಪಃ ಸೃಜನ್ತು ಸ್ನಿಗ್ಧಾನಿ ಚಿಕ್ಲೀತ ವಸ ಮೇ ಗೃಹೇ ।**
**ನಿ ಚ ದೇವೀಂ ಮಾತರಂ ಶ್ರಿಯಂ ವಾಸಯ ಮೇ ಕುಲೇ ॥೧೨॥**

**'ಜಲದೇವತೆಗಳು ಸ್ನೇಹಯುಕ್ತವಾದ ಕಾರ್ಯಗಳನ್ನು ಉಂಟುಮಾಡಲಿ! ಎಲೈ ಚಿಕ್ಲೀತನೆ, ನೀನು ನನ್ನ ಮನೆಯಲ್ಲಿ ವಾಸಿಸುವವನಾಗು. ಮತ್ತು ತಾಯಿಯಾದ ಲಕ್ಷ್ಮಿಯನ್ನು ನನ್ನ ಕುಲದಲ್ಲಿ ವಾಸಮಾಡುವಂತೆ ಮಾಡು.'**

ಈ ಮಂತ್ರದಲ್ಲಿ ಚಿಕ್ಲೀತನೆಂಬ ಶ್ರೀಪುತ್ರನನ್ನು ಮನೆಯಲ್ಲಿ ವಾಸಮಾಡುವಂತೆ ಕೇಳಿಕೊಳ್ಳಲಾಗಿದೆ. ಈತನು ನಮ್ಮ ಮನೆಯಲ್ಲಿದ್ದರೆ ಪುತ್ರ ಪ್ರೇಮದಿಂದ ಲಕ್ಷ್ಮಿಯೂ ಬಂದೇಬರುವಳು ಎಂದಭಿಪ್ರಾಯ. ಲಕ್ಷ್ಮೀದೇವಿಯೊಡನೆ ಕೆಲವು ದೇವತೆಗಳೂ ಇರುತ್ತಾರೆ. ಆಕೆಯ ಆಗಮನದಿಂದ ಅವರೆಲ್ಲರೂ ನಮ್ಮ ಮನೆಗೆ ಬರುವವರಾಗುತ್ತಾರೆ. ಹಾಗೆ ದೇವತೆಗಳು ಬಂದಲ್ಲಿ ಏನಾದರೊಂದು ವಿಶೇಷೋತ್ಸವವು ನಡೆಯುವದು. ದೇವತೆಗಳಲ್ಲಿ ಅಪ್- (ಜಲ) ದೇವತೆಗಳನ್ನು ಹೆಸರಿಸಿ ಇಲ್ಲಿ ಲಕ್ಷ್ಮಿಯೊಡನೆ ಕರೆಯಲಾಗಿದೆ. ಜಲದೇವತೆಗಳು ಸ್ನೇಹಗುಣವುಳ್ಳವರು. ಸ್ನೇಹವೆಂದರೆ ಜಿಡ್ಡು ; ಮತ್ತು ಒಂದಕ್ಕೊಂದನ್ನು ಕೂಡಿಸುವ ಗುಣವಿಶೇಷವು. ಹುಡಿಯಾದ ಮಣ್ಣನ್ನು ನೀರು ಹಾಕಿ ಕಲಸಿದರೆ ಮಣ್ಣಿನ ಕಣಗಳು ಒಂದಕ್ಕೊಂದು ಸೇರಿ ಮುದ್ದೆಯಾಗುವದು. ಮುಂದೆ ಅದರಿಂದ ಮಡಕೆಯೇ ಮುಂತಾದವುಗಳನ್ನು ಮಾಡಬಹುದು. ಗೋಡೆಯನ್ನು ಕಟ್ಟಬಹುದು. ಹೀಗೆ ಜಲದೇವತೆಗಳು ತಮ್ಮ ಸ್ನೇಹಗುಣದಿಂದ ಉತ್ತಮವಾದ ಕಾರ್ಯಗಳನ್ನು ಮಾಡಿಸುವರು. ಅದರಂತೆಯೇ ಇಲ್ಲಿಯೂ ಲಕ್ಷ್ಮಿಯೊಡನೆ ಬರಲಿರುವ ಜಲದೇವತೆಗಳು ನಾವು ಕುಟುಂಬದಲ್ಲಿ ಅನ್ಯೋನ್ಯರಾಗಿರುವಂತೆ ಬಂಧುಗಳನ್ನೂ ಮಿತ್ರರನ್ನೂ ಜೊತೆಗೂಡಿಸಲಿ. ಜಿಡ್ಡಾದ ಹಾಲು, ತುಪ್ಪ, ಬೆಣ್ಣೆ- ಇವುಗಳನ್ನು ಸಮೃದ್ಧಿಗೊಳಿಸಲಿ, ಅಂತಃಕರಣದಲ್ಲಿಯೂ ಸ್ನೇಹಭಾವವನ್ನು ಬೆಳೆಯಿಸಿ ಜನರೊಡನೆ ಬೆರೆತು ಬಾಳುವಂತೆ ಮಾಡಲಿ ! ಎಂದು ಪ್ರಾರ್ಥಿಸಲಾಗಿದೆ. ಅನಂತರ ಚಿಕ್ಲೀತಋಷಿಯೂ ನಮ್ಮ ಮನೆಯಲ್ಲಿ ವಾಸಮಾಡಲೆಂದು ಬಯಸಲಾಗಿದೆ. ಆತನು ತನ್ನ ತಾಯಿಯನ್ನು ಕೇವಲ ನಮ್ಮಲ್ಲಿ ಮಾತ್ರವಲ್ಲದೆ ನಮ್ಮ ಕುಲಬಾಂಧವರೆಲ್ಲರ ಮನೆಗಳಲ್ಲಿಯೂ ನೆಲಸುವಂತೆ ಮಾಡಬೇಕೆಂದು ಸ್ತುತಿಸಲಾಗಿದೆ. ಏಕೆಂದರೆ ನಾವು ಮಾತ್ರ ಶ್ರೀಮಂತರಾಗಿ ನಮ್ಮ ದಾಯಾದಿಗಳೂ ಬಂಧುಗಳೂ ಬಡವರಾದರೆ ಅದು ಪೂರ್ಣಸುಖವನ್ನು

ನೀಡುವದಿಲ್ಲ. ಬಾಂಧವ್ಯವೂ ಕಡಿದುಹೋಗುತ್ತದೆ. ಆದ್ದರಿಂದ ನಮ್ಮ ಕುಲದವರೆಲ್ಲ ಶ್ರೀಮಂತರಾಗಿದ್ದಲ್ಲಿ ವ್ಯವಹಾರದಲ್ಲಿ ಸುಖಸಂತೋಷಗಳು ತುಂಬಿರುವವು. ಮತ್ತು ನಮ್ಮ ಮಕ್ಕಳು, ಮೊಮ್ಮಕ್ಕಳ ಕಾಲಕ್ಕೂ ಲಕ್ಷ್ಮೀಯು ಅಚಲಳಾಗಿ ಕುಲದೇವತೆಯಾಗಿ ಅನುಗ್ರಹಿಸಬೇಕೆಂದೂ ಈ ಪ್ರಾರ್ಥನೆಯ ಭಾವವಿದೆ. ಒಬ್ಬ ಸಾಧಕನಿಗ ಲಕ್ಷ್ಮೀಯು ಪ್ರತ್ಯಕ್ಷಳಾಗಿ 'ನಿನಗೇನು ವರವು ಬೇಕು, ಕೇಳಿಕೊ' ಎಂದಳಂತೆ. ಆಗ ಆತನು 'ತಾಯೆ, ನನ್ನ ಮರಿಮಗನು ಚಿನ್ನದ ಪಲ್ಲಕ್ಕಿಯಲ್ಲಿ ಕುಳಿತು ಮೆರವಣಿಗೆ ಮಾಡಿಸಿಕೊಳ್ಳುವದನ್ನು ನಾನು ಕಣ್ಣಿನಿಂದ ನೋಡಬೇಕು' ಎಂದು ವರವನ್ನು ಬೇಡಿದನಂತೆ. ಇದರ ಅರ್ಥವೇನೆಂದರೆ : ಮರಿಮಗನವರೆಗೂ ಸಂತಾನವೂ ಸಂಪತ್ತೂ ತನಗೆ ದೀರ್ಘಾಯುಷ್ಯವೂ ಬೇಕೆಂದಾಗುವದು. ಹೀಗೆ ಕುಲವೆಲ್ಲ ಸಂಪದ್ಯುಕ್ತವಾಗಲೆಂದೇ ಇಲ್ಲಿ 'ಶ್ರಿಯಂ ವಾಸಯ ಮೇ ಕುಲೇ' ಎಂದು ಪ್ರಾರ್ಥಿಸಿರುತ್ತದೆ.

ಈಗ ಹದಿಮೂರನೆಯ ಮಂತ್ರವನ್ನು ನೋಡೋಣ :

**ಓಂ॥ ಆರ್ದ್ರಾಂ ಪುಷ್ಕರಣೀಂ ಪುಷ್ಟಿಂ ಪಿಂಗಲಾಂ ಪದ್ಮಮಾಲಿನೀಮ್ ।**
**ಚಂದ್ರಾಂ ಹಿರಣ್ಮಯೀಂ ಲಕ್ಷ್ಮೀಂ ಜಾತವೇದೋ ಮ ಆವಹ ॥೧೩॥**

**'ಆರ್ದ್ರಗಂಧಧಾರಿಣಿಯೂ ಆನೆಯ ಸೊಂಡಿಲಿನಿಂದ ಅಭಿಷಿಕ್ತವಾಗುತ್ತಿರುವವಳೂ ಪುಷ್ಟಿರೂಪಳೂ ನಸುಗೆಂಪುಬಣ್ಣದವಳೂ ಪದ್ಮದ ಹೂಮಾಲೆಯನ್ನು ಧರಿಸಿದವಳೂ ಚಂದ್ರನಂತೆ ಪ್ರಕಾಶಮಾನಳೂ, ಚಿನ್ನದ ಆಭರಣಗಳಿಂದ ಅಲಂಕೃತಳೂ ಆದ ಲಕ್ಷ್ಮೀಯನ್ನು ಜಾತವೇದನೆ, ನನಗಾಗಿ ಕರೆಯುವವನಾಗು.'**

ಈ ಮಂತ್ರದಲ್ಲಿ ಮತ್ತೆ ಅಗ್ನಿದೇವನನ್ನು ಲಕ್ಷ್ಮೀಪ್ರಾಪ್ತಿಗಾಗಿ ಕೇಳಿಕೊಳ್ಳಲಾಗಿದೆ. ದೇವಿಗೆ ಕೊಟ್ಟಿರುವ ವಿಶೇಷಣಗಳೆಲ್ಲವೂ ಮನನೀಯವಾಗಿವೆ. ಆರ್ದ್ರಾಳೆಂದರೆ ದಯಾರ್ದ್ರಳೆಂದೂ ಅರ್ಥಮಾಡಬಹುದು. ಪುಷ್ಕರಿಣೀ ಎಂದರೆ ಪದ್ಮವಾಸಿನಿಯಾದ ಲಕ್ಷ್ಮೀಯನ್ನು ಆನೆಗಳು ತಮ್ಮ ಸೊಂಡಿಲಿನಿಂದ ಎತ್ತಿದ ನೀರಿನಿಂದ ಅಭಿಷೇಕಮಾಡುತ್ತಿರುವವು - ಅಂಥವಳು ಎಂದಭಿಪ್ರಾಯ. ದೇವಿಯು ಸ್ನಾನಮಾಡಲು ಉಪಕ್ರಮಿಸಿದಾಗ ದಿಗ್ಗಜಗಳೇ ಆಕೆಗೆ ಅಭಿಷೇಕ

ಮಾಡಿಸುವವು. ಇದು ಅವಳ ಐಶ್ವರ್ಯದ ಗುರುತಾಗಿರುವದು. ಹೀಗೆ ಪುಷ್ಕರಣಿಯಾಗಿರುವಳು. ಎಲ್ಲಾ ಪ್ರಾಣಿಗಳಿಗೂ ಶರೀರಕ್ಕೆ ಅಗತ್ಯವಾದ ಪುಷ್ಟಿಯನ್ನೂ ಮಾನವರಿಗೆ ಶರೀರಪುಷ್ಟಿಯ ಜೊತೆಗೆ ಆರ್ಥಿಕಪುಷ್ಟಿಯನ್ನೂ ಉಂಟುಮಾಡುವವಳು - ಎಂದರ್ಥ. ದೇವಿಯ ಅನುಗ್ರಹದಿಂದೊದಗುವ ಆರ್ಥಿಕಪುಷ್ಟಿಯು ಎಂದೆಂದೂ ಸುಖಕರವಾಗಿರುವದು. ಅಧರ್ಮದಿಂದಾದ ಪುಷ್ಟ್ಯಾಭಾಸವು ಮಾನವನನ್ನು ಚಿಂತೆಗೀಡುಮಾಡುವದು. ಆದ್ದರಿಂದ ದೇವತಾರೂಪಳಾದ ಪುಷ್ಟಿಯು ಲಕ್ಷ್ಮಿಯೇ ಆಗಿರುವಳು. ಇನ್ನು ಪಿಂಗಳ ವರ್ಣಳೂ ಪದ್ಮಪುಷ್ಪಗಳ ಮಾಲೆಯನ್ನು ಧರಿಸಿದವಳೂ ಆಗಿ ಮಹಾಲಕ್ಷ್ಮಿಯು ಭಕ್ತರಿಗೆ ತೋರಿಕೊಳ್ಳುತ್ತಿರುವಳು. ಮತ್ತು ಚಂದ್ರನಂತೆ ತಂಪಾದ ಕಾಂತಿಯುಳ್ಳವಳಾಗಿರುವಳು. ಹಿರಣ್ಮಯಿ ಎಂದರೆ ಒಮ್ಮೊಮ್ಮೆ ಹೊಂಬಣ್ಣ-ದವಳಾಗಿಯೂ ಆಕೆಯು ತೋರಿಕೊಳ್ಳುವಳು. ಆಕೆಯ ಶರೀರವು ಪುಟವಿಟ್ಟ ಚಿನ್ನದ ಬಣ್ಣದ್ದಾಗಿರುವದು. ಇಂಥವಳಾದ ಲಕ್ಷ್ಮಿಯನ್ನು ಎಲೈ ಜಾತವೇದನೆ, ಕರೆಯುವವನಾಗು - ಎಂದು ಕೇಳಿಕೊಂಡಿದೆ. ಒಟ್ಟಿನಲ್ಲಿ ನಾವಾಗಿಯೇ ಸ್ವತಂತ್ರವಾಗಿ ಲಕ್ಷ್ಮಿಯನ್ನು ಕರೆಯುವದಕ್ಕಿಂತಲೂ ನಮ್ಮ ಪರವಾಗಿ ಅಗ್ನಿದೇವನು ಕರೆದರೆ ಆಕೆಯು ಬೇಗ ಪ್ರಸನ್ನಳಾಗುವಳೆಂದೂ ಭಕ್ತನ ಅಭಿಪ್ರಾಯವಿದೆ. ಇದೇ ಕಾರಣದಿಂದ ಮುಂದಿನ ಮಂತ್ರದಲ್ಲಿಯೂ ಇನ್ನೂ ಅನೇಕ ಗುಣವಿಶಿಷ್ಟಳಾದ ಶ್ರೀದೇವಿಗೆ ಆಹ್ವಾನವು ಇದೆ. ಅದನ್ನು ಈಗ ವಿಚಾರಮಾಡೋಣ :

**ಓಂ॥ ಆರ್ದ್ರಾಂ ಯಃ ಕರಿಣೀಂ ಯಷ್ಟಿಂ ಸುವರ್ಣಾಂ ಹೇಮಮಾಲಿನೀಮ್**
**ಸೂರ್ಯಾಂ ಹಿರಣ್ಮಯೀಂ ಲಕ್ಷ್ಮೀಂ ಜಾತವೇದೋ ಮ ಆವಹ ॥ ೧೪ ॥**

**'ಆರ್ದ್ರಳೂ ದಂಡಧಾರಿಣಿಯೂ ದಂಡರೂಪಳೂ ಶೋಭನವಾದ ವರ್ಣವುಳ್ಳವಳೂ ಚಿನ್ನದಮಾಲೆಗಳಿಂದಲಂಕೃತಳೂ ಸೂರ್ಯನಂತೆ ಪ್ರಕಾಶಮಾನಳೂ ಹಿರಣ್ಮಯಿಯೂ ಆದ ಲಕ್ಷ್ಮಿಯನ್ನು ಎಲೈ ಜಾತವೇದನೆ, ನನಗಾಗಿ ಕರೆಯುವವನಾಗು.'**

ಹಿಂದಿನ ಮಂತ್ರಕ್ಕಿಂತ ಇಲ್ಲಿ ಅಧಿಕವಾಗಿರುವ ವಿಶೇಷಣಗಳನ್ನು ವಿಚಾರ ಮಾಡೋಣ. ದೇವಿಯು ದಂಡಧಾರಿಣಿಯಾಗಿದ್ದಾಳೆಂದೂ ದಂಡರೂಪಳೂ ಆಗಿರುವಳೆಂದೂ ಇಲ್ಲಿ ತಿಳಿಸಿದೆ. ಇದು ಸರಿಯೆ. ರಾಜನ ಕೈಯಲ್ಲಿರುವ ಧರ್ಮದಂಡವು ದೇವಿಯ ಪ್ರತಿನಿಧಿಯಾಗಿದೆ. ಈಗಿನ ಕಾಲಕ್ಕೂ ಕಾನೂನಿನ ರೂಪವಾದ ದಂಡವಿದ್ದೇ ಇದೆ. ದಂಡಭಯವಿಲ್ಲದೆ ಪ್ರಜೆಗಳನ್ನು ಆಳುವದಾದರೂ ಹೇಗಾದೀತು? ನ್ಯಾಯಸಮ್ಮತವಾದ ದಂಡವು (ಶಿಕ್ಷೆಯು) ದೇವಿಯೇ ವಿಧಿಸುವ ಸ್ವರೂಪದ್ದಾಗಿದೆ. ಶ್ರೀದೇವಿಯನ್ನು ಕುರಿತು ಲಲಿತಾ ಸಹಸ್ರನಾಮಗಳಲ್ಲಿ ಸ್ತುತಿಸುವಾಗ ವಶಿನೀ, ದಂಡಿನೀ- ಮುಂತಾದ ತನ್ನ ಶಕ್ತಿ ದೇವಿಯರನ್ನು ಲೋಕರಕ್ಷಣೆಗಾಗಿ ನೇಮಕಮಾಡಿರುತ್ತಾಳೆಂತ ತಿಳಿಸಿದೆ. ದೇವಿಯ ರಾಜ್ಯಭಾರಕ್ರಮವೂ ಆಕೆಯ ದುಷ್ಟನಿಗ್ರಹ - ಶಿಷ್ಟಪರಿಪಾಲನಾದಿಗಳೂ ದೇವಿಪುರಾಣಗಳಲ್ಲಿ ವರ್ಣಿತವಾಗಿರುತ್ತವೆ. ಶ್ರೀಚಕ್ರರಾಜನಿಲಯಳಾದ ಶ್ರೀದೇವಿಯು ಹೀಗೆ ಯಃಕರಿಣಿಯೂ ಯಷ್ಟಿಯೂ ಆಗಿದ್ದಾಳೆ. ಇನ್ನು ಶೋಭನವಾದ ವರ್ಣವುಳ್ಳವಳೂ ಚಿನ್ನದ ಹಾರಗಳಿಂದ ಅಲಂಕೃತಳೂ ಆಗಿರುವಳು. ಲೋಕದಲ್ಲಿ ಚಿನ್ನದ ಸರಗಳನ್ನು ಹಾಕಿಕೊಂಡು ಓಡಾಡುವ ಸ್ತ್ರೀಯರನ್ನು ನಾವು ಶ್ರೀಮಾತೆಯರೆಂದೇ ಭಾವಿಸಬೇಕು. ಇಂಥ ದೇವಿಯು ಕಾಂತಿಯಲ್ಲಿ ಸೂರ್ಯನನ್ನೂ ಮೀರಿಸಿದವಳು. ಆಕೆಯು ಜಗತ್ತನ್ನೇ ಉಂಟು ಮಾಡುವ ಮೂಲಪ್ರಕೃತಿರೂಪಿಣಿಯಾದ್ದರಿಂದ ಸೂರ್ಯಚಂದ್ರರುಗಳೆಲ್ಲ ಅವಳ ಅಂಶಭೂತರೇ ಆಗಿರುವರು. ಇಂಥ ಹಿರಣ್ಮಯಳಾದ ಶ್ರೀಮಾತೆಯನ್ನು ಕರೆಯಬೇಕೆಂದು ಅಗ್ನಿದೇವನಿಗೆ ಕೇಳಿಕೊಳ್ಳಲಾಗಿದೆ. ಆತನು ದೇವಿಗೂ ನಮಗೂ ನಡುವೆ ಇರುವವನಾದ್ದರಿಂದ ದೇವಿಯನ್ನು ನಮ್ಮ ಬಳಿಗೆ ಕರೆತರಲು ತಕ್ಕವನು - ಎಂದಭಿಪ್ರಾಯ.

***

# ೮. ಶ್ರೀಕಾಮಃ ಸತತಂ ಜಪೇತ್

ಶ್ರೀಸೂಕ್ತದ ಹದಿನೈದನೆಯ ಋಕ್ಕನ್ನು ಈಗ ವಿಚಾರಮಾಡಬೇಕಾಗಿದೆ. ಅದು ಹೀಗಿದೆ:

**ಓಂ|| ತಾಂ ಮ ಆವಹ ಜಾತವೇದೋ ಲಕ್ಷ್ಮೀಮನಪಗಾಮಿನೀಮ್ ।**
**ಯಸ್ಯಾಂ ಹಿರಣ್ಯಂ ಪ್ರಭೂತಂ ಗಾವೋ ದಾಸ್ಯೋಽಶ್ವಾನ್ ವಿಂದೇಯಂ ಪುರುಷಾನಹಮ್ ||೧೫||**

**'ಎಲೈ ಜಾತವೇದನೆ, ಯಾವ ಲಕ್ಷ್ಮಿಯ ಪ್ರಾಪ್ತಿಯಲ್ಲಿ ನಾನು ಸಮೃದ್ಧವಾದ ಚಿನ್ನವನ್ನೂ ಗೋವುಗಳನ್ನೂ ದಾಸಿಯರನ್ನೂ ಕುದುರೆಗಳನ್ನೂ ಪುರುಷರನ್ನೂ ಪಡೆಯಬಲ್ಲೆನೋ ಅಂಥ ಅನಪಗಾಮಿನಿಯಾದ ಲಕ್ಷ್ಮಿಯನ್ನು ನನಗೆ ತಂದುಕೊಡು.'**

ಈ ಮಂತ್ರವು ಎರಡನೆಯ ಮಂತ್ರದಂತೆಯೇ ಇರುವದರಿಂದ ವ್ಯಾಖ್ಯಾನಮಾಡಿಲ್ಲವೆಂತ ಭಾಷ್ಯದಲ್ಲಿ ಬರೆದಿದೆ. ನಾನು ಕೂಡ ಎರಡನೆಯ ಮಂತ್ರದ ವಿವರಣೆಯಲ್ಲಿ ಕೆಲವು ವಿಷಯಗಳನ್ನು ವಿಜ್ಞಾಪಿಸಿದ್ದೇನೆ. ಆದರೂ ಇಲ್ಲಿ ಮತ್ತೊಮ್ಮೆ ಈ ಮಂತ್ರವು ಬಂದಿರುವದರಿಂದ ಸ್ವಲ್ಪ ವಿವರಣೆಯನ್ನು ನೀಡುವೆನು. ಇಲ್ಲಿ ಜಾತವೇದನನ್ನು ಅನಪಗಾಮಿನಿಯಾದ ಲಕ್ಷ್ಮಿಯನ್ನು ನಿಮ್ಮಲ್ಲಿಗೆ ಕರೆಯುವಂತೆ ಕೇಳಿಕೊಳ್ಳಲಾಗಿದೆಯಷ್ಟೆ! ಆಕೆಗೆ ಹೆಚ್ಚಿನ ಗುಣಗಳನ್ನೂ ಇಲ್ಲಿ ಜೋಡಿಸಲಾಗಿದೆ. ಲಕ್ಷ್ಮಿಯು ಒಂದೇ ರೂಪದಲ್ಲಿದ್ದರೆ ಮನುಷ್ಯನಿಗೆ ತೃಪ್ತಿಯಿಲ್ಲ. ಉದಾಹರಣೆಗೆ ಒಬ್ಬನ ಹತ್ತಿರ ಒಂದು ನೂರು ರೂಪಾಯಿಗಳ ಒಂದು ನೋಟು ಇದೆ - ಎಂದು ಭಾವಿಸೋಣ. ಆದರೆ ಅವನಿಗೆ ಚಳಿಯಾದರೆ ಅದು ಅವನ ಶೀತವನ್ನು ಹೋಗಲಾಡಿಸಲಾರದು. ಹಾಗೆಯೇ ಹಸಿವಾದರೆ ತಿನ್ನಲು ಬರಲಾರದು. ಮಲಗಬೇಕೆಂದರೆ ಹಾಸಿಗೆಯಾಗಲಾರದು. ಆದ್ದರಿಂದ ನೋಟಿನ ರೂಪದ ಲಕ್ಷ್ಮಿಯು ಮಾತ್ರವೇ ಮಾನವನಿಗೆ ತೃಪ್ತಿಯನ್ನುಂಟುಮಾಡಲಾರಳು. ಅವಳು ಅನ್ನ, ಬಟ್ಟೆ, ಕುಟುಂಬ, ಆಳುಕಾಳು, ವಾಹನಗಳು, ಅಧಿಕಾರ, ಕೀರ್ತಿ-ಮುಂತಾದವುಗಳ ರೂಪದಿಂದಲೂ ಒಲಿಯಬೇಕು. ಅದಕ್ಕಾಗಿ ಭಕ್ತನು ಇಲ್ಲಿ ಹೀಗೆ ಕೇಳಿಕೊಂಡಿದ್ದಾನೆ. 'ಯಾವ ದೇವಿಯ ಪ್ರಾಪ್ತಿಯಿಂದ - ಎಂದರೆ ಪ್ರಸನ್ನತೆಯಿಂದ

ನಾನು ಹಿರಣ್ಯಾದಿಗಳನ್ನು ಹೊಂದಬಲ್ಲೆನೊ - ಅಂಥ ದೇವಿಯು ನನ್ನ ಬಳಿಗೆ ಬರಲಿ '- ಎಂದಿರುತ್ತಾನೆ.

ಈ ವಿವರಣೆಯಲ್ಲಿ ಚಿನ್ನವನ್ನು ದೇವಿಯ ಮೊದಲನೆಯ ವಿಭೂತಿಯಾಗಿ ಸ್ವೀಕರಿಸಿದೆ. ಇದು ಎಲ್ಲಾ ಕಾಲಕ್ಕೂ ನಿತ್ಯವಾಗಿ ದೇವಿಯ ಪ್ರತಿನಿಧಿಯೆಂದಾಯಿತು. ಈಗಲೂ ಚಿನ್ನದ ಆಧಾರದಿಂದಲೇ ನೋಟುಗಳ ಚಲಾವಣೆಯು ಜಾರಿಯಲ್ಲಿದೆ. ಹೆಚ್ಚಿನ ಚಿನ್ನವಿದ್ದಷ್ಟೂ ಮಾನವನು ಶ್ರೀಮಂತನೆನಿಸುವನು. ಆದ್ದರಿಂದಲೇ ನೋಟುಗಳನ್ನೆಲ್ಲ ಜನರು ಈಗಲೂ ಚಿನ್ನವಾಗಿ ಪರಿವರ್ತಿಸಿಕೊಳ್ಳುತ್ತಿದ್ದಾರೆ. ಚಿನ್ನದ ಬೆಲೆ ಏರಲು ಇದೇ ಕಾರಣವು. ಇರಲಿ. ಎರಡನೆಯ ವಿಭೂತಿಯಾಗಿ ಗೋವುಗಳನ್ನು ಹೆಸರಿಸಲಾಗಿದೆ. ಹಿಂದಿನ ಕಾಲಕ್ಕೆ ನಾಣ್ಯಗಳ ಬದಲು ಗೋವುಗಳು ಚಲಾವಣೆಯಲ್ಲಿದ್ದವು. ಯಜ್ಞದಲ್ಲಿ ದಕ್ಷಿಣೆ ಕೊಡುವಾಗ ಹತ್ತು, ನೂರು- ಹೀಗೆ ಗೋವುಗಳನ್ನೇ ಕೊಡುತ್ತಿದ್ದರು. ಬೃಹದಾರಣ್ಯಕೋಪನಿಷತ್ತಿನ ಕಥೆಯಲ್ಲಿಯೂ ಜನಕಚಕ್ರವರ್ತಿಯು ಬ್ರಹ್ಮಿಷ್ಠರನ್ನು ಗುರುತಿಸುವದಕ್ಕೆ ಪಣವಾಗಿ ಗೋವುಗಳನ್ನೇ ಸಹಸ್ರಸಂಖ್ಯೆಯಲ್ಲಿ ಚಿನ್ನದ ಒಡವೆಗಳಿಂದ ಅಲಂಕರಿಸಿ ವಿಪ್ರರ ಮುಂದಿಟ್ಟಿದ್ದನೆಂದು ತಿಳಿಸಿದೆ. ಗೋವುಗಳಿಗೂ ಚಿನ್ನಕ್ಕೂ ಶ್ರೀದೇವಿಯ ಅಂಶವನ್ನು ಜೋಡಿಸಲಾಗಿದೆ. ಆದ್ದರಿಂದ ಹೆಚ್ಚಿನ ಗೋವುಗಳು ಯಾವ ದೇಶದಲ್ಲಿರುವವೋ ಆ ದೇಶವು ಸುಭಿಕ್ಷವೂ ಸಂಪತ್ಸಮೃದ್ಧವೂ ಆಗಿರುವದೆಂದಾಯಿತು. ವಿರಾಟನಗರದಲ್ಲಿ ಕೌರವರು ಗೋಗ್ರಹಣ ಮಾಡಿದ್ದಕ್ಕೆ ಇದೇಕಾರಣವು. ಹೆಚ್ಚಾಗಿ ಗೋವುಗಳಿದ್ದು ಸುಭಿಕ್ಷವಾಗಿದ್ದರೆ ಅಂಥ ದೇಶದಲ್ಲಿ ಧರ್ಮವು ನೆಲೆಸಿರುವದೆಂದೂ ಪಾಂಡವರಿರುವಲ್ಲಿ ಧರ್ಮವು ಇರುವದೆಂದೂ ಊಹಿಸಿಯೇ ಪಾಂಡವರನ್ನು ಪತ್ತೆಮಾಡಲು ಕೌರವರು ಗೋಗ್ರಹಣಮಾಡಿದರು. ಇದರಿಂದಲೂ ತಿಳಿಯಬರುವದೇನೆಂದರೆ : ಗೋವುಗಳು ಧರ್ಮಕ್ಕೂ ಲಕ್ಷ್ಮೀದೇವಿಗೂ ಪ್ರತಿನಿಧಿಗಳೆಂದಾಗುತ್ತವೆ. ಇಂಥ ಗೋವುಗಳನ್ನು ನಾನು ಪಡೆಯುವಂತಾಗಲಿ- ಎಂದು ಇಲ್ಲಿ ಭಕ್ತನ ಪ್ರಾರ್ಥನೆಯಿದೆ. ಅನಂತರ ದಾಸಿಯರು, ಅಶ್ವಗಳು, ಪುರುಷರು ಬೇಕು - ಎಂದು ಪ್ರಾರ್ಥಿಸಿದೆ. ದಾಸ್ಯವು ಮಾನವತೆಯಲ್ಲಿ ಒಂದು

ಕಳಂಕವೆಂದು ಈಗಿನ ಸಮಾಜಸುಧಾರಕರು ಹೇಳುತ್ತಾರೆ. ಆದರೆ ವ್ಯವಹಾರದಲ್ಲಿ ದಾಸ-ದಾಸಿಯರಿಲ್ಲದೆ ಎಲ್ಲರೂ ಅಧಿಕಾರಿಗಳೇ ಆಗಿ ಮೆರೆಯಲಾದೀತೆ? ಎಲ್ಲರೂ ಪಲ್ಲಕ್ಕಿಯಲ್ಲೇ ಕುಳಿತರೆ ಹೊರುವವರಾರು? ಆದ್ದರಿಂದ ಪ್ರಪಂಚವಿರುವವರೆಗೂ ವ್ಯವಹಾರವು ಸಾಗುವದಕ್ಕಾಗಿ ತಾರತಮ್ಯವೂ ಸ್ವಾಮಿ-ಭೃತ್ಯಭೇದವೂ ಬೇಕೇಬೇಕು. ಆದರೆ ಸ್ವಾಮಿಯು ತನ್ನ ಭೃತ್ಯರಲ್ಲಿ ಹೇಗೆ ಪ್ರೇಮವುಳ್ಳವನಾಗಿರಬೇಕು? ಭೃತ್ಯನು ಹೇಗೆ ಸ್ವಾಮಿಭಕ್ತಿನಿಷ್ಠನಾಗಿರಬೇಕು? ಎಂಬ ಆದರ್ಶಗಳನ್ನು ಮಾತ್ರ ಪ್ರತಿಯೊಬ್ಬನೂ ಕಲಿಯಬೇಕು. ಆಗ ನಾವು ಪ್ರಪಂಚದಲ್ಲಿ ರಾಮನಂಥ ಸ್ವಾಮಿಯಾದರೂ ಅಥವಾ ಹನುಮನಂಥ ಭೃತ್ಯನಾದರೂ ದುಃಖಿಸಬೇಕಾಗಿಲ್ಲ. ಉದ್ಧಾರವಾಗುವೆವು. ಇರಲಿ. ಈ ಭೃತ್ಯಸಂಪತ್ತನ್ನು ಹಾಗೂ ತನ್ನ ಅನುಯಾಯಿಗಳಾದ ಪುರುಷರ ಸಮೂಹವನ್ನೂ ಲಕ್ಷ್ಮಿಯ ಅನುಗ್ರಹವೆಂದೇ ತಿಳಿಯಬೇಕು. ಹಾಗೆಯೇ ಸಂಚಾರಕ್ಕಾಗಿ ಕುದುರೆಗಳು. ಇವೂ ಶ್ರೀದೇವಿಯ ಪ್ರತಿನಿಧಿಗಳೇ ಆಗಿವೆ. ಈಗಿನ ಕಾಲಕ್ಕೆ ಕುದುರೆಗಳ ಬದಲು ಕಾರು, ಸ್ಕೂಟರ್- ಮುಂತಾದ ತೈಲವಾಹನಗಳು ಬಂದಿವೆ. ಇವುಗಳು ಶ್ರೀಮಂತಿಕೆಗೆ ಗುರುತೆಂದು ಹೇಳಬೇಕಾಗಿಯೇ ಇಲ್ಲ. ಆದ್ದರಿಂದ ಮೇಲ್ಕಂಡ ರೀತಿಯ ಚಿನ್ನ, ಗೋವು ಮುಂತಾಗಿ ಎಲ್ಲಾ ವಿಧವಾದ ಧನಕನಕ-ಪಶು-ಭೃತ್ಯ-ಪರಿಜನ-ಬಾಂಧವಾದಿ ಸಕಲರೂಪದ ಐಶ್ವರ್ಯಗಳನ್ನೂ ಶ್ರೀದೇವಿಯು ನಾನಾರೂಪಗಳಿಂದ ನನಗೆ ಮಳೆಗರೆಯಲಿ - ಎಂದು ಕೇಳಿಕೊಂಡಿದೆ.

ಈಗ ಹದಿನಾರನೆಯ ಮಂತ್ರವನ್ನು ನೋಡೋಣ :

**ಓಂ|| ಯಃ ಶುಚಿಃ ಪ್ರಯತೋ ಭೂತ್ವಾ ಜುಹುಯಾದಾಜ್ಯಮನ್ವಹಮ್ ।**
**ಶ್ರಿಯಃ ಪಂಚದಶರ್ಚಂ ಚ ಶ್ರೀಕಾಮಃ ಸತತಂ ಜಪೇತ್ ॥೧೬॥**

**'ಯಾವನು ಶುಚಿರ್ಭೂತನಾಗಿ ಶ್ರದ್ಧೆಯಿಂದ ಕೂಡಿ ಪ್ರತಿದಿನವೂ ತುಪ್ಪವನ್ನು (ಶ್ರೀಸೂಕ್ತದ) ಹದಿನೈದು ಋಕ್ಕುಗಳಿಂದ ಹೋಮಮಾಡುವನೋ ಅವನು ಶ್ರೀಯನ್ನು ಹೊಂದುವನು. ಆದ್ದರಿಂದ ಶ್ರೀದೇವಿಯ ಸ್ತುತಿರೂಪವಾದ ಈ ಹದಿನೈದು ಋಕ್ಕುಗಳನ್ನು ಲಕ್ಷ್ಮೀಕಾಮನಾದವನು ಜಪಿಸಬೇಕು.'**

ಈ ಮಂತ್ರದಲ್ಲಿ ಶ್ರೀಸೂಕ್ತಜಪಕ್ಕೆ ಫಲವನ್ನು ಹೇಳಿದೆ. ಹದಿನೈದು ಋಕ್ಕುಗಳೆಂದು ಸಂಖ್ಯಾನಿರ್ದೇಶವಿರುವದರಿಂದ ಈ ಋಕ್ಕಿನಿಂದ ಮುಂದಿನ ಭಾಗವೆಲ್ಲವೂ ಶ್ರೀಸೂಕ್ತದ 'ಪರಿಶಿಷ್ಟ'ವಾಗಿದೆಯೆಂದು ಹೇಳಬಹುದು. ಆದ್ದರಿಂದಲೇ ಪಾಠಗಳಲ್ಲಿ ಹೆಚ್ಚುಕಡಿಮೆಗಳೂ ವ್ಯತ್ಯಾಸಗಳೂ ಇವೆ. ಇರಲಿ. ಪ್ರಕೃತ - ಈ ಮಂತ್ರಗಳನ್ನು ಜಪ-ಹೋಮಗಳೆರಡರಲ್ಲಿಯೂ ವಿನಿಯೋಗಿಸಲಾಗಿದೆ. ಸಾಮಾನ್ಯವಾಗಿ ಜಪಮಾಡಿದ ಸಂಖ್ಯೆಗೆ ದಶಾಂಶವಾಗಿ ಹೋಮಮಾಡಬೇಕೆಂದೂ ಮಂತ್ರಗಳನ್ನು ಸದಾ ಜಪಿಸುತ್ತಿರಬೇಕೆಂದೂ ತಿಳಿಸಿದೆ. ಹೇಗೆ ಇರಲಿ, ಈಗಿನ ಕಾಲದಲ್ಲಿ ದೇವರ ಪೂಜೆಗೆ ಶ್ರೀಸೂಕ್ತವನ್ನು ಶೈವ - ವೈಷ್ಣವ ಸಂಪ್ರದಾಯದವರೆಲ್ಲರೂ ಸಮಾನವಾಗಿ ಬಳಸುತ್ತಾರೆ. ಶ್ರೀವೈಷ್ಣವರು ಕಡೆಯಲ್ಲಿ ಕೆಲವು ಹೆಚ್ಚಿನ ಶ್ಲೋಕಗಳನ್ನೂ ಸೇರಿಸಿಕೊಂಡಿರುತ್ತಾರೆ. ಅಂತೂ ಅರ್ಥಾನುಸಂಧಾನಪೂರ್ವಕವಾಗಿ ಶ್ರೀಕಾಮನಾದವನು ಪ್ರತಿದಿನವೂ ಈ ಶ್ರೀಸೂಕ್ತವನ್ನು ಜಪಮಾಡಬೇಕು - ಎಂದು ಗೊತ್ತಾಗುತ್ತದೆ.

ಇಲ್ಲಿರುವ ಶುಚಿಃ, ಪ್ರಯತಃ - ಎಂಬ ವಿಶೇಷಣಗಳನ್ನು ಗಮನಿಸಬೇಕು. ಶುಚಿಯಾಗಿರುವದೆಂದರೆ ಹೊರಗಿನ ಶೌಚದ ಜೊತೆಗೆ ಅಂತಃಕರಣಶುದ್ಧಿಯೂ ಅಗತ್ಯವಾಗಿರುತ್ತದೆ. ಮುಂದೆ 'ನ ಕ್ರೋಧೋ....' ಎಂಬ ಮಂತ್ರವಿರುವದರಿಂದ ದೇವೀಭಕ್ತನಾಗುವ ಮೊದಲು ರಾಗದ್ವೇಷಗಳನ್ನು ದೂರವಿರಿಸಲು ಪ್ರಯತ್ನಮಾಡಬೇಕು. ಅನಂತರ ಶ್ರೀಸೂಕ್ತಜಪದಿಂದ ಆ ದೋಷಗಳನ್ನು ಗೆಲ್ಲಬೇಕು. **ನಿಜವಾಗಿಯೂ ರಾಗದ್ವೇಷಗಳಿಲ್ಲದವನಾದರೆ ಅವನಂಥ ಐಶ್ವರ್ಯವಂತನೇ ಜಗತ್ತಿನಲ್ಲಿ ಬೇರೊಬ್ಬನಿರಲಾರನು.** ಏಕೆಂದರೆ ಅವನು ಆತ್ಮಕಾಮನೂ ಆಗಿಬಿಡುವನು. ವಿಶ್ವೈಶ್ವರ್ಯವೂ ಅವನದೇ ಆಗುವದು. ಹೀಗೆಂದು ಶ್ರುತಿಗಳಲ್ಲಿ ತಿಳಿಸಿದೆ. ಮತ್ತು ಪ್ರಯತಃ - ಎಂದರೆ ಶ್ರದ್ಧಾಯುಕ್ತನಾಗಿ ಪಠಿಸಬೇಕಾದದ್ದು ಸಹ ಮುಖ್ಯವಾಗಿದೆ. ನಾವು ಆಪ್ತಕಾಮರಾಗುವ ಗುರಿಯನ್ನಿಟ್ಟುಕೊಂಡು ಸದ್ಯಕ್ಕೆ ಶ್ರದ್ಧಾಯುಕ್ತರಾಗಿ ಪ್ರತಿದಿನವೂ ಶ್ರೀಸೂಕ್ತಪಾಠವನ್ನು ಕರ್ತವ್ಯವಾಗಿರಿಸಿಕೊಳ್ಳಬೇಕು. ಮುಂದಿನ ಮಂತ್ರಗಳ ಅಭಿಪ್ರಾಯಗಳನ್ನೂ ಕ್ರಮವಾಗಿ ಕೊಡುತ್ತಾ ಹೋಗುವೆನು.

***

# ೯. ತ್ವತ್ಪಾದಪದ್ಮಂ ಮಯಿ ಸನ್ನಿಧತ್ಸ್ವ

ಶ್ರೀಸೂಕ್ತದ ಪ್ರಧಾನವಾದ ಹದಿನೈದು ಋಕ್ಕುಗಳೂ ಫಲಶ್ರುತಿಯೂ ಪೂರೈಸಿವೆ. ಮುಂದಿನ ಭಾಗವು ಮಾತ್ರ ನಾನಾಕಾರಣಗಳಿಂದ ಅನೇಕ ಪಾಠಾಂತರಗಳಾಗಿ ಪ್ರಚಾರದಲ್ಲಿವೆ. ಆದ್ದರಿಂದ ನಾನು 'ಋಗ್ವೇದಸಂಹಿತಾ ಭಾಷ್ಯ' (ಪದಪಾಠಸಹಿತ)- ಎಂಬ ಗ್ರಂಥದ ಎಂಟನೆಯ ಅಷ್ಟಕದ ಪರಿಶಿಷ್ಟ ಭಾಗದಲ್ಲಿ ಮುದ್ರಿಸಿರುವ ಪಾಠವನ್ನು ಆಧಾರವಾಗಿರಿಸಿಕೊಂಡು ಮುಂದಿನ ಮಂತ್ರಗಳನ್ನು ಬರೆದುಕೊಂಡು ವಿವರಿಸಲಿದ್ದೇನೆ. ಅದರಂತೆ ಹದಿನೇಳನೆಯ ಋಕ್ಕು ಹೀಗಿದೆ:

**ಓಂ॥ ಪದ್ಮಾನನೇ ಪದ್ಮಿನಿ ಪದ್ಮಪತ್ರೇ ।**
**ಪದ್ಮಪ್ರಿಯೇ ಪದ್ಮದಲಾಯತಾಕ್ಷಿ ।**
**ವಿಶ್ವಪ್ರಿಯೇ ವಿಶ್ವಮನೋಽನುಕೂಲೇ ।**
**ತ್ವತ್ಪಾದಪದ್ಮಂ ಮಯಿ ಸನ್ನಿಧತ್ಸ್ವ ॥೧೭॥**

**'ಪದ್ಮದಂತೆ ಮುಖವುಳ್ಳವಳೆ, ಪದ್ಮಾಕಾರಳೆ, ಪದ್ಮದ ಎಸಳಿನಂತೆ (ಮೈಬಣ್ಣ)ವುಳ್ಳವಳೆ, ಪದ್ಮಪ್ರಿಯಳೆ, ಪದ್ಮದಲದಂತೆ ವಿಶಾಲನೇತ್ರಳೆ, ಜಗತ್ತಿಗೆ ಪ್ರಿಯಳಾದವಳೆ. ಎಲ್ಲರ ಅಂತಃಕರಣಕ್ಕೂ ಮೆಚ್ಚಾದವಳೆ, ನಿನ್ನ ಪಾದಕಮಲಗಳನ್ನು ನನ್ನಲ್ಲಿಡು.'**

ಈ ಸ್ತುತಿಯಲ್ಲಿ ದೇವಿಯನ್ನು ಪದ್ಮಪುಷ್ಪದ ಉಪಮಾನಗಳಿಂದ ವರ್ಣಿಸಿದ ಅನಂತರ ಜಗತ್ತಿಗೆಲ್ಲ ಪ್ರಿಯಳೆಂದೂ ಹೊಗಳಿದೆ. ಲಕ್ಷ್ಮಿಯು ಎಲ್ಲರಿಗೂ ಮೆಚ್ಚಾದವಳೆಂಬುದು ನಿಜ. ಆದರೆ ಆಕೆಯನ್ನು ಭಕ್ತಿಯಿಂದ ಆರಾಧಿಸುವವರು ಮಾತ್ರ ಭಕ್ತರೆನಿಸುತ್ತಾರೆ. ಧನಕನಕಾದಿರೂಪದಿಂದ ನಮ್ಮನ್ನು ಅನುಗ್ರಹಿಸುತ್ತಿರುವ ದೇವಿಯನ್ನು ಎಷ್ಟೋ ಜನರು ಮರೆತೇ ಇರುತ್ತಾರೆ. ಅವರಿಗೆ ಹಣವೆಂಬುದು ದೇವಿಯ ಪ್ರತಿನಿಧಿಯೆಂಬ ಭಾವನೆ ಇರುವದಿಲ್ಲ. ಇವುಗಳನ್ನೆಲ್ಲ ನಾನೇ ಸಂಪಾದಿಸಿದ್ದು- ಎಂಬ ಅಹಂಕಾರವು ಮಾತ್ರ ಇರುವದು. ಆದರೆ ಇಂಥವರಲ್ಲಿ ದೇವಿಯು ಶಾಶ್ವತವಾಗಿ ನೆಲಸಲಾರಳು. ಮತ್ತು ದೇವಿಯು

ಅನುಕೂಲಳೂ ಆಗಲಾರಳು. ಆದ್ದರಿಂದ ನಾವು ಶ್ರೀದೇವಿಯನ್ನು ವಿಶ್ವಪ್ರಿಯಳೆಂದು ಸ್ತುತಿಸಿದರೆ ಸಾಲದು ; ಆಕೆಯನ್ನು ವಿಶ್ವದ ಕಲ್ಯಾಣಕ್ಕಾಗಿಯೇ ತೊಡಗಿಸಬೇಕು. ದೇವಿಯನ್ನು ಗೋಪ್ಯವಾಗಿರಿಸಿ ನನ್ನವಳೆಂದು ಅಭಿಮಾನವಿಟ್ಟುಕೊಂಡಿರುವವನಿಗೆ ಆಕೆಯ ವಿಶ್ವರೂಪದರ್ಶನವಾಗಲಾರದು. ಜ್ಞಾನನಾದವನು ಆ ದೇವಿಯ ಮಹಿಮೆಯನ್ನರಿಯಬೇಕಾದರೆ ಸಾವಿರಾರು ಜನರಿಗೆ ಉಪಕಾರವಾಗುವಂಥ ಉದ್ಯೋಗಗಳಲ್ಲಿ ಧನವನ್ನು ತೊಡಗಿಸಿ ಎಲ್ಲಾ ರೂಪದಿಂದಲೂ ಆಕೆಯ ಉಪಾಸನೆಯನ್ನು ಕೈಗೊಳ್ಳಬೇಕು. ವಿತರಣೆ( ದಾನ) ಎಂಬುದು ದೇವಿಯನ್ನು ವಿಶ್ವಪ್ರಿಯಳಾಗಿಸುವ ಸಾಧನವಾಗಿದೆ. ಹೀಗೆ ಮಾಡುವವನಿಗೆ ಆಕೆಯು ಕೀರ್ತಿರೂಪದಿಂದಲೂ ಒಲಿಯುತ್ತಾಳೆ. ಆದ್ದರಿಂದ ದೇವಿಯನ್ನು ನಮ್ಮ ಮನೆಗೆ ಪಾದಗಳನ್ನು ಬೆಳೆಸುವಂತೆ ಮೊದಲು ಸಾಧಕನು ಇಲ್ಲಿ ಪ್ರಾರ್ಥಿಸಿರುತ್ತಾನೆ. ಬಹುಜನರಿಗೆ ದೇವಿಯನ್ನು ಕರೆಯುವದು, ತಮ್ಮ ಭಂಡಾರವನ್ನು ತುಂಬಿಕೊಳ್ಳುವದು - ಇಷ್ಟೇ ಗೊತ್ತಿರುವದೇ ಹೊರತು ಆಕೆಯನ್ನು ವಿಶ್ವಪ್ರಿಯಳಾಗುವಂತೆ ವಿನಿಯೋಗಿಸುವ ಜ್ಞಾಣತನವಿರುವದಿಲ್ಲ. ಇದನ್ನು ಕಾರ್ಪಣ್ಯವೆಂದು ಕರೆಯುತ್ತಾರೆ. ಆದ್ದರಿಂದ ಕೃಪಣತೆಯು ಬಹಳ ಮಟ್ಟಿಗೆ ಧನದೊಡನೆ ಬಂದುಬಿಡುತ್ತದೆಯಾಗಿ ಧನಿಕರು ವಿಶ್ವಕ್ಕೆಲ್ಲ ಅಪ್ರಿಯರಾಗುವ ಸಂಭವವೇ ಹೆಚ್ಚು. ಆದರೆ ಇದು ಶ್ರೀಸೂಕ್ತೋಪಾಸನೆಗೆ ಫಲವಲ್ಲ. ಕಾರ್ಪಣ್ಯವು ದೇವಿಯ ರೂಪವಲ್ಲ. ಅದು ಅಲಕ್ಷ್ಮಿಯೆನಿಸುವದು. ಆದ್ದರಿಂದ ವಿಶ್ವಮನೋನುಕೂಲಳಾಗಿ ದೇವಿಯನ್ನು ಕಂಡುಕೊಳ್ಳುವ ಜ್ಞಾಣತನವನ್ನೂ ನಾವು ಸಂಪಾದಿಸಬೇಕು. ಮುಂದಿನ ಮಂತ್ರಗಳನ್ನು ನೋಡೋಣ :

**ಓಂ॥ ಪದ್ಮಾನನೇ ಪದ್ಮಊರೂ ಪದ್ಮಾಕ್ಷೀ ಪದ್ಮಸಂಭವೇ ।**
**ತನ್ಮೇ ಭಜಸಿ ಪದ್ಮಾಕ್ಷಿ ಯೇನ ಸೌಖ್ಯಂ ಲಭಾಮ್ಯಹಮ್ ॥ ೧೮ ॥**

**ಓಂ॥ ಅಶ್ವದಾಯಿ ಗೋದಾಯಿ ಧನದಾಯಿ ಮಹಾಧನೇ ।**
**ಧನಂ ಮೇ ಜುಷತಾಂ ದೇವಿ ಸರ್ವಾನ್ ಕಾಮಾಂಶ್ಚ ದೇಹಿ ಮೇ ॥ ೧೯ ॥**

**'ಎಲೌ ಪದ್ಮಮುಖಳೆ, ಪದ್ಮದಂತೆ ಮೃದುವಾದ ಊರುಗಳುಳ್ಳವಳೆ, ಪದ್ಮನಯನೆಯೆ, ಪದ್ಮಸಂಭವಳೆ, ಯಾವದರಿಂದ ನಾನು ಸುಖವನ್ನು**

**ಹೊಂದಿಯೇನೋ ಆ ರೂಪದಿಂದ ನನ್ನನ್ನು ಸೇರುವವಳಾಗು ; ಕುದುರೆಗಳನ್ನೂ, ಗೋವುಗಳನ್ನೂ, ಧನವನ್ನೂ ಕೊಡುವವಳೆ, ಐಶ್ವರ್ಯವಂತಳೆ, ನನಗೆ ಧನವು ಬಂದು ಸೇರಲಿ ! ನನಗೆ ಎಲ್ಲಾ ಇಷ್ಟಾರ್ಥಗಳನ್ನೂ ನೀಡುವವಳಾಗು.'**

ಈ ಪ್ರಾರ್ಥನೆಗಳಲ್ಲಿ ಪ್ರಧಾನವಾಗಿ ಗೋ-ಅಶ್ವಾದಿರೂಪವಾದ ಧನವನ್ನು ಕೊಡಬೇಕೆಂದೂ ಅವು ನಮಗೆ ಸುಖಕರವಾಗಿ ಪರಿಣಮಿಸಬೇಕೆಂದೂ ಕೇಳಿಕೊಂಡಿದೆ - ದೇವಿಯ ಸ್ತುತಿಯಂತೂ ಇದ್ದೇ ಇದೆ. ಸುಖಕರವಾಗುವ ಧನ-ಧಾನ್ಯ-ಪಶುಗಳೆಂದರೆ ಅವು ಪ್ರಾಪ್ತವಾದನಂತರ ನಮಗೆ ನೆಮ್ಮದಿಯು ಸಿಗಬೇಕು. ಹಾಗಾದರೆ ಅದು ದೇವಿಯ ಅನುಗ್ರಹವಾದೀತು. ಕೆಲವರು ಸಾಲಮಾಡಿ ಮನೆ ಕಟ್ಟುತ್ತಾರೆ ; ಉದ್ಯೋಗಗಳನ್ನಾರಂಭಿಸುತ್ತಾರೆ. ಅದೇನು ದುರದೃಷ್ಟವೊ, ಆ ಮನೆಯಾಗಲಿ ಉದ್ಯೋಗವಾಗಲಿ ಅವರಿಗೆ ಸುಖಕರವಾಗುವ ಬದಲು ದುಃಖಕರವೂ ನಷ್ಟಕರವೂ ಆಗಿಬಿಡುವದುಂಟು. 'ಸಾಲಮಾಡಿ ಓಲೆ ತಂದ ; ಓಲೆ ಮಾರಿ ಬಡ್ಡಿ ಕೊಟ್ಟ' -ಎಂದಾದರೆ ಪ್ರಯೋಜನವೇನು? ಇದು ನಿಜವಾಗಿಯೂ ಶೋಚನೀಯ. ಹಣವು ಕೈಸೇರಿದಾಗ ಮನುಷ್ಯನನ್ನು ಅದು ಮೇಲೆತ್ತಲೂ ಬಲ್ಲದು, ತುಳಿಯಲೂ ಬಲ್ಲದು. ನೋಡುವದಕ್ಕೆ ಅಚೇತನವಾಗಿ ಕಂಡರೂ ಅದು ಮಾಡದೆ ಇರುವ ಕೆಲಸವೇ ಇಲ್ಲ. ಆದರೆ ದುಷ್ಟರ ಕೈಸೇರಿದಾಗ ಅದು ಅವರನ್ನು ಇನ್ನಷ್ಟು ಪಾಪಿಗಳನ್ನಾಗಿಯೂ ಕೆಟ್ಟವರನ್ನಾಗಿಯೂ ಮಾಡಿಬಿಡಬಲ್ಲದು. ಆದ್ದರಿಂದಲೇ ವಿವೇಕಿಗಳು 'ಅರ್ಥಮನರ್ಥಂ ಭಾವಯ' ಎಂದು ಎಚ್ಚರಿಸಿರುತ್ತಾರೆ. ಹೀಗಿರುವದರಿಂದ ನಾವು ಶ್ರೀದೇವಿಯ ರೂಪದಿಂದ ಅದನ್ನು ಉಪಾಸನೆಮಾಡದೆಹೋದರೆ ಅನರ್ಥವೇ ಆದೀತು. ಧನಲಕ್ಷ್ಮಿಯ ಎಲ್ಲಾ ರೂಪಗಳನ್ನೂ ನಾವು ಮುಖ್ಯವಾಗಿ ವಿಷ್ಣುಸೇವೆಯಲ್ಲಿಯೇ ತೊಡಗಿಸಬೇಕು. ಏಕೆಂದರೆ ವಿಷ್ಣುವಿನ ಸೇವೆಯೇ ಲಕ್ಷ್ಮಿಗೆ ಅತ್ಯಂತಪ್ರಿಯವಾಗಿರುತ್ತದೆ. ಇಲ್ಲವಾದರೆ ಅದು ದೈಹಿಕ-ಮಾನಸಿಕವಾದ ನಾನಾ ರೀತಿಯ ಹಿಂಸೆಗಳಿಗೆ ಮನುಷ್ಯನನ್ನು ತಳ್ಳಿ ಶಿಕ್ಷಿಸುತ್ತದೆ. ಧನವೇನೂ ಮಾನವನಿಗೆ ಸರ್ವಸ್ವವಲ್ಲ. ಆದ್ದರಿಂದ 'ಯೇನ ಸೌಖ್ಯಂ ಲಭಾಮ್ಯಹಮ್' ಎಂಬಿದನ್ನು ನಾವು ನೆನಪಿಟ್ಟುಕೊಳ್ಳಬೇಕು. ಸುಖವನ್ನೇ ಹಾಳುಮಾಡುವಂಥ ಧನದ ವಿಷಯಕ್ಕೆ

ಆಶೆಯನ್ನೇ ಕೈಬಿಡಬೇಕು. ಯಾರು ಶ್ರೀಸೂಕ್ತವನ್ನು ಪಾರಾಯಣ ಮಾಡುತ್ತಾರೋ ಅಂಥವರು ಮಾತ್ರ ಸುಖಕರವಾಗುವಂಥ ಧನವನ್ನು ಹೊಂದುತ್ತಾರೆ. ಅಂಥದ್ದನ್ನು ನೀಡುವಂತೆಯೇ ಇಲ್ಲಿ ಪ್ರಾರ್ಥಿಸಿದೆ. 'ಧನಾದ್ಧರ್ಮಂ ತತಃ ಸುಖಮ್' ಎಂಬ ಸುಭಾಷಿತವೂ ನಮಗೆ ಈ ಪಾಠವನ್ನೇ ಬೋಧಿಸುತ್ತಿದೆ. ಧನವು ನಮಗೆ ಇಷ್ಟನಿಜ **ಆದರೆ ಇಷ್ಟವನ್ನು ಧರ್ಮದೊಡನೆ ಜೋಡಿಸಬೇಕೆಂದೇ ಹಿರಿಯರ ಹೇಳಿಕೆ.** ಹೆಣ್ಣು ಮಗಳು ನಮಗೆ ಪ್ರೀತಿಪಾತ್ರಳೆಂಬುದು ಸರಿ. ಆದರೆ ಆಕೆಯನ್ನು ವರನಿಗೆ ದಾನಮಾಡಿ ಧನಸಮೇತ ಗಂಡನ ಮನೆಗೇ ಕಳುಹಿಸಬೇಕು. ಆಗಲೇ ನೆಮ್ಮದಿಯಲ್ಲವೆ? ಹಾಗೆಯೇ ಸುಖವಾಗಬೇಕಾದರೆ ಧನತ್ಯಾಗವು ಸಾತ್ತ್ವಿಕ ರೀತಿಯಿಂದ ಆಗಬೇಕೆಂದೂ ಈ ಮಂತ್ರಗಳ ಬಲದಿಂದ ಊಹಿಸಬಹುದಾಗಿದೆ. ಈಗ ಮುಂದಿನ ಮಂತ್ರವನ್ನು ನೋಡೋಣ :

**ಓಂ|| ಪುತ್ರಪೌತ್ರಂ ಧನಂ ಧಾನ್ಯಂ ಹಸ್ತ್ಯಶ್ವಾದಿಗವೇರಥಮ್ ।**
**ಪ್ರಜಾನಾಂ ಭವಸಿ ಮಾತಾ ಆಯುಷ್ಮಂತಂ ಕರೋತು ಮೇ ॥ ೨೦ ॥**

**'ಮಕ್ಕಳು, ಮೊಮ್ಮಕ್ಕಳು, ಹಣ, ಧಾನ್ಯ, ಆನೆ, ಕುದುರೆ, ಗೋವುಗಳು, ರಥಗಳು- ಇವುಗಳನ್ನು ಕೊಟ್ಟು ಪ್ರಜೆಗಳ ತಾಯಿಯಾದ ಲಕ್ಷ್ಮಿಯು ನನ್ನನ್ನು ಆಯುಷ್ಮಂತನನ್ನಾಗಿ ಮಾಡಲಿ'.**

ಈ ಪ್ರಾರ್ಥನೆಯಲ್ಲಿ ಹಿಂದಿನಂತೆಯೇ ಎಲ್ಲಾ ಐಶ್ವರ್ಯಸಂಪತ್ತುಗಳನ್ನೂ ಕೊಟ್ಟು ಜೊತೆಗೆ ಆಯುಷ್ಮಂತನಾಗಿ ನನ್ನನ್ನು ಮಾಡು - ಎಂದು ಕೇಳಿಕೊಂಡಿದೆ. ಏಕೆಂದರೆ ಆಯುಷ್ಯವೇ ಮೊಟಕಾದರೆ ಇವುಗಳನ್ನು ಅನುಭವಿಸಲಾಗುವದಿಲ್ಲ. ದುಡಿಮೆಯಲ್ಲಿಯೇ ಆಯುಸ್ಸು ಮುಗಿದುಹೋದರೂ ಪ್ರಯೋಜನವಿಲ್ಲ. ಆದ್ದರಿಂದ ಆಯುಷ್ಮಂತ-ಎಂಬಲ್ಲಿ ಪ್ರಶಸ್ತವಾದ ಆಯುಸ್ಸುಳ್ಳವನಾಗ-ಬೇಕೆಂದರ್ಥ. ತಾನು ಬದುಕಿರುವಾಗ, ಆರೋಗ್ಯವಾಗಿರುವಾಗ, ಇಂದ್ರಿಯಗಳು ಪಟುವಾಗಿರುವಾಗ ಮನುಷ್ಯನಿಗೆ ಭೋಗಗಳು ದೊರಕಬೇಕು. ಅವು ಸುಖಕರವಾಗಿಯೂ ಇರಬೇಕು. ಕಠೋಪನಿಷತ್ತಿನಲ್ಲಿರುವಂತೆ ಯಮನು ಕೂಡ ನಚಿಕೇತನಿಗೆ ಭೋಗಗಳನ್ನು ಕೊಟ್ಟಮೇಲೆ ನೀನು ಬಯಸುವಷ್ಟು ದಿನವೂ

ಬದುಕಿರು - ಎಂದು ಅನುಗ್ರಹಿಸುತ್ತಾನೆ. ಹಾಗೆಯೇ ಇಲ್ಲಿಯೂ ದೇವಿಯನ್ನು ಸಂಪತ್ತುಗಳನ್ನು ನೀಡುವದರೊಡನೆ ಆಯುಸ್ಸನ್ನೂ ನೀಡುವವಳಾಗು - ಎಂದು ಪ್ರಾರ್ಥಿಸಿದೆ.

***

## ೧೦. ಧನಮಗ್ನಿರ್ಧನಂ ವಾಯುಃ

ಶ್ರೀಸೂಕ್ತದ ಇಪ್ಪತ್ತೊಂದನೆಯ ಋಕ್ಕನ್ನು ಈಗ ವಿಚಾರಮಾಡಬೇಕಾಗಿದೆ. ಅದು ಹೀಗಿದೆ:

**ಓಂ|| ಧನಮಗ್ನಿರ್ಧನಂ ವಾಯುರ್ಧನಂ ಸೂರ್ಯೋ ಧನಂ ವಸುಃ ।**
**ಧನಮಿಂದ್ರೋ ಬೃಹಸ್ಪತಿರ್ವರುಣಂ ಧನಮಸ್ತು ಮೇ ॥ ೨೧ ॥**

**'ಅಗ್ನಿ, ವಾಯು, ಸೂರ್ಯ, ವಸು, ಇಂದ್ರ, ಬೃಹಸ್ಪತಿ, ವರುಣ- ಈ ದೇವತೆಗಳೆಲ್ಲರೂ ನನಗೆ ಧನಸ್ವರೂಪರಾಗಿ ಅನುಗ್ರಹಿಸಲಿ.'**

ಈ ಮಂತ್ರದಲ್ಲಿ ಆಧಿದೈವಿಕಪ್ರಪಂಚಕ್ಕೆ ಸೇರಿದ ಅಗ್ನಿ, ವಾಯು-ಮುಂತಾದ ದೇವತೆಗಳನ್ನು ಧನರೂಪರಾಗಿ ಅನುಗ್ರಹಿಸಲೆಂದೂ ಈ ಮೂಲಕ ಲಕ್ಷ್ಮಿಯು ಒಲಿಯಬೇಕೆಂದೂ ಕೇಳಿಕೊಳ್ಳಲಾಗಿದೆ. ಈ ಪ್ರಾರ್ಥನೆಯು ಸರಕಾರವನ್ನು ನಡೆಯಿಸುವ ಯಜಮಾನರುಗಳಿಗೆ ತಿಳಿಯಹೇಳುವಂಥದ್ದಾಗಿದೆ. ಏಕೆಂದರೆ ಪ್ರತಿದಿನವೂ ವೃತ್ತಪತ್ರಿಕೆಗಳಲ್ಲಿ ವಿದ್ಯುತ್ತು, ಎಣ್ಣೆ, ನೀರು, ಆಹಾರವಸ್ತುಗಳು, ಔಷಧಗಳು- ಇತ್ಯಾದಿಗಳ ಕೊರತೆಯ ವರದಿಗಳು ಎಲ್ಲಾ ರಾಜ್ಯಗಳಿಂದಲೂ ಬರುತ್ತಲೇ ಇರುವವು. ಇಂಥ ಕೊರತೆಗಳನ್ನು ಮನುಷ್ಯಮಾತ್ರದವರು ಎಂದಿಗೂ ತುಂಬಲಾಗುವದಿಲ್ಲ. ಆದರೆ ದೇವತೆಗಳ ಅನುಗ್ರಹವಾದರೆ ಕ್ಷಣಮಾತ್ರದಲ್ಲಿ ಪೂರೈಸಬಹುದು. ಉದಾಹರಣೆಗೆ: ಒಂದು ಹಳ್ಳಿಯಲ್ಲಿ ಮಳೆಬಾರದಾಗ ಎಷ್ಟೋ ಪರಿಹಾರಕಾಮಗಾರಿಗಳನ್ನು ನಡೆಸುತ್ತಾರೆ. ಆದರೆ ವರುಣದೇವನು ಒಲಿದದ್ದೇ ಆದರೆ ಎಂಥ ಪೂರೈಕೆಯಾದೀತು?

ಹೀಗೆಯೇ ನಾವು ಎಲ್ಲಾ ದೇವತೆಗಳ ಪ್ರಸಾದದ ವಿಚಾರಕ್ಕೂ ತಿಳಿಯಬೇಕು. ಹೇಗೆಂದರೆ : ಅಗ್ನಿದೇವನ ಪ್ರಸಾದವಾಯಿತೆಂದರೆ - ಆ ಕ್ಷೇತ್ರದಲ್ಲಿ ಕಟ್ಟಿಗೆ, ಎಣ್ಣೆಗಳ ಕೊರತೆಯುಂಟಾಗಲಾರದು. ಏಕೆಂದರೆ ಆ ಮೂಲಕವೇ ಅಗ್ನಿಯು ಪ್ರತ್ಯಕ್ಷನಾಗಬೇಕಾಗಿದೆ. ಜನರೆಲ್ಲರೂ ಆಹಾರ-ಸ್ನಾನಾದಿಗಳ ವಿಷಯಕ್ಕೆ ಸಮಸ್ಯೆಗಳನ್ನು ಎದುರಿಸಬೇಕಾಗಲಾರದು. ವಾಯುದೇವನ ಅನುಗ್ರಹವಾದರೆ ಆಯುಷ್ಯವೂ ಹಿತಕರವಾದ ಹವಾಗುಣವೂ ಸಸ್ಯಗಳ ಬೆಳವಣಿಗೆಯೂ ಆಗುವದು. ಸೂರ್ಯನ ದಯೆಯಿಂದ ಆರೋಗ್ಯಪುಷ್ಟ್ಯಾದಿಗಳೂ ವಸುದೇವತೆಗಳ ಪ್ರಸಾದದಿಂದ ಬಟ್ಟೆ, ಚಿನ್ನ- ಮೊದಲಾದವೂ ಇಂದ್ರನ ಅನುಗ್ರಹದಿಂದ ಬಲ, ವೀರ್ಯಗಳೂ ಬೃಹಸ್ಪತಿಯ ದಯೆಯಿಂದ ಸದ್ಬುದ್ಧಿ, ವಿದ್ಯೆ, ವಿನಯಾದಿಗಳೂ ದೊರಕಿಯೇ ತೀರುವವು. ಇವುಗಳಲ್ಲಿ ಯಾವದೊಂದನ್ನೂ ಮನುಷ್ಯನು ತನಗೆ ಬೇಡವೆನ್ನುವಂತಿಲ್ಲ. ಹೀಗಿರುವಲ್ಲಿ ಲೌಕಿಕಪ್ರಯತ್ನಗಳ ಜೊತೆಗೆ ದೇವತೆಗಳ ಪೂಜೆ, ಸ್ತುತಿ, ಜಪ, ಕೀರ್ತನಾದಿಗಳನ್ನೂ ಮಾಡಿದರೆ ಜೀವನವು ಸುಖಮಯವಾಗುವದಲ್ಲವೆ? ಆದ್ದರಿಂದ ರಾಷ್ಟ್ರಮಟ್ಟದಿಂದ ಪ್ರಾರಂಭಿಸಿ ಪ್ರತಿಯೊಬ್ಬನೂ ವೈಯಕ್ತಿಕವಾಗಿ ಪ್ರಾರ್ಥಿಸುವ ಮಟ್ಟದವರೆಗೂ ಈ ದೇವತಾ ಸ್ತುತಿಯು ಉಪಯುಕ್ತವಾಗಿದೆ. ಮಹಾಲಕ್ಷ್ಮಿಯು ಹೀಗೆ ನಾನಾ ದೇವತೆಗಳ ರೂಪದಲ್ಲಿರುವದನ್ನು ಅರಿತ ಭಕ್ತನು ಮೇಲಿನಂತೆ ಸ್ತುತಿಸಿರುತ್ತಾನೆ.

ಈಗ ಇಪ್ಪತ್ತೆರಡನೆಯ ಮಂತ್ರವನ್ನು ವಿಚಾರಮಾಡೋಣ. ಅದು ಹೀಗಿದೆ :

**ಓಂ|| ವೈನತೇಯ ಸೋಮಂ ಪಿಬ ಸೋಮಂ ಪಿಬತು ವೃತ್ರಹಾ |**
**ಸೋಮಂ ಧನಸ್ಯ ಸೋಮಿನೋ ಮಹ್ಯಂ ದದಾತು ಸೋಮಿನಃ || ೨೨ ||**

**'ಎಲೈ ವೈನತೇಯನೆ, ಸೋಮವನ್ನು ಪಾನಮಾಡು ; ವೃತ್ರನಾಶಕನಾದ ಇಂದ್ರನು ಕೂಡ ಸೋಮಪಾನಮಾಡಲಿ ! ಧನವನ್ನು ಬಯಸುವ ಸೋಮಪಾಯಿಯಾದ ನನಗೆ ಸೋಮವನ್ನು ಕೊಡಲಿ !'**

ಈ ಮಂತ್ರದಲ್ಲಿ ಸೋಮಪಾನದ ವಿಚಾರವಾಗಿ ಪ್ರಸ್ತಾಪವಿದೆ. ಸೋಮಯಾಜೀ ಎಂಬ ಹೆಸರನ್ನು ನೀವು ಕೇಳಿದ್ದೀರಿ. ಹಿಂದಿನ ಕಾಲಕ್ಕೆ

**ಸೋಮಯಾಗ**ವನ್ನು ಮಾಡಿದವರನ್ನು ಈ ಹೆಸರಿನಿಂದ ಕರೆಯುತ್ತಿದ್ದರು. ಸೋಮವೆಂಬುದು ಒಂದು ಬಗೆಯ ಸಸ್ಯರಸವು. ಯಜ್ಞದಲ್ಲಿ ಇದನ್ನು ದೇವತೆಗಳಿಗೆ ಅರ್ಪಿಸಿ ಅನಂತರ ಪ್ರಸಾದರೂಪವಾಗಿ ಯಜಮಾನನೂ ಸ್ವೀಕರಿಸುತ್ತಾನೆ. ಈ ಸೋಮಯಾಗವು ಶ್ರೌತಕರ್ಮವಾದ್ದರಿಂದ ಅಧಿಕಾರಿಗಳು ಮಾತ್ರ ಮಾಡತಕ್ಕದ್ದಾಗಿದೆ. ಪ್ರಕೃತ- ಈ ಪ್ರಾರ್ಥನೆಯಲ್ಲಿ ದೇವತೆಗಳಿಗೂ ಸೋಮವು ಅರ್ಪಿತವಾಗಬೇಕೆಂದೂ ಅಂಥ ಯಜ್ಞವನ್ನು ತಾನು ಅನುಷ್ಠಾನಮಾಡುವ ಶಕ್ತಿಸಾಮರ್ಥ್ಯಗಳು ಬರಬೇಕೆಂದೂ ಕೇಳಿಕೊಂಡಿದೆ. ಆದರೆ ಲಕ್ಷ್ಮಿಯ ಅನುಗ್ರಹವಿಲ್ಲದೆ ಶ್ರೌತಸ್ಮಾರ್ತರೂಪವಾದ ಯಜ್ಞಗಳನ್ನು ಮಾಡಲಾಗುವದಿಲ್ಲ. ಇಲ್ಲಿ ರಹಸ್ಯವೇನೆಂದರೆ : ದೇವತೆಗಳ ತೃಪ್ತಿಗಾಗಿ ನಾವು ಯಜ್ಞಗಳನ್ನು ಕೈಗೊಂಡಂತೆಲ್ಲ ಲಕ್ಷ್ಮಿಯು ಒಲಿದೇ ಒಲಿಯುತ್ತಾಳೆ. ಇಂಥ ಕಲಿಗಾಲದಲ್ಲಿಯೂ ಎಲ್ಲಾ ಊರುಗಳಲ್ಲಿಯೂ ನಡೆಯುತ್ತಿರುವ ಅನೇಕ ಧಾರ್ಮಿಕಕಾರ್ಯಗಳಿಗೆ ಸರಕಾರದವರೇನೂ ಹಣವನ್ನು ಒದಗಿಸುತ್ತಿಲ್ಲ. ಯಾವನೋ ಒಬ್ಬ ವ್ಯಕ್ತಿಯು ದೇವರ ಹೆಸರು ಹೇಳಿಕೊಂಡು ಪ್ರಾರಂಭಮಾಡುವ ಧರ್ಮಕಾರ್ಯವು ಮಹಾಜನರ ಸಹಾಯದಿಂದ ಅತ್ಯಂತ ಯಶಸ್ವಿಯಾಗಿಯೇ ನಡೆದೇ ಬಿಡುವದು. ಹೀಗಿರುವಲ್ಲಿ ಆ ವ್ಯಕ್ತಿಯು ವಿದ್ಯಾವಂತನೂ ಆಚಾರಶೀಲನೂ ನಿಃಸ್ಪೃಹನೂ ದೇವತೋಪಾಸಕನೂ ಲಕ್ಷ್ಮೀಭಕ್ತನೂ ಆಗಿದ್ದರೆ ಹೇಳುವದೇನಿದೆ? ಅವನು ವಿನಿಯೋಗಿಸಿದ್ದಕ್ಕಿಂತಲೂ ಮಿಗುವಷ್ಟು ಧನವು ಒದಗಿಯೇ ತೀರುವದು. ಇದೇ ದೇವತೆಗಳ ಅನುಗ್ರಹವು. ಆದ್ದರಿಂದ ನಾವು ಮೊದಲು ದೇವಯಾಜಿಗಳಾಗಬೇಕು. ಆ ದೇವತೆಗಳು ತೃಪ್ತರಾದರೆ 'ಪರಸ್ಪರಂ ಭಾವಯಂತಃ' ಎಂದಂತೆ ಇಬ್ಬರಿಗೂ ಅನುಕೂಲವಾಗುವದು. ಇಲ್ಲಿ ಭಕ್ತನು ಇಂದ್ರಾದಿದೇವತೆಗಳಿಗೆ ಸೋಮಪಾನಮಾಡಬೇಕೆಂದು ಕೇಳಿಕೊಂಡು ತಾನೂ ಸೋಮಯಾಜಿಯಾಗಿ ಜಗತ್ತಿಗೆಲ್ಲ ಧನ-ಧಾನ್ಯ ಸಮೃದ್ಧಿಯನ್ನು ದಯ ಪಾಲಿಸುವಂತೆ ಮಹಾಲಕ್ಷ್ಮಿಯನ್ನು ಬೇಡಿದ್ದಾನೆ. ಯಜ್ಞವೆಂಬುದು ನಿಜವಾಗಿಯೂ ಒಂದು ಬಗೆಯ ಸದ್ವಿನಿಯೋಗವು. ಅದು ನಾನಾ ರೂಪವಾಗಿದ್ದು ಅನುಷ್ಠಾನಮಾಡುವವರ ಶಕ್ತಿಸಾಮರ್ಥ್ಯಗಳಿಗೆ ತಕ್ಕಂತೆ ಜಗತ್ತಿಗೆ

ಕಲ್ಯಾಣವನ್ನು ಉಂಟುಮಾಡುತ್ತದೆ. ಲಕ್ಷ್ಮಿಯು ಯಜ್ಞವು ನಡೆಯುವಲ್ಲಿಯೇ ನೆಲೆಸಿರುತ್ತಾಳೆಂಬುದು ಈ ಮಂತ್ರದ ಅಭಿಪ್ರಾಯ.

ಈಗ ಇಪ್ಪತ್ಮೂರನೆಯ ಮಂತ್ರವನ್ನು ನೋಡೋಣ. ಅದು ಹೀಗಿದೆ:

**ಓಂ॥ ನ ಕ್ರೋಧೋ ನ ಚ ಮಾತ್ಸರ್ಯಂ ನ ಲೋಭೋ ನಾಶುಭಾ ಮತಿಃ।**
**ಭವಂತಿ ಕೃತಪುಣ್ಯಾನಾಂ ಭಕ್ತಾನಾಂ ಶ್ರೀಸೂಕ್ತಂ ಜಪೇತ್ ॥ ೨೩ ॥**

**'ಪುಣ್ಯವಂತರಾದ ಶ್ರೀಸೂಕ್ತಪಾಠಕರಿಗೆ ಕೋಪ, ಅಸೂಯೆ, ಜಿಪುಣತನ, ಕೆಟ್ಟಬುದ್ಧಿಗಳು, ಸಂಭವಿಸುವದಿಲ್ಲ. (ಆದ್ದರಿಂದ) ಶ್ರೀಸೂಕ್ತವನ್ನು ಜಪಿಸಬೇಕು'.**

ಈ ಮಂತ್ರವು ಕಲಿಗಾಲಕ್ಕೆ ಪ್ರತಿಯೊಬ್ಬರಿಗೂ ಉಂಟಾಗಿರುವ ದೀರ್ಘ ರೋಗಕ್ಕೆ ತಕ್ಕ ಚಿಕಿತ್ಸೆಯನ್ನು ಸೂಚಿಸುವಂತಿದೆ. ಸಂಪತ್ತು ಕೃತಯುಗದ ಕಾಲದಿಂದಲೂ ಮಾನವನಿಗೆ ತನ್ನ ಬಿಸಿಯನ್ನು ತೋರಿಸುತ್ತಲೇ ಇದೆ. ಹೇಗೆಂದರೆ ಅದು ಯಜಮಾನನನ್ನು ಹಿಂಸಿಸುವದು. ಇದಕ್ಕೆ ಕಾರಣವು ಮಾನವನು ಲೋಭದಿಂದ ಎಲ್ಲಾ ಸಂಪತ್ತನ್ನೂ ತನ್ನಲ್ಲಿಯೇ ಕಟ್ಟುಹಾಕಿ ಕೂಡಿಟ್ಟುಕೊಳ್ಳುವ ದುರ್ಬುದ್ಧಿ. ಹಿರಣ್ಯಕಶಿಪು-ರಾವಣ-ದುರ್ಯೋಧನರುಗಳು ಕ್ರಮವಾಗಿ ಒಂದೊಂದು ಯುಗಕ್ಕೆ ಉದಾಹರಣೆಯಾಗಿದ್ದಾರೆ. ಇವರುಗಳು ಸಂಪಾದಿಸಿದಷ್ಟು ಐಶ್ವರ್ಯವನ್ನು ಈಗಿನ ಪ್ರಪಂಚದಲ್ಲಿ ಯಾವನೂ ಖಂಡಿತ ಸಂಪಾದಿಸಲಾರನು. ಕೇವಲ ಮನುಷ್ಯಲೋಕದ್ದು ಮಾತ್ರವಲ್ಲದೆ ಇವರುಗಳು ತ್ರೈಲೋಕ್ಯಲಕ್ಷ್ಮಿಯನ್ನೆಲ್ಲ ವಶಪಡಿಸಿಕೊಂಡಿದ್ದರು. ಆದರೆ ಆಕೆಯನ್ನು ಅನುಭವಿಸುವದಕ್ಕೆ ಇವರುಗಳಿಗೆ ತಮ್ಮದೇ ಆದ ಕಾಮಕ್ರೋಧಗಳ ನಿಮಿತ್ತ ಸಾಧ್ಯವಾಗಲಿಲ್ಲ. ಲಕ್ಷ್ಮಿಯು ಆ ಕಾಮಾದಿದೋಷಗಳನ್ನು ಸಹಿಸಿಕೊಳ್ಳಲಾರಳು ; ಮತ್ತು ಅಂಥವನಲ್ಲಿ ಶಾಶ್ವತವಾಗಿ ನೆಲಸಲಾರಳು. ಆಕೆಯು ದೇವತೆಯಾದ್ದರಿಂದ ಆಸುರೀಗುಣಗಳನ್ನು ಎಂದಿಗೂ ಆಶ್ರಯಿಸುವದಿಲ್ಲ. ಒಂದು ವೇಳೆ ಆಸುರೀಸಂಪತ್ತಿನ ಮಾನವನಲ್ಲಿಯೇ ಆಕೆಯು ಉಕ್ಕಿಹರಿದಂತೆ ಕಂಡುಬಂದರೆ ಅದು ಅವನ ನಾಶಕ್ಕೆ ನಾಂದಿಯೆಂದು ಭಾವಿಸಬಹುದು. ಹಾಗೆ ನಡೆದೇ ಇರುತ್ತದೆ. ಆದ್ದರಿಂದ ನಾವು ಧನವನ್ನು ನಮ್ಮ ನಾಶಕ್ಕಾಗಿಯೇ ಕೂಡಿಹಾಕಿಕೊಳ್ಳುವದು ಅವಿವೇಕದ ಪರಮಾವಧಿಯಲ್ಲವೆ?

ಸಂಸ್ಕೃತಭಾಷೆಯಲ್ಲಿ 'ವರಘಾತಾಯ ಕನ್ಯೋದ್ವಾಹಃ' ಎಂಬ ಗಾದೆಯಿದೆ. ಯಾರೊಬ್ಬರೂ ಗಂಡು ಸಾಯಲಿ, ಎಂದು ಹೆಣ್ಣು ಕೊಟ್ಟು ಮದುವೆ ಮಾಡುವದಿಲ್ಲ- ಎಂದು ಅದರ ಅಭಿಪ್ರಾಯ. ಹಾಗಾದರೆ ಸುಖವೆಲ್ಲಿ ಬಂತು? ಹೀಗಿರುವದರಿಂದ ಲಕ್ಷ್ಮಿಯೊಡನೆ ಸಂಬಂಧವು ನಮಗೆ ದೊರಕಿದಾಗ ನಾವು ಎಚ್ಚರಿಕೆಯಿಂದಿದ್ದು ಕಾಮಕ್ರೋಧಾದಿಗಳನ್ನು ಬೆಳೆಯಿಸಿಕೊಳ್ಳದೆ ಆ ದೇವತೆಯನ್ನು ಉಪಾಸನೆಮಾಡಬೇಕು. ಯಾರು ಹೀಗೆ ಮಾಡುವರೋ ಅವರೇ ಭಕ್ತರೆನಿಸಿಕೊಳ್ಳುವರು.

ಹಣಕ್ಕೆ ದಾನ, ಭೋಗ, ನಾಶ- ಎಂಬ ಮೂರು ವಿನಿಯೋಗಗಳಿವೆ. ಇವುಗಳಲ್ಲಿ ಮೊದಲನೆಯದನ್ನು ನಾವು ಅನುಷ್ಠಾನಮಾಡದಿದ್ದರೆ, ಎರಡನೆಯ ರೀತಿಯಿಂದ ಅದನ್ನು ಕೈಬಿಟ್ಟರೆ ಮೂರನೆಯ ರೀತಿಯಿಂದ ಲಕ್ಷ್ಮಿಯು ಕೈ ಬಿಡುತ್ತದೆ. ಆದರೆ ಮೊದಲನೆಯದು ನಮ್ಮನ್ನು ಲಕ್ಷ್ಮೀಪತಿಯ ಬಳಿಗೆ ಒಯ್ಯುತ್ತದೆ ; ಹಾಗೂ ಬದುಕಿರುವಾಗ ಲಕ್ಷ್ಮಿಯ ಕಟಾಕ್ಷದಿಂದ ನಾವು ಸುಖವನ್ನೂ ಪಡೆಯುವಂತೆ ಮಾಡುತ್ತದೆ. ಕಲಿಯುಗದಲ್ಲಿ 'ದಾನ'ವೊಂದೇ ಸಂಸಾರಸಾಗರದಿಂದ ನಮ್ಮನ್ನು ಉದ್ಧರಿಸುವ ಉತ್ತಮಸಾಧನವೆಂದು ಸ್ಮೃತಿಗಳಲ್ಲಿ ತಿಳಿಸಿರುತ್ತದೆ. ದಾನಕ್ಕೂ ಅಂತಃಕರಣದಲ್ಲಿರುವ ಕಾಮಾದಿದೋಷಗಳ ನಿವಾರಣೆಗೂ ನಿಕಟಸಂಬಂಧವಿದೆ. ಆ ಮೂಲಕ ಲಕ್ಷ್ಮೀಪ್ರಸಾದವೂ ಲಭಿಸಲಿದೆ. ಬಹಳ ಜನರಿಗೆ ಧನವು ಮದ, ಮಾತ್ಸರ್ಯ, ಜಂಭಗಳನ್ನು ತಂದೊಡ್ಡುತ್ತದೆ. ಆಗ ಅವರು ಸುಖಿಗಳಾಗಿ ಬಾಳಲಾರರು. ಪ್ರತಿದಿನವೂ ನಾವೂ ಶ್ರೀಸೂಕ್ತವನ್ನು ಪಠನಮಾಡುತ್ತಿದ್ದರೆ ಲಕ್ಷ್ಮಿಯಿಂದ ದೊರಕಬೇಕಾದ ಸುಖವು ವಶವಾಗುವದು. ಇಲ್ಲದಿದ್ದರೆ ಲಕ್ಷ್ಮಿಯ ಪ್ರಾಪ್ತಿಯಾದರೂ ಸುಖದಿಂದ ವಂಚಿತರಾಗಿಬಿಡುವೆವು. ಇದರಿಂದ ತಿಳಿಯಬರುವದೇನೆಂದರೆ - ನಾವು ಜೀವನದಲ್ಲಿ ಲಕ್ಷ್ಮೀಪ್ರಾಪ್ತಿಗೆ ಆಯಾಸಪಡುವಷ್ಟೇ ಸುಖಪ್ರಾಪ್ತಿಗಾಗಿಯೂ ಶ್ರಮಿಸಬೇಕು ; ಎಂದರೆ ಅಂತಃಕರಣವು ಕಾಮಕ್ರೋಧಗಳಿಂದ ಕಲುಷಿತವಾದಂತೆಲ್ಲ ದಾನ, ತಪಸ್ಸು, ಔದಾರ್ಯ, ಪ್ರೀತಿ, ವಿಶ್ವಾಸಗಳಿಂದ ತೊಳೆದುಕೊಳ್ಳುತ್ತಿರಬೇಕು. **ಅಂತಃಕರಣದ ಸ್ವಚ್ಛತೆಯೇ ಹೆಚ್ಚಿನ ಐಶ್ವರ್ಯವು. ಅದೇ ಮಾನವನ**

ಸರ್ವಸಂಪತ್ತಿಂದರೂ ತಪ್ಪಾಗಲಾರದು. ಏಕೆಂದರೆ ಸ್ವಚ್ಛವಾದ ಅಂತಃಕರಣವುಳ್ಳವನಿಗೆ ಜ್ಞಾನಪ್ರಾಪ್ತಿಯೂ ಆ ಮೂಲಕ ಮುಕ್ತಿಯೂ ದೊರತೇ - ತೀರುವದು. ಮೋಕ್ಷಲಕ್ಷ್ಮಿಯು ನಮಗೆ ವಶಳಾದಾಗಲೇ ನಾವು ನಿಜವಾಗಿ ಶ್ರೀಮಂತರೆನಿಸುವೆವು. ಅದರಿಂದ ಪರಮಸುಖರೂಪವಾದ ಆತ್ಮಪ್ರಾಪ್ತಿಗಾಗಿ ಲಕ್ಷ್ಮಿಯು ಬೇಕೆಂದು ಬಯಸುವದಾದರೆ ಆ ಲಕ್ಷ್ಮಿಯನ್ನು ಕ್ರೋಧಮಾತ್ಸರ್ಯಲೋಭಗಳಿಂದ ರಕ್ಷಿಸಬೇಕು. ಇದು ಕೇವಲ ವೈಯಕ್ತಿಕವಾಗಿ ಮಾತ್ರವಲ್ಲ. ರಾಷ್ಟ್ರಲಕ್ಷ್ಮಿಯ ಮಟ್ಟದಿಂದಲೂ ಅನ್ವಯಿಸತಕ್ಕದ್ದಾಗಿದೆ. ಪ್ರಪಂಚದ ಒಂದು ಮೂಲೆಯಲ್ಲಿ ಜನರು ಹಸಿವಿನಿಂದ ಸಾಯುತ್ತಿದ್ದರೆ ಮತ್ತೊಂದು ಸಂಪದ್ಭರಿತ ದೇಶದವರು ಆಹಾರವನ್ನು ಸಮುದ್ರಕ್ಕೆ ಸುರಿಯುತ್ತಿದ್ದರೆ ಅದನ್ನು ಹೊಗಳಲಾದೀತೆ? ಆ ಐಶ್ವರ್ಯಕ್ಕೆ ನಮ್ಮ ವೈದಿಕಸಂಸ್ಕೃತಿಯ ದೃಷ್ಟಿಯಿಂದ ಒಂದು ದಮಡಿಯ ಬೆಲೆಯೂ ಇರುವದಿಲ್ಲ. ಆದ್ದರಿಂದಲೇ ಈ ಮಂತ್ರದಲ್ಲಿ 'ಕೃತಪುಣ್ಯಾನಾಂ' ಎಂಬ ವಿಶೇಷಣದಿಂದ ಭಕ್ತರನ್ನು ಹೊಗಳಲಾಗಿದೆ. ಪುಣ್ಯವಂತರ ಐಶ್ವರ್ಯವು ಮಾತ್ರವೇ ಕಾಮಾದಿಗಳಿಂದ ನಿರ್ಮುಕ್ತವಾಗಿರುವದು. ಪುಣ್ಯಸಂಪಾದನೆಗಾಗಿ ಈಗಲಾದರೂ ಶ್ರೀಸೂಕ್ತವನ್ನು ಜಪಿಸಿ ಕಾಮಕ್ರೋಧಾದಿ-ಗಳನ್ನು ತ್ಯಾಗಮಾಡೋಣ.

***

## ೧೧. ತನ್ನೋ ಲಕ್ಷ್ಮೀಃ ಪ್ರಚೋದಯಾತ್

ಶ್ರೀಸೂಕ್ತದ ಇಪ್ಪತ್ನಾಲ್ಕನೆಯ ಋಕ್ಕನ್ನು ಈಗ ವಿಚಾರಮಾಡಬೇಕಾಗಿದೆ. ಅದು ಹೀಗಿರುತ್ತದೆ:

**ಓಂ॥ ಸರಸಿಜನಿಲಯೇ ಸರೋಜಹಸ್ತೇ**
**ಧವಲತರಾಂಶುಕಗಂಧಮಾಲ್ಯಶೋಭೇ ।**
**ಭಗವತಿ ಹರಿವಲ್ಲಭೇ ಮನೋಜ್ಞೇ**
**ತ್ರಿಭುವನಭೂತಿಕರಿ ಪ್ರಸೀದ ಮಹ್ಯಮ್ ॥ ೨೪ ॥**

**'ಎಲೈ ಕಮಲವಾಸಿನಿಯೆ, ಕಮಲವನ್ನು ಹಿಡಿದಿರುವ ಹಸ್ತವುಳ್ಳವಳೆ, ಅತ್ಯಂತ ಶುಭ್ರವಾದ ಬಟ್ಟೆ, ಗಂಧ, ಹೂಗಳಿಂದ ಅಲಂಕೃತಳಾದವಳೆ, ಪೂಜ್ಯಳೆ, ವಿಷ್ಣುಪತ್ನಿಯೆ, ಮನೋಜ್ಞಳೆ, ಮೂರುಲೋಕಗಳಿಗೂ ಐಶ್ವರ್ಯಪ್ರದಳೆ, ನನಗೆ ಪ್ರಸನ್ನಳಾಗು.'**

ಈ ಮಂತ್ರದಲ್ಲಿ ಭಕ್ತನು ಲಕ್ಷ್ಮಿಯು ತನಗೆ ಪ್ರಸನ್ನಳಾಗಬೇಕೆಂದು ಮತ್ತೊಮ್ಮೆ ಕೇಳಿಕೊಂಡಿದ್ದಾನೆ. ಆಕೆಯ ಗುಣಗಳನ್ನೂ ರೂಪಾಕಾರಾದಿಗಳನ್ನೂ ಅಲಂಕಾರಗಳನ್ನೂ ಸ್ಮರಿಸಿರುತ್ತಾನೆ. ಭಗವತಿಯನ್ನು ವರ್ಣಿಸಲು ವೇದಶಾಸ್ತ್ರಗಳಿಂದಲೂ ಸಾಧ್ಯವಾಗಲಾರದು. ಆದರೂ ಅವು ತಮ್ಮ ಶಕ್ತಿಯಿದ್ದಷ್ಟು ವರ್ಣಿಸಿ ತಿಳಿಸಿರುವದರಿಂದಲೇ ನಮಗೆ ಸ್ವಲ್ಪವಾದರೂ ದೇವಿಯನ್ನು ಚಿಂತಿಸಲು ಸಾಧ್ಯವಾಗಿದೆ. ಮಹಾಲಕ್ಷ್ಮಿಯ ವಿಷಯಕ್ಕೆ ಇಲ್ಲಿರುವ ವರ್ಣನೆಯನ್ನು ನೋಡಿದರೆ ಆಕೆಯು ಪರಮಸಾತ್ವಿಕಳಾದ ದೇವತೆಯೆಂದು ತಿಳಿದುಬರುತ್ತದೆ. ಆದ್ದರಿಂದ ಭಕ್ತನು ತಾನೂ ಸಾತ್ತ್ವಿಕನಾದಂತೆಲ್ಲ ಲಕ್ಷ್ಮಿಯ ಸಾನ್ನಿಧ್ಯವನ್ನು ಪಡೆಯಲಿರುವನು. ಆಕೆಯು ಮೂರುಲೋಕಗಳಿಗೂ ಐಶ್ವರ್ಯಗಳನ್ನು ನೀಡುವ ಸಾಮರ್ಥ್ಯವುಳ್ಳವಳಾದ್ದರಿಂದ ಒಮ್ಮೆ ಆಕೆಯನ್ನು ಭಜಿಸಿದವನು ಮತ್ತೆ ಯಾವ ದೇವತೆಗಳನ್ನೂ ಬೇಡಬೇಕಾದದ್ದಿರುವದಿಲ್ಲ. ಆದರೆ ಇಂಥ ಮಹಾಲಕ್ಷ್ಮಿಯ ಬಳಿಯಲ್ಲಿ ನಾವು ಕೇಳಿಕೊಳ್ಳುವಾಗ ಎಚ್ಚರಿಕೆಯಿಂದಿರಬೇಕು. ಏನನ್ನು ನಾವು ಕೇಳಿಕೊಂಡರೂ ಆಕೆಯ ದೃಷ್ಟಿಯಿಂದ ಅಲ್ಪವಾಗುವದೇ ಖಂಡಿತ. ಆದ್ದರಿಂದ 'ನೀನು ಯಾವಾಗಲೂ ಪ್ರಸನ್ನಳಾಗಿರು' ಎಂದು ಕೇಳಿಕೊಳ್ಳುವದೇ ಜಾಣತನವಾಗಿರುತ್ತದೆ. ಒಮ್ಮೆ ಒಬ್ಬ ರಾಜನ ಬಳಿಗೆ ಹಳ್ಳಿಯವನೊಬ್ಬನು ಹೋಗಿ 'ಬುದ್ಧಿ' ತಾವು ನಮ್ಮ ಗ್ರಾಮಕ್ಕೆ ದಯಮಾಡಿಸಿ ಎರಡು ದಿನ ಉಳಿಯಬೇಕು' ಎಂದು ಬೇಡಿದನಂತೆ. ರಾಜನು 'ಅದೇಕೆ? ನಿಮ್ಮ ಊರಿಗೆ ಬೇಕಾದ ಸೌಕರ್ಯವನ್ನು ಕೇಳಿಕೊಳ್ಳಬಹುದಲ್ಲವೆ?' ಎಂದದ್ದಕ್ಕೆ 'ತಾವು ಬರುವದೇ ಆದರೆ ರಸ್ತೆ, ದೀಪ, ನೈರ್ಮಲ್ಯ, ನೀರು, ವಾಹನಗಳ ಸಂಚಾರ- ಎಲ್ಲವೂ ತಾನಾಗಿಯೇ ದೊರಕುತ್ತದೆಯಲ್ಲವೆ? ಮತ್ತೇನು ಬೇಕು?' ಎಂದನಂತೆ. ಹಾಗೆ ನಾವು ಲಕ್ಷ್ಮಿಯನ್ನೇ ಯಾವಾಗಲೂ ನಮ್ಮೊಡನೆ ಇರುವಂತೆ ಕೇಳಿಕೊಂಡುಬಿಟ್ಟರೆ ಉಳಿದ

ಅನುಕೂಲಗಳೆಲ್ಲವೂ ತಾವಾಗಿಯೇ ಒದಗಿ ಬರಲಿವೆ. ಆದ್ದರಿಂದ ಮಹಾಲಕ್ಷ್ಮಿಯು ಮನೋಜ್ಞಳೂ ಆಗಿರುವದರಿಂದ ನಮ್ಮ ಮನಸ್ಸಿನ ಕಾಮನೆಗಳನ್ನೆಲ್ಲ ಪೂರ್ಣಗೊಳಿಸಿಯೇ ತೀರುವಳು. ಆಕೆಯ ಪ್ರಸನ್ನತೆಯು ದೊರಕಿದರೆ ಸಾಕು- ಎಂಬಿದು ಭಕ್ತನ ಅಭಿಪ್ರಾಯವಾಗಿದೆ.

ಈಗ ಇಪ್ಪತ್ತೈದನೆಯ ಮಂತ್ರವನ್ನು ನೋಡೋಣ :

**ಓಂ॥ ವಿಷ್ಣುಪತ್ನೀಂ ಕ್ಷಮಾಂ ದೇವೀಂ ಮಾಧವೀಂ ಮಾಧವಪ್ರಿಯಾಮ್ ।**
**ಲಕ್ಷ್ಮೀಂ ಪ್ರಿಯಸಖೀಂ ದೇವೀಂ ನಮಾಮ್ಯಚ್ಯುತವಲ್ಲಭಾಮ್ ॥ ೨೫ ॥**

**'ವಿಷ್ಣುವಿನ ಪತ್ನಿಯೂ ಕ್ಷಮಾಗುಣಸಂಪನ್ನಳೂ ಮಾಧವಿಯೂ ಮಾಧವಪ್ರಿಯಳೂ ಪ್ರಿಯಸಖಿಯೂ ಅಚ್ಯುತನಿಗೆ ಮೆಚ್ಚಾದವಳೂ ಆದ ಲಕ್ಷ್ಮಿಯನ್ನು ನಾನು ನಮಸ್ಕರಿಸುವೆನು.'**

ಈ ಮಂತ್ರದಲ್ಲಿಯೂ ಲಕ್ಷ್ಮಿಯನ್ನು ವಿಷ್ಣುವಿನ ಪತ್ನಿಯೆಂದೂ ಕ್ಷಮಾಗುಣಸಂಪನ್ನಳೆಂದೂ ಮಾಧವನ ಸ್ತ್ರೀಯಾದ್ದರಿಂದ ಮಾಧವಿಯೆಂದೂ ಮಾಧವನಿಗೆ ಪ್ರಿಯಳಾದವಳೂ ಸ್ನೇಹಿತಳೂ ಆಗಿರುವಳೆಂದೂ ಹೊಗಳಿದೆ. ಲಕ್ಷ್ಮಿಯು ಸಂಪೂರ್ಣವಾಗಿ ವಿಷ್ಣುವಿನ ಅಧೀನಳೆಂದದ್ದರಿಂದ ಆತನ ಭಕ್ತರಿಗೆ ಮಾತ್ರವೇ ಇವಳು ಅನುಗ್ರಹಿಸುತ್ತಾಳೆ-ಎಂದಾಗುವದು. ಮತ್ತು ಆ ಭಗವಂತನು ಅಪ್ಪಣೆಮಾಡಿದರೆ ಮಾತ್ರ ಅಂಥವರಿಗೆ ಐಶ್ವರ್ಯವನ್ನು ದಯಪಾಲಿಸುವಳು. ಆದ್ದರಿಂದ ಐಶ್ವರ್ಯಕಾಮನಾದವನು ವಿಷ್ಣುವಿನ ಭಕ್ತನಾಗಿರಬೇಕು. ಹಾಗೆ ಭಕ್ತನಾಗಲು ವಿಷ್ಣುವನ್ನು ಸಂತೋಷಗೊಳಿಸುವ ಕರ್ಮಗಳನ್ನೇ ಮಾಡಬೇಕು. ವಿಷ್ಣುಪುರಾಣದಲ್ಲಿ ಪರಾಶರಮಹರ್ಷಿಗಳು ಹೇಳಿರುವದೇನೆಂದರೆ : 'ವರ್ಣಾಶ್ರಮಾಚಾರಗಳನ್ನು ಪರಿಪಾಲಿಸುತ್ತಾ ವಿಷ್ಣುವನ್ನು **ಯಜ್ಞ-ದಾನ-ತಪಸ್ಸು**ಗಳಿಂದ ಆರಾಧಿಸುವದೊಂದೇ ಆತನನ್ನು ಸಂತೋಷಗೊಳಿಸುವದಕ್ಕೆ ಉಪಾಯವು' ಎಂದಿರುತ್ತಾರೆ. ಅಜ್ಞಾನವಶದಿಂದ ನಾವು ಸದಾಚಾರಗಳನ್ನು ಕೈಬಿಟ್ಟಿದ್ದಲ್ಲಿ ಅವುಗಳನ್ನು ಮತ್ತೆ ಅಳವಡಿಸಿಕೊಳ್ಳಬೇಕು. ಆಯಾ ಯುಗಧರ್ಮಕ್ಕೆ ತಕ್ಕಷ್ಟಾದರೂ ಆಚಾರ - ವಿಚಾರಗಳನ್ನು ಪರಿಪಾಲಿಸಬೇಕು. ನಿಜವಾಗಿಯೂ

ಮಹಾವಿಷ್ಣುವು ಆಚಾರಪ್ರಿಯನು. ಮಹಾಭಾರತದಲ್ಲಿ ಭೀಷ್ಮರುಕೂಡ 'ಧರ್ಮವು ಸದಾಚಾರದಿಂದಲೇ ಹುಟ್ಟುವದು ; ಧರ್ಮಕ್ಕೆ ಅಚ್ಯುತನೇ ಒಡೆಯನು' ಎಂದು ತಿಳಿಸಿರುತ್ತಾರೆ. ಆದ್ದರಿಂದ ಈಗಿನ ಕಾಲಕ್ಕೆ ನಾವು ಹಣವನ್ನು ಹೇಗೋ ಸಂಪಾದಿಸಿ ಬೇಕಾದ ವಸ್ತುಗಳನ್ನು ಕೂಡಿಹಾಕಿಕೊಂಡಲ್ಲಿ ಸುಖವಾಗಿರಬಹುದೆಂದು ಭಾವಿಸಿರುವದೂ ತಪ್ಪೇ ಆಗಿದೆ. ಏನಿದ್ದರೂ ಸದಾಚಾರಗಳೂ ವಿಷ್ಣುಭಕ್ತಿಯೂ ಇದ್ದರೆ ಮಾತ್ರ ಸುಖವು ದಕ್ಕುವದು. ಲಕ್ಷ್ಮೀಯೂ ಅನುಕೂಲಳಾಗುವಳು. ಆಕೆಯನ್ನು ನಾವು ವಿಷ್ಣುಪತ್ನಿಯಾಗಿ ಆರಾಧಿಸುವದೇ ಹೆಚ್ಚಿನದು. ವಿಷ್ಣುವಿನ ಸಂಬಂಧವಿಲ್ಲದ ಕೇವಲ ಲಕ್ಷ್ಮೀಯು ಸುಖಕರಳಲ್ಲ. ಹೀಗಿದ್ದರೂ ಜೀವನಕ್ರಮದಲ್ಲಿ ನಾವೇಕೆ ಕೇವಲ ಹಣಕ್ಕಾಗಿ ಮನಸೋತು ವಿಷ್ಣುವಿಗೆ - ಎಂದರೆ ಧರ್ಮಕ್ಕೆ ಅಪಚಾರಮಾಡುತ್ತಿರುವೆವೋ ತಿಳಿಯದಾಗಿದೆ. ಇನ್ನು ಮುಂದಾದರೂ ಈ ತಪ್ಪನ್ನು ನಾವು ತಿದ್ದಿಕೊಳ್ಳಬೇಕು. ಇಲ್ಲವಾದರೆ ಸುಖವು ನಮ್ಮ ಪಾಲಿಗೆ ಇಲ್ಲವಾಗುವದು.

ಈಗ ಇಪ್ಪತ್ತಾರನೆಯ ಮಂತ್ರವನ್ನು ನೋಡೋಣ. ಅದು ಹೀಗಿದೆ:

**ಓಂ॥ ಮಹಾದೇವ್ಯೈ ಚ ವಿದ್ಮಹೇ ವಿಷ್ಣುಪತ್ನ್ಯೈ ಚ ಧೀಮಹಿ ।**
**ತನ್ನೋ ಲಕ್ಷ್ಮೀಃ ಪ್ರಚೋದಯಾತ್ ॥ ೨೬ ॥**

**'ವಿಷ್ಣುಪತ್ನಿಯಾದ ಮಹಾದೇವಿಯನ್ನು ನಾವು ಉಪಾಸಿಸುತ್ತೇವೆ ; ಆಕೆಯು ನಮ್ಮ ಬುದ್ಧಿವೃತ್ತಿಯನ್ನು ಪ್ರೇರಿಸುವವಳಾಗಲಿ.'**

ಈ ಮಂತ್ರವನ್ನು '**ಲಕ್ಷ್ಮೀಗಾಯತ್ರಿ**' ಎಂದು ಕರೆಯುತ್ತಾರೆ. ಗಾಯತ್ರೀ ಎಂಬಿದು ಛಂದಸ್ಸಿನ ಹೆಸರು. ಇದರ ನಿಯಮದಂತೆ ಮೂರು ಪಾದಗಳೂ ಒಟ್ಟು ೨೪ ಅಕ್ಷರಗಳೂ ಮಂತ್ರದಲ್ಲಿರುತ್ತವೆ. ಈ ಮಂತ್ರದಂತೆಯೇ ಬ್ರಹ್ಮ, ವಿಷ್ಣು, ರುದ್ರ, ಗಣಪತಿ, ಗರುಡ- ಮುಂತಾದ ದೇವತೆಗಳನ್ನೂ ಕುರಿತ ಗಾಯತ್ರೀಮಂತ್ರಗಳು ವೇದದಲ್ಲಿ ಪ್ರಸಿದ್ಧವಾಗಿವೆ. ಪ್ರಕೃತ - ಈ ಸ್ತುತಿಯಲ್ಲಿ ಮುಖ್ಯವಾಗಿ ನಮ್ಮ ಬುದ್ಧಿವೃತ್ತಿಗಳನ್ನು ಪ್ರೇರಿಸುವಂತೆ ಲಕ್ಷ್ಮೀದೇವಿಯನ್ನು ಪ್ರಾರ್ಥಿಸಲಾಗಿದೆ. ದೇವತೆಗಳನ್ನು ಕುರಿತ ಎಲ್ಲಾ ಗಾಯತ್ರೀಮಂತ್ರಗಳಲ್ಲಿಯೂ

ಬುದ್ಧಿಪ್ರೇರಣೆಯ ಪ್ರಾರ್ಥನೆಯೇ ಇರುತ್ತದೆ. ಏಕೆಂದರೆ ಮನುಷ್ಯನಿಗೆ ದೇವರು ದಯಪಾಲಿಸಿರುವ ಐಶ್ವರ್ಯಗಳಲ್ಲೆಲ್ಲ ಬುದ್ಧಿಯೇ ಹೆಚ್ಚಿನದು. ಈಗಲೂ ಸಮಾಜದಲ್ಲಿ ಬುದ್ಧಿವಂತನಿಗೆ ಅಗ್ರಸ್ಥಾನವಿದ್ದೇ ಇದೆ. ಸರಿಯಾದ ಬುದ್ಧಿಶೀಲರನ್ನೂ ವಿದ್ಯಾವಂತರನ್ನೂ ಜನರು ಯಾವ ದೇಶದಲ್ಲಿಯಾದರೂ ಗೌರವಿಸಿಯೇ ತೀರುತ್ತಾರೆ. ಬುದ್ಧಿವಂತನಿಗೆ ಅಧೀನರಾಗಿಯೇ ಉಳಿದವರೂ ಬಾಳಿಬದುಕುತ್ತಾರೆ. ಆದರೆ ಆ ಬುದ್ಧಿ ಎಂಬುದು ದೇವತೆಗಳ ಪ್ರಸಾದದಿಂದ ಪ್ರೇರೇಪಿಸಲ್ಪಟ್ಟಾಗ ಸದ್ಬುದ್ಧಿಯೆನಿಸಿ ಎಲ್ಲರಿಗೂ ಒಳ್ಳೆಯದನ್ನುಂಟು ಮಾಡುವದು. ಕೇವಲ ಅಹಂಕಾರ-ಕಾಮ ಕ್ರೋಧಗಳಿಂದ ಪ್ರೇರೇಪಿಸಲ್ಪಟ್ಟಾಗ ಲೋಕಕಂಟಕವಾಗುವದು. ಈಗಿನ ಕಾಲಕ್ಕೆ ಬುದ್ಧಿವಂತರು ಹೆಚ್ಚಾಗಿರಬಹುದಾದರೂ ಪೂರ್ವಕಾಲದ ಋಷಿಮುನಿಗಳ ಬುದ್ಧಿಯಂಥ ಸದ್ಬುದ್ಧಿಶೀಲರು ವಿರಳರಾಗಿರುತ್ತಾರೆ. ಆದ್ದರಿಂದಲೇ ನಮ್ಮಲ್ಲಿ ಎಲ್ಲಾ ರೀತಿಯ ಸಮಸ್ಯೆಗಳೂ ಎದ್ದುಕೊಂಡಿವೆ. ಅವುಗಳಿಗೆ ಪರಿಹಾರವನ್ನು ಚಿಂತಿಸುವವರು ಕೂಡ ತಮ್ಮತಮ್ಮ ಅಧಿಕಾರ, ಸ್ವಾರ್ಥ, ವೈಯಕ್ತಿಕವಿಚಾರಗಳಿಗೇ ಪ್ರಾಧಾನ್ಯತೆಯನ್ನು ಕೊಟ್ಟು ಚಿಂತಿಸುತ್ತಿರುವದರಿಂದ ಸಮಸ್ಯೆಗಳು ಇನ್ನಷ್ಟು ಕಗ್ಗಂಟಾಗುತ್ತಿವೆ. ಇದಕ್ಕೆಲ್ಲ ಮುಖ್ಯ ಕಾರಣವೇನೆಂದರೆ ಬುದ್ಧಿಗೆ ಮಾರ್ಗದರ್ಶನವಿಲ್ಲದಿರುವದು. ದೇವರು ಕೊಟ್ಟಿರುವ ಈ ಬುದ್ಧಿಯು ಕತ್ತಿಯಂತಿದ್ದು ಇದನ್ನು ಶತ್ರುಸಂಹಾರಕ್ಕೂ ತನ್ನನ್ನೇ ಕೊಂದುಕೊಳ್ಳುವದಕ್ಕೂ ಎರಡಕ್ಕೂ ಉಪಯೋಗಿಸಲು ಸಾಧ್ಯವಿದೆ. ಆದ್ದರಿಂದ ನಾವು ಬುದ್ಧಿಗೆ ಪ್ರೇರಕನಾಗುವಂತೆ ಪ್ರತಿದಿನವೂ ಭಗವಂತನನ್ನು ಬೇಡಿಕೊಂಡಹೊರತು ಉದ್ಧಾರವಾಗಲಾರೆವು. ಇದೇ ಗಾಯತ್ರೀಮಂತ್ರಗಳ ಅರ್ಥವಾಗಿದೆ.

ಇಲ್ಲಿ ಭಗವಂತನನ್ನೇ ದೇವಿಯ ರೂಪದಿಂದ ಭಾವಿಸಿ ಲಕ್ಷ್ಮೀದೇವಿಯು ನಮ್ಮ ಬುದ್ಧಿವೃತ್ತಿಗಳನ್ನು ಪ್ರೇರಿಸಲಿ - ಎಂದು ಕೇಳಿಕೊಳ್ಳಲಾಗಿದೆ. ಆದ್ದರಿಂದ ಪ್ರತಿದಿನವೂ ನಮ್ಮ ಚಟುವಟಿಕೆಗಳನ್ನು ಆರಂಭಮಾಡುವ ಮುಂಚೆ ನಮಗೆ ಇಷ್ಟವಾದ ಭಗವಂತನ ಯಾವದೇ ನಾಮರೂಪಗಳಲ್ಲಿ ಒಂದನ್ನು ಆರಿಸಿಕೊಂಡು ಆ ದೇವತೆಯನ್ನು ನಮ್ಮ ಬುದ್ಧಿವೃತ್ತಿಯನ್ನು ಪ್ರೇರಿಸುವಂತೆ ಬೇಡಿಕೊಳ್ಳಬೇಕು.

ಹೀಗೆ ಹಲವಾರು ಬಾರಿ ಬೇಡಿಕೊಳ್ಳುವದೇ ಜಪವೆನಿಸುತ್ತದೆ. ನಮ್ಮ ಪೂರ್ವಿಕರಾದ ಋಷಿಗಳು, ಎಲ್ಲರಿಗೂ ಪ್ರತಿದಿನವೂ ಪಕ್ಷಪಾತವಿಲ್ಲದೆ ದರ್ಶನಕೊಡುವ, ಚಿರಪರಿಚಿತನಾದ ಹಾಗೂ ನಮ್ಮೆಲ್ಲರ ಜೀವನಾಧಾರನಾದ ಸೂರ್ಯನನ್ನು ಕುರಿತು ತ್ರಿಕಾಲದಲ್ಲಿಯೂ ನಮ್ಮ ಬುದ್ಧಿವೃತ್ತಿಗಳನ್ನು ಪ್ರೇರಿಸುವಂತೆ ಪ್ರಾರ್ಥಿಸಿಕೊಳ್ಳುತ್ತಿದ್ದರು. ಇದೇ **ಗಾಯತ್ರೀಜಪ**ವೆಂದೂ ಇದರ ಅಂಗೋಪಾಂಗಗಳೂ ಸೇರಿದ ಕರ್ಮವು **ಸಂಧ್ಯಾವಂದನೆ**ಯೆಂದೂ ಪ್ರಸಿದ್ಧವಾಯಿತು. ಇಂಥ ಅರ್ಥವತ್ತಾದ ಸಂಧ್ಯಾವಂದನೆಯು ಯಾರಿಗೆ ಬೇಡವಾದೀತು? ಮಂತ್ರಗಳೇನೋ ಸಂಸ್ಕೃತಭಾಷೆಯಲ್ಲಿವೆ. ಆದರೆ ಮಾನವನ ಹೃದಯಾಂತರಾಳದ ಪ್ರಾರ್ಥನೆಯು ಯಾವ ಭಾಷೆಯಲ್ಲಿದ್ದರೂ ದೇವರಿಗೆ ಅರ್ಥವಾಗುತ್ತದೆ. ಅನುಷ್ಠಾನವು ಮುಖ್ಯವೇ ಹೊರತು ಉಳಿದ ಆಡಂಬರಗಳಲ್ಲ, ಆದ್ದರಿಂದ ಈಗಿನ 'ಹಣಸಂಪಾದನೆಯೇ ಪರಮಧ್ಯೇಯ'ವಾಗಿರುವ ಲೌಕಿಕಪ್ರಪಂಚದಲ್ಲಿರುವವರು ಕೂಡ ಕಡೆಯಪಕ್ಷ ಲಕ್ಷ್ಮೀ-ಗಾಯತ್ರಿಯನ್ನಾದರೂ ಜಪಿಸಬೇಕು. ಬುದ್ಧಿಯಿಲ್ಲದವನಿಗೆ ಲಕ್ಷ್ಮಿಯು ತಾನೆ ಹೇಗೆ ಒಲಿದಾಳು ? ಒಲಿದಳಾದರೂ ಸುಖವನ್ನು ಹೇಗೆ ಕೊಟ್ಟಾಳು ? ಬಡವರೇ ಹೆಚ್ಚಾಗಿರುವ ಈ ದೇಶದಲ್ಲಿ ಆರ್ಥಿಕವಾಗಿ ಅತಿಯಾದ ತಾರತಮ್ಯವಿರುವದು ನಮ್ಮ ಗಮನಕ್ಕೆ ಬಂದಿದೆ. ಆದರೆ ಅದಕ್ಕಿಂತಲೂ ಮಿಗಿಲಾಗಿ ಬೌದ್ಧಿಕವಾದ ಬಡತನವಿದೆ- ಎಂಬುದನ್ನು ಯಾರೂ ಚಿಂತಿಸುತ್ತಲೇ ಇಲ್ಲವೆಂಬುದೊಂದು ಆಶ್ಚರ್ಯಕರವಾದ ಸಂಗತಿಯಾಗಿದೆ. ನಮಗೆ ಬೇರೊಬ್ಬರನ್ನು ಹಣವಂತರನ್ನಾಗಿ ಮಾಡಲು ಇಷ್ಟವಾಗದಿದ್ದರೂ ಬುದ್ಧಿವಂತರನ್ನಾಗಿಯಾದರೂ ಮಾಡಬಹುದಲ್ಲವೆ? ಇದೂ ಒಂದು ಸಮಾಜಸೇವೆಯಲ್ಲವೆ ? ಯೋಚಿಸಬೇಕು.

ಹೀಗೆ ಲಕ್ಷ್ಮೀಗಾಯತ್ರಿಯು ಮಹಾದೇವಿಯೂ ವಿಷ್ಣುಪತ್ನಿಯೂ ಆಗಿರುವ ಲೋಕಮಾತೆಯಾದ ಭಗವತಿಯ ದಿವ್ಯಪ್ರಾರ್ಥನಾರೂಪವಾಗಿದ್ದು ನಮ್ಮೆಲ್ಲರಿಗೂ ಪ್ರತಿದಿನವೂ ಚಿಂತನೀಯವಾಗಿದೆ. ನಾವು ನಿಜವಾದ ಲಕ್ಷ್ಮೀಭಕ್ತರಾಗಬೇಕಾದರೆ ಆ ಮಹಾತಾಯಿಯನ್ನು ನಮ್ಮ ಬುದ್ಧಿವೃತ್ತಿಗಳನ್ನು

ಪ್ರೇರಿಸುವಂತೆ ಬೇಡಿಕೊಳ್ಳಬೇಕು. ನಂತರ ಅವಳ ಪ್ರಸಾದರೂಪವಾದ ಐಶ್ವರ್ಯವನ್ನು ಬೇರೆಯವರಿಗೂ ಹಂಚಿ ನಾವೂ ಭೋಗಿಸಬೇಕು. ಆಗಲೇ ನಾವು ಪರಮಪುರುಷಾರ್ಥಕ್ಕೆ ಅಧಿಕಾರಿಗಳಾಗಲಿರುವೆವು.

***

## ೧೨. ಶತಸಂವತ್ಸರಂ ದೀರ್ಘಮಾಯುಃ

ಶ್ರೀಸೂಕ್ತದ ಕೊನೆಯ ಮಂತ್ರವನ್ನು ಈಗ ವಿಚಾರಮಾಡಬೇಕಾಗಿದೆ. ಅದು ಹೀಗಿದೆ:

**ಓಂ॥ ಶ್ರೀರ್ವರ್ಚಸ್ವಮಾಯುಷ್ಯಮಾರೋಗ್ಯಮಾವಿಧಾಚ್ಛೋಭಮಾನಂ ಮಹೀಯತೇ । ಧನಂ ಧಾನ್ಯ ಪಶುಂ ಬಹುಪುತ್ರಲಾಭಂ ಶತಸಂವತ್ಸರಂ ದೀರ್ಘಮಾಯುಃ ॥ ೨೭ ॥**

**'ಸಂಪತ್ತು, ವರ್ಚಸ್ಸು, ಆಯುಷ್ಯ, ಆರೋಗ್ಯ, ಶೋಭಾಯಮಾನವಾದ ಮಹಿಮೆ, ಧನ, ಧಾನ್ಯ, ಪಶು, ಬಹುಮಕ್ಕಳ ಪ್ರಾಪ್ತಿ, ನೂರು ವರ್ಷಗಳ ದೀರ್ಘವಾದ ಬದುಕು- ಇವುಗಳು (ಲಕ್ಷ್ಮೀಕೃಪೆಯಿಂದ ಉಂಟಾಗಲಿ !)'**

ಈ ಮಂತ್ರವು ಶ್ರೀಸೂಕ್ತದ ಸಾರವನ್ನೆಲ್ಲ ಒಳಗೊಂಡಿದೆ - ಎಂದು ಹೇಳಬಹುದು. ಏಕೆಂದರೆ ಲಕ್ಷ್ಮೀ ಉಪಾಸಕನು ಇಹಲೋಕದಲ್ಲಿ ಬಯಸುವ ಎಲ್ಲಾ ಬಯಕೆಗಳೂ ಇಲ್ಲಿ ಹೆಸರಿಸಲ್ಪಟ್ಟಿವೆ. ಮತ್ತು ಎಲ್ಲವೂ ಅವಶ್ಯವಾಗಿ ಪ್ರಾಪಂಚಿಕವಾದ ಸುಖಭೋಗಕ್ಕೆ ಬೇಕಾದವುಗಳಾಗಿವೆ. ಇವುಗಳಲ್ಲಿ ಯಾವದೊಂದು ಇಲ್ಲವಾದರೂ ಕೊರತೆಯೆನಿಸುವದು. ಹೇಗೆಂದರೆ : ಮೊದಲನೆಯದಾಗಿ ದೀರ್ಘಾಯುಷ್ಯವನ್ನೇ ತೆಗೆದುಕೊಳ್ಳೋಣ. 'ಜೀವನ್ ಭದ್ರಾಣಿ ಪಶ್ಯತಿ' ಎಂದು ಹನುಮಂತನು ಹೇಳಿರುವಂತೆ ಬದುಕಿದ್ದರೆ ಮಾತ್ರ ಮಂಗಳವನ್ನು (ಸುಖವನ್ನು) ಹೊಂದಬಹುದು. ನೂರು ವರ್ಷಗಳು ಹೇಗೆ ಬದುಕಬೇಕೆಂಬುದನ್ನು ವೇದವು ಹೀಗೆ ತಿಳಿಸುತ್ತಿದೆ. **ಪಶ್ಯೇಮ ಶರದಶ್ಶತಮ್**

ಎಂಬೀ ಮಂತ್ರಗಳಲ್ಲಿ 'ನಾವು ನೂರು ವರ್ಷಗಳು ಬದುಕಿರುವವರೆಗೂ ನೋಡುತ್ತಿರೋಣ, ಆನಂದಪಡುತ್ತಿರೋಣ, ಚೆನ್ನಾಗಿದ್ದುಕೊಂಡಿರೋಣ, ಕೇಳುತ್ತಿರೋಣ, ಹೇಳುತ್ತಿರೋಣ, ಜಯಶೀಲರಾಗೋಣ' ಎಂಬ ಪ್ರಾರ್ಥನೆಯಿದೆ. ಇದರ ಅಭಿಪ್ರಾಯವೇನೆಂದರೆ : ನೂರು ವರ್ಷಗಳ ಕಾಲವೂ ನಮ್ಮ ಕಣ್ಣು, ಕಿವಿ, ಕೈಕಾಲುಗಳು ದೃಢವಾಗಿದ್ದುಕೊಂಡು ಶಬ್ದಾದಿವಿಷಯಗಳನ್ನು ಅನುಭವಿಸುವಂತಿರಲಿ ; ಹಾಗೂ ಚೆನ್ನಾಗಿ ಆರೋಗ್ಯವಂತರಾಗಿ ಇಂದ್ರಿಯಪಾಟವವುಳ್ಳವರಾಗಿ ಬದುಕೋಣ - ಎಂಬಿದು ನಿಜವಾಗಿಯೂ ದೀರ್ಘಾಯುಷ್ಯದ ಪರಮಪ್ರಯೋಜನವಾಗಿದೆ. ಈ ಅರ್ಥದಲ್ಲಿ ನೂರು ವರ್ಷಗಳ ಬಾಳು ಸಾರ್ಥಕವೇ ಸರಿ. ಇಂಥ ಆಯುಷ್ಯದೊಡನೆ ಸಂಪತ್ತು, ವರ್ಚಸ್ಸು, ಮಹಿಮೆಗಳೂ ಸೇರಿರಬೇಕು. ಸಂಪತ್ತೆಂಬುದು ನಮ್ಮ ಜೀವನಕ್ಕೆ ಬೇಕಾದ ಸಾಮಗ್ರಿಗಳ ಸಂಗ್ರಹವಾಗಿರುತ್ತದೆ. ಈಗಿನ ಕಾಲಕ್ಕೆ ನಮಗೆ ಅವಶ್ಯವಾದ ವಸ್ತುಗಳು ಹಣವಿದ್ದರೂ ಕೆಲವು ಸಲ ಸಿಗುವದಿಲ್ಲ. ಸಿಕ್ಕಿದರೂ ಶುದ್ಧವಾದದ್ದು ಅಪರೂಪ. ಆದ್ದರಿಂದ ಲಕ್ಷ್ಮೀ ಕೃಪೆಯಿಂದ ನಮಗೆ ಇಷ್ಟವಾದ ವಸ್ತುಗಳು ಕೊರತೆಯಿಲ್ಲದೆ ಕಾಲಕಾಲಕ್ಕೆ ದೊರಕಲಿ - ಎಂದರ್ಥ. ವರ್ಚಸ್ಸು- ಮಹಿಮೆಗಳು ಮಾತ್ರ ವಿದ್ಯೆಯ ಬಲದಿಂದ ದೊರಕತಕ್ಕದ್ದೆಂದು ತಿಳಿಯಬೇಕು. ವಿದ್ಯಾಲಕ್ಷ್ಮಿಯು ಇವುಗಳನ್ನುಂಟುಮಾಡಬೇಕಾಗಿದೆ. 'ವಿದ್ವಾನ್ ಸರ್ವತ್ರ ಪೂಜ್ಯತೇ' ಎಂದಂತೆ ಗೌರವವೂ ಕೀರ್ತಿಯೂ ಲಭಿಸುತ್ತದೆ. ದೀರ್ಘಜೀವನವು ಬೇಸರವಾಗದೆ ಇರಬೇಕಾದರೆ ಈ ವಿದ್ಯಾಲಕ್ಷ್ಮಿಯು ಒಲಿಯಬೇಕು. ಅದರಲ್ಲಿಯೂ **ಅಧ್ಯಾತ್ಮವಿದ್ಯೆಯು** ಒಲಿದದ್ದೇ ಆದರೆ ಅಂಥ ಮಾನವನ ಜೀವನವು ಕಡೆಗಾಲದಲ್ಲಿ ಬಹಳ ಸುಖಮಯವಾಗಿದ್ದು ಚೆನ್ನಾಗಿ ಪಕ್ವವಾದ ಹಣ್ಣಿನಂತೆ ರುಚಿಯಾಗಿರುವದು. ಜೊತೆಗೆ **ವೈರಾಗ್ಯವೂ ವಿವೇಕವೂ ಸಂನ್ಯಾಸವೂ** ಸೇರಿಬಿಟ್ಟರೆ ಅಂಥವನು ಮಹಿಮಾವಂತನಾಗುವನೆಂಬುದನ್ನು ಹೇಳತಕ್ಕದ್ದೇನಿದೆ ? ಆದರೆ ಇದೆಲ್ಲ ಮಹಾಲಕ್ಷ್ಮಿಯ ಪ್ರಸಾದದಿಂದಲೇ ಮಾನವನಿಗೆ ಸಿಗಬೇಕಾಗಿದೆ.

ಈಗ ಧನ, ಧಾನ್ಯ, ಪಶು, ಪುತ್ರರನ್ನು ವಿಚಾರಮಾಡೋಣ. ಧನಕನಕವಜ್ರವೈಡೂರ್ಯಾದಿಗಳು ನಿಜವಾಗಿ ಲಕ್ಷ್ಮಿಯ ಸ್ವರೂಪವೇ

ಆಗಿರುತ್ತವೆ. ಇವುಗಳ ಸಂಗ್ರಹವು ತಕ್ಕಮಟ್ಟಿಗೆ ಮಾನವನಿಗೆ ಸಂತಸವುಂಟುಮಾಡುತ್ತವೆ. ಆದರೆ ಈ ವಸ್ತುಗಳ ಚಿಂತೆಯನ್ನೇ ಯಾವಾಗಲೂ ತಲೆಗೆ ಹತ್ತಿಸಿಕೊಳ್ಳಬಾರದು. ಇವುಗಳ ಪ್ರಯೋಜನವೇನೆಂದರೆ : ಬೇರೊಬ್ಬರು ನಮ್ಮನ್ನು ಹೀಯಾಳಿಸದಂತೆ ಲೌಕಿಕಪ್ರಪಂಚದಲ್ಲಿ ನಾವು ಅವರಿಗಿಂತ ಕೀಳಲ್ಲ-ಎಂದು ತೋರಿಸಲು ಮಾತ್ರ ಇವು ಇರಬೇಕು. ನಮ್ಮೊಳಗೆ ಇವುಗಳ ವಿಷಯಕ್ಕೆ ವ್ಯಾಮೋಹವಿರಬಾರದು. ಇದೇ ಲಕ್ಷ್ಮಿಯ ಗುಟ್ಟು. ಆದರೆ ಐಶ್ವರ್ಯವೆಲ್ಲ ತುಂಬಿದ್ದರೂ ಮಕ್ಕಳಿಲ್ಲದಿದ್ದರೆ ಅದು ವ್ಯರ್ಥವೇ ಸರಿ. ಮನೆಯಲ್ಲಿ ವೈಭವಕ್ಕೆ ತಕ್ಕಂತೆ ಅನುಭವಿಸುವ ಜೀವಿಗಳಿರಬೇಕು. ಅವರಲ್ಲೆಲ್ಲ ಕುಟುಂಬಿಯು ತನ್ನ ಆನಂದವನ್ನು ಕಂಡುಕೊಳ್ಳಬೇಕು. ಹೆಚ್ಚಿನ ಸಂಖ್ಯೆಯ ಮಕ್ಕಳು 'ಬೇಡ'ವೆಂಬ ಪ್ರಚಾರವೊಂದು ಈಗ ನಡೆಯುತ್ತಿದೆ. ಇದು ಬಡವರ ವಿಷಯಕ್ಕೆ ಒಪ್ಪತಕ್ಕದ್ದಾಗಿದೆ. ಆದರೆ ಶ್ರೀಮಂತರಾದವರಿಗೆ ಹತ್ತು ಮಕ್ಕಳಾದರೂ ಏನೂ ಬಾಧಕವಿಲ್ಲ. ಇಂಥವರಿಗೆ ಹೆಚ್ಚು ಮಕ್ಕಳಾದಲ್ಲಿ 'ಯಾವನಾದರೊಬ್ಬ ಗಯಾಶ್ರಾದ್ಧವನ್ನು ಮಾಡಿ ಪಿತೃಗಳನ್ನು ಸಂತೋಷಗೊಳಿಸಿಯಾನು' ಎಂದೇ ಪುರಾಣಸಾಹಿತ್ಯಗಳಲ್ಲಿ ಋಷಿಗಳು ಹರಸಿರುತ್ತಾರೆ. ಸತ್ಪುತ್ರರು ಹತ್ತು ಅಥವಾ ಹೆಚ್ಚು ಜನರಾದರೂ ಮಾತಾಪಿತೃಗಳೇನೂ ಚಿಂತಿಸಬೇಕಾಗಿಲ್ಲ. ಅವರಲ್ಲಿ ಯಾವನಾದರೊಬ್ಬ ಮಹಾತ್ಮನಾಗಬಹುದು ; ದೇಶಭಕ್ತನಾಗಬಹುದು ; ಉದಾರಿಯಾಗಿ ದಾನಶೀಲನಾಗಿ ಕೀರ್ತಿವಂತನಾಗಬಹುದು. ಹೀಗೆ ಒಳ್ಳೆಯ ದೃಷ್ಟಿಯಿಂದ ಚಿಂತಿಸಿದಲ್ಲಿ 'ಬಹುಪುತ್ರಲಾಭ'ವು ಬಯಸಬಾರದ್ದೇನೂ ಅಲ್ಲ. ವೇದದಲ್ಲಿ ಒಂದು ಕಡೆ ಪತಿಯು ವಿವಾಹಕಾಲದಲ್ಲಿ ತನ್ನ ಪತ್ನಿಗೆ ಅನುಶಾಸನಮಾಡುವಾಗ ಹೀಗೆನ್ನುತ್ತಾನೆ: 'ಎಲೈ ಇಂದ್ರನೆ, ಈಕೆಯಲ್ಲಿ ಹತ್ತು ಪುತ್ರರನ್ನು ಕರುಣಿಸು ; ಗಂಡನು ಹನ್ನೊಂದನೆಯ ಮಗನಾಗುವಂತೆ ಮಾಡು.' ಇದರ ಅರ್ಥವೇನೆಂದರೆ : ಹತ್ತು ಗಂಡುಮಕ್ಕಳಾದ ಅನಂತರ ಹೆಂಡತಿಯನ್ನು ತಾಯಿಯಂತೆ ಕಾಣಬೇಕು-ಎಂದಾಗುವದು. ಆದ್ದರಿಂದ ಈ ಮಂತ್ರದಲ್ಲಿ ಕೇಳಿಕೊಂಡಿರುವ ಐಹಿಕಫಲಗಳೆಲ್ಲವೂ ಬಯಸತಕ್ಕವುಗಳೇ ಆಗಿದ್ದು ಶ್ರೀಸೂಕ್ತದ ಫಲಶ್ರುತಿಯೆಂಬಂತೆ ಈ ಮಂತ್ರವಿದೆ. ಒಟ್ಟಿನಲ್ಲಿ ಆಯುಷ್ಯದಿಂದಾರಂಭಿಸಿ ಉಳಿದ ಎಲ್ಲಾ ಅನುಕೂಲಗಳೂ ಐಶ್ವರ್ಯವೂ ದೊರೆಯುವಂತೆ ಶ್ರೀಸೂಕ್ತದಲ್ಲಿ

ಕೇಳಿಕೊಳ್ಳಲಾಗಿದೆ. ಇಂಥ ಪವಿತ್ರವಾದ ಸೂಕ್ತವನ್ನು ನಾವುಗಳು ಇಹ-ಪರಶ್ರೇಯಸ್ಸುಗಳಿಗೆ ಪ್ರತಿದಿನವೂ ಪಾರಾಯಣ ಮಾಡಬೇಕು. ಭಗವತಿಯ ಪ್ರಸಾದದಿಂದ ನಮ್ಮ ಜೀವನವು ನೆಮ್ಮದಿಯಾಗಿ ನಡೆದು ನಾವು ಮುಂದೆ **ಅಧ್ಯಾತ್ಮಸಾಧಕ**ರಾಗಲು ಇದರಿಂದ ಸಹಾಯವಾಗುವದು.

ಬಹುಜನರು ಶ್ರೀಸೂಕ್ತದಲ್ಲಿ ಸೇರಿಸಿ ಪಠಿಸುತ್ತಿರುವ ಈ ಕೆಳಗಿನ ಒಂದು ಮಂತ್ರವು ಸಹ ಋಗ್ವೇದದ ನಾಲ್ಕನೆಯ ಅಷ್ಟಕದ ನಾಲ್ಕನೆಯ ಅಧ್ಯಾಯದ ಇಪ್ಪತ್ತೊಂಭತ್ತನೆಯ ವರ್ಗದ ಪರಿಶಿಷ್ಟವಾಗಿದೆಯೆಂದು ತಿಳಿದುಬಂದಿದೆ. ಆದ್ದರಿಂದ ಈ ಮಂತ್ರವನ್ನೂ ವಿವರಿಸಿ ಈ ಗ್ರಂಥವನ್ನು ಪೂರ್ಣಗೊಳಿಸುವೆನು.

**ಓಂ॥ ವರ್ಷಂತು ತೇ ವಿಭಾವರೀ ದಿವೋ ಅಭ್ರಸ್ಯ ವಿದ್ಯುತಃ ।**
**ರೋಹಂತು ಸರ್ವಬೀಜಾನ್ಯವ ಬ್ರಹ್ಮದ್ವಿಷೋ ಜಹಿ ॥ ೨೮ ॥**

**'ಎಲೌ ವಿಭಾವರಿಯೆ, ದ್ಯುಲೋಕಾಶ್ರಿತವಾದ ಮಿಂಚು - ಮೋಡಗಳ (ಮಳೆಯು) ಸುರಿಯಲಿ ! ಬೀಜಗಳೆಲ್ಲವೂ ಮೊಳಕೆಯಾಗಲಿ, ಬ್ರಹ್ಮದ್ವೇಷಿಗಳನ್ನು ನಾಶಮಾಡು.'**

ಈ ಮಂತ್ರದಲ್ಲಿ ಲಕ್ಷ್ಮೀದೇವಿಯನ್ನು ವಿಭಾವರೀ ಎಂದು ಕರೆಯಲಾಗಿದೆ. ರಾತ್ರಿಸ್ವರೂಪಳಾದ ಶಕ್ತಿದೇವಿಯನ್ನು **ವಿಭಾವರಿ**- ಎನ್ನುವರು. ಹಗಲು, ರಾತ್ರಿಗಳೆರಡೂ ಸೇರಿಯೇ ಒಂದು ದಿನವಾಗುವದರಿಂದ - ಕಾಲ ಪುರುಷನೆಂದು ವಿಷ್ಣುವನ್ನು ಭಾವಿಸಿದಾಗ ಹಗಲು ವಿಷ್ಣುದೇವತಾಕವೆಂದೂ ರಾತ್ರಿಯು ಲಕ್ಷ್ಮೀದೇವತಾಕವೆಂದೂ ಕಲ್ಪಿಸಬಹುದಾಗಿದೆ. ಲಕ್ಷ್ಮೀ ನಾರಾಯಣರ ರೂಪದಲ್ಲಿ ಹಗಲು ರಾತ್ರಿಗಳು ನಮ್ಮನ್ನು ಕಾಪಾಡುತ್ತವೆ-ಎಂದಭಿಪ್ರಾಯ. ಎಲ್ಲಾ ಪ್ರಾಣಿಗಳಿಗೂ ಹಗಲಿನಂತೆಯೇ ರಾತ್ರಿಯೂ ಅವಶ್ಯವಾದುದು. ಏಕೆಂದರೆ ವಿಶ್ರಾಂತಿಗೆ ಅದೇ ಕಾಲವೇ ಪ್ರಶಸ್ತವು. ಆಯಾಸಗೊಂಡವನಿಗೆ ವಿಶ್ರಾಂತಿಯು ಬೇಕೇಬೇಕು. ಹೀಗೆ ವಿಭಾವರಿಯು ಸಹ ಪೂಜ್ಯಳಾಗಿದ್ದಾಳೆ. ಆಕೆಯು ಆಕಾಶದಲ್ಲಿರುವ ಮೇಘಗಳನ್ನೆಲ್ಲ ವಿದ್ಯುತ್ತಿನೊಡನೆ ಪ್ರೇರಿಸಿ ಮಳೆಗರೆಯಲಿ ! ಎಂದು ಇಲ್ಲಿ ಪ್ರಾರ್ಥಿಸಿದೆ. ಏಕೆಂದರೆ ಮಳೆಬಂದರೆ

ಮಾತ್ರ ಸಸ್ಯಗಳು ಬೆಳೆಯುತ್ತವೆ. ಮೇಘವನ್ನು ಪತಿಯೆಂದೂ ಮಿಂಚನ್ನು ಪತ್ನಿಯೆಂದೂ ಮಹಾಕವಿ ಕಾಳಿದಾಸನು ವರ್ಣಿಸಿದ್ದಾನೆ. ಆಧಿದೈವಿಕವಿಭಾಗಕ್ಕೆ ಸೇರಿದ ಮೇಘವೂ ಮಿಂಚೂ ಭೂಲೋಕಕ್ಕೆ ಸಮೃದ್ಧಿಯನ್ನು ಕೊಡತಕ್ಕವುಗಳು. ಮಿಂಚುತ್ತಾ ಇದ್ದರೆ ಮಳೆಬರುವ ಸೂಚನೆಯೆಂದು ಈಗಲೂ ಬಲ್ಲವರು ಹೇಳುತ್ತಾರೆ. ಮಹಾಲಕ್ಷ್ಮಿಯು ಈ ಎಲ್ಲಾ ರೂಪದಿಂದಲೂ ನಮ್ಮನ್ನು ಅನುಗ್ರಹಿಸಲಿ - ಎಂದರ್ಥ. ಮಳೆಯು ಸಕಾಲದಲ್ಲಿ ಬಂದದ್ದೇ ಆದರೆ ಬೀಜಗಳೆಲ್ಲವು ಮೊಳೆಯುವವು. ಅನಂತರ ಪೈರುಗಳು ವೃದ್ಧಿಯಾಗಿ ನಮ್ಮ ಜೀವನವು ಹಸನಾಗುವದು. ಬೀಜಗಳ ಮೊಳೆಯುವಿಕೆಯು ಕೂಡ ದೇವಿಯ ಪ್ರಸಾದದಿಂದಲೇ ಸಿದ್ಧಿಸಬೇಕಾಗಿದೆ. ಆದ್ದರಿಂದಲೇ ಹೀಗೆ ಪ್ರಾರ್ಥಿಸಲಾಗಿದೆ.

ಇನ್ನು 'ಬ್ರಹ್ಮದ್ವಿಷೋ ಜಹಿ' ಎಂಬ ವಾಕ್ಯವನ್ನು ವಿಚಾರಮಾಡೋಣ. ಬ್ರಹ್ಮವೆಂಬುದು ಇಲ್ಲಿ ಉಪಲಕ್ಷಣವು. ಬ್ರಾಹ್ಮಣಾದಿ ಎಲ್ಲಾ ಜಾತಿಯ ಜನರಿಗೂ ಕೃಷಿಕರಿಗೂ ಕಾರ್ಮಿಕರಿಗೂ ಶತ್ರುಗಳಾದವರನ್ನು ಹೇ ದೇವಿ, ನಾಶಮಾಡು - ಎಂದರ್ಥ. ಈಗಿನ ಕಾಲಕ್ಕೆ ಪೈರು ಮೊಳೆದ ಮಾತ್ರಕ್ಕೆ ಸಂತೋಷಪಡುವಂತಿಲ್ಲ. ಏಕೆಂದರೆ ಕ್ರಿಮಿಕೀಟಗಳು, ಕಳ್ಳಕಾಕರ ಹಾವಳಿಯೂ ಪ್ರಬಲವಾಗಿದ್ದು ಯಜಮಾನನಿಗೆ ಧಾನ್ಯವು ದಕ್ಕುವದೇ ಕಷ್ಟವಾಗಿದೆ. ಎಷ್ಟೋ ವೇಳೆ ಪೈರು ಸಮೃದ್ಧಿಯಾಗಿದ್ದಾಗಲೂ ಬೆಲೆಗಳು ಬಿದ್ದುಹೋಗಿ ಪೈಪೋಟಿಯು ಹೆಚ್ಚಿ ಉತ್ಪಾದಕನಿಗೆ ಬೇಸಾಯವೇ ಶತ್ರುವಾಗಿ ಸಾಲಗಾರನಾಗಬಹುದು. ಇಂಥ ದುರಂತಗಳಿಂದ ಪಾರಾಗಬೇಕಾದರೆ ಲಕ್ಷ್ಮಿಯ ಪ್ರಸಾದವು ಬೇಕೇಬೇಕು. ಬೆಳೆಯುವವನು ಎದುರಿಸಬೇಕಾದ ಅನೇಕ ಶತ್ರುಗಳು ಇದ್ದೇ ಇರುತ್ತಾರೆ. ಅಂಥವರನ್ನೂ ಅಂಥ ಸನ್ನಿವೇಶಗಳನ್ನೂ ನಾಶಗೊಳಿಸುವವಳಾಗು - ಎಂದು ಭಕ್ತನು ಇಲ್ಲಿ ಕೇಳಿಕೊಂಡಿದ್ದಾನೆ. ನಿಜವಾಗಿಯೂ ಬೆಳೆಗಾರನು ಲಕ್ಷ್ಮೀಭಕ್ತನಾಗಬೇಕಾದರೆ ಅವನಿಗೆ ಕ್ರೋಧಮಾತ್ಸರ್ಯ ಕಪಟವಂಚನಾದಿಗಳು ಖಂಡಿತವಾಗಿಯೂ ಒಗ್ಗುವದಿಲ್ಲ. ಆಗ ಜನಸಾಮಾನ್ಯರಿಗೂ ಒಳ್ಳೆಯದಾಗುವದು. ಲಕ್ಷ್ಮಿಯು ಪ್ರಸನ್ನಳಾದರೆ ಉತ್ಪಾದಕನಿಗೂ ಗ್ರಾಹಕನಿಗೂ ನಡುವೆ ಅಡ್ಡಲಾಗುವ ಶತ್ರುಗಳೂ ನಾಶವಾಗುವರು. ಪ್ರಾಚೀನಋಷಿಗಳು

ಸೂಚಿಸಿರುವ 'ಬ್ರಹ್ಮದ್ವಿಷೋ ಜಹಿ' ಎಂಬ ವಾಕ್ಯವು ಎಲ್ಲಾ ಕಾಲಕ್ಕೂ ಅನ್ವಯಿಸತಕ್ಕದ್ದಾಗಿದೆ.

ಈಗ ಈ ಪುಸ್ತಕವನ್ನು ಉಪಸಂಹಾರಮಾಡಿ ಪೂರೈಸುತ್ತೇನೆ. **ಶ್ರೀಸೂಕ್ತವು** ಸರ್ವರೂ ಅನುಸಂಧಾನಮಾಡಿ ಪ್ರಯೋಜನವನ್ನು ಪಡೆಯುವಂಥ ಉಪಯುಕ್ತ ವೇದಭಾಗವಾಗಿದೆ. ಮಂತ್ರಗಳ ಅರ್ಥವನ್ನು ಮಾನಸಿಕವಾಗಿ ಚಿಂತಿಸುವದಕ್ಕೆ ಯಾವ ಅಧಿಕಾರಸಂಪತ್ತಿಯ ಅಭಾವವೂ ಅಡ್ಡಿಯಾಗಲಾರದು. ಆದರೆ ಶ್ರೀದೇವಿಯಲ್ಲಿ ಭಕ್ತಿಯು ಮಾತ್ರ ಇರಬೇಕು. ಪ್ರತಿಯೊಬ್ಬ ಸ್ತ್ರೀಪುರುಷರೂ ಅವರು ಯಾವ ವ್ಯಕ್ತಿಯಾಗಿರಲಿ, ಜನಾಂಗವಾಗಿರಲಿ, ಈ ಮಂತ್ರಗಳ ಭಾವಾರ್ಥವನ್ನು ಚಿಂತಿಸುತ್ತಿದ್ದಲ್ಲಿ ಇಹದಲ್ಲಿ ಸುಖವನ್ನೂ ಪರದಲ್ಲಿ ಮೋಕ್ಷರೂಪವಾದ ಶ್ರೇಯಸ್ಸನ್ನೂ ಪಡೆಯಬಹುದಾಗಿದೆ. ಕೇವಲ ಧನಧಾನ್ಯ-ಸುವರ್ಣರಜತಾದಿಗಳನ್ನು ಮಾತ್ರ ಆಸೆಪಡದೆ ಅವುಗಳ ಆತ್ಮವಾಗಿರುವ ಶ್ರೀದೇವಿಯನ್ನು ನಾವು ಸೇವಿಸುವಂತಾದರೆ ನಿಜವಾದ ಶ್ರೀಸೂಕ್ತದ ಪ್ರಯೋಜನವು ಲಭಿಸಲಿದೆ. ಭಗವತಿಯು ಸರ್ವರನ್ನೂ ಹಾಗೆ ಪ್ರೇರಿಸಲೆಂದು ಪ್ರಾರ್ಥಿಸಿ ಈ ಬರವಣಿಗೆಯನ್ನು ಪೂರ್ಣಗೊಳಿಸುವೆನು.

❋❋❋

# ಶ್ರೀಸೂಕ್ತಮ್

ಓಂ॥ ಹಿರಣ್ಯವರ್ಣಾಂ ಹರಿಣೀಂ ಸುವರ್ಣರಜತಸ್ರಜಾಮ್ ।
ಚಂದ್ರಾಂ ಹಿರಣ್ಮಯೀಂ ಲಕ್ಷ್ಮೀಂ ಜಾತವೇದೋ ಮ ಆವಹ ॥೧॥

ತಾಂ ಮ ಆವಹ ಜಾತವೇದೋ ಲಕ್ಷ್ಮೀಮನಪಗಾಮಿನೀಮ್ ।
ಯಸ್ಯಾಂ ಹಿರಣ್ಯಂ ವಿಂದೇಯಂ ಗಾಮಶ್ವಂ ಪುರುಷಾನಹಮ್ ॥ ೨ ॥

ಅಶ್ವಪೂರ್ವಾಂ ರಥಮಧ್ಯಾಂ ಹಸ್ತಿನಾದಪ್ರಬೋಧಿನೀಮ್ ।
ಶ್ರಿಯಂ ದೇವೀಮುಪಹ್ವಯೇ ಶ್ರೀರ್ಮಾ ದೇವೀ ಜುಷತಾಮ್ ॥ ೩ ॥

ಕಾಂ ಸೋಸ್ಮಿತಾಂ ಹಿರಣ್ಯಪ್ರಾಕಾರಾಮಾರ್ದ್ರಾಂ ಜ್ವಲಂತೀಂ
ತೃಪ್ತಾಂ ತರ್ಪಯಂತೀಮ್ । ಪದ್ಮೇ ಸ್ಥಿತಾಂ ಪದ್ಮವರ್ಣಾಂ
ತಾಮಿಹೋಪಹ್ವಯೇ ಶ್ರಿಯಮ್ ॥ ೪ ॥

ಚಂದ್ರಾಂ ಪ್ರಭಾಸಾಂ ಯಶಸಾ ಜ್ವಲಂತೀಂ ಶ್ರಿಯಂ ಲೋಕೇ
ದೇವಜುಷ್ಟಾಮುದಾರಾಮ್ । ತಾಂ ಪದ್ಮಿನೀಮೀಂ ಶರಣಂ
ಪ್ರಪದ್ಯೇಽಲಕ್ಷ್ಮೀರ್ಮೇ ನಶ್ಯತಾಂ ತ್ವಾಂ ವೃಣೇ ॥ ೫ ॥

ಆದಿತ್ಯವರ್ಣೇ ತಪಸೋಽಧಿಜಾತೋ । ವನಸ್ಪತಿಸ್ತವ
ವೃಕ್ಷೋಽಥ ಬಿಲ್ವಃ । ತಸ್ಯ ಫಲಾನಿ ತಪಸಾ ನುದಂತು ।
ಮಾಯಾಂತರಾಯಾಶ್ಚ ಬಾಹ್ಯಾ ಅಲಕ್ಷ್ಮೀಃ ॥ ೬ ॥

ಉಪೈತು ಮಾಂ ದೇವಸಖಃ ಕೀರ್ತಿಶ್ಚ ಮಣಿನಾ ಸಹ ।
ಪ್ರಾದುರ್ಭೂತೋಽಸ್ಮಿ ರಾಷ್ಟ್ರೇಽಸ್ಮಿನ್ ಕೀರ್ತಿಮೃದ್ಧಿಂ ದದಾತು ಮೇ॥ ೭ ॥

ಕ್ಷುತ್ಪಿಪಾಸಾಮಲಾಂ ಜ್ಯೇಷ್ಠಾಮಲಕ್ಷ್ಮೀಂ ನಾಶಯಾಮ್ಯಹಮ್ ।
ಅಭೂತಿಮಸಮೃದ್ಧಿಂ ಚ ಸರ್ವಾನ್ನಿರ್ಣುದ ಮೇ ಗೃಹಾತ್ ॥ ೮ ॥

ಗಂಧದ್ವಾರಾಂ ದುರಾಧರ್ಷಾಂ ನಿತ್ಯಪುಷ್ಟಾಂ ಕರೀಷಿಣೀಮ್ ।
ಈಶ್ವರೀಂ ಸರ್ವಭೂತಾನಾಂ ತಾಮಿಹೋಪಹ್ವಯೇ ಶ್ರಿಯಮ್ ॥ ೯ ॥

ಮನಸಃ ಕಾಮಮಾಕೂತಿಂ ವಾಚಃ ಸತ್ಯಮಶೀಮಹಿ ।
ಪಶೂನಾಂ ರೂಪಮನ್ನಸ್ಯ ಮಯಿ ಶ್ರೀಃ ಶ್ರಯತಾಂ ಯಶಃ ॥ ೧೦ ॥

ಕರ್ದಮೇನ ಪ್ರಜಾ ಭೂತಾ ಮಯಿ ಸಂಭವ ಕರ್ದಮ ।
ಶ್ರಿಯಂ ವಾಸಯ ಮೇ ಕುಲೇ ಮಾತರಂ ಪದ್ಮಮಾಲಿನೀಮ್ ॥ ೧೧ ॥

ಅಪಃ ಸ್ರಜನ್ತು ಸ್ನಿಗ್ಧಾನಿ ಚಿಕ್ಲೀತ ವಸ ಮೇ ಗೃಹೇ ।
ನಿ ಚ ದೇವೀಂ ಮಾತರಂ ಶ್ರಿಯಂ ವಾಸಯ ಮೇ ಕುಲೇ ॥ ೧೨ ॥

ಆರ್ದ್ರಾಂ ಪುಷ್ಕರಣೀಂ ಪುಷ್ಟಿಂ ಪಿಂಗಲಾಂ ಪದ್ಮಮಾಲಿನೀಮ್ ।
ಚಂದ್ರಾಂ ಹಿರಣ್ಮಯೀಂ ಲಕ್ಷ್ಮೀಂ ಜಾತವೇದೋ ಮ ಆವಹ ॥ ೧೩ ॥

ಆರ್ದ್ರಾಂ ಯಃಕರಿಣೀಂ ಯಷ್ಟಿಂ ಸುವರ್ಣಾಂ ಹೇಮಮಾಲಿನೀಮ್ ।
ಸೂರ್ಯಾಂ ಹಿರಣ್ಮಯೀಂ ಲಕ್ಷ್ಮೀಂ ಜಾತವೇದೋ ಮ ಆವಹ ॥ ೧೪ ॥

ತಾಂ ಮ ಆವಹ ಜಾತವೇದೋ ಲಕ್ಷ್ಮೀಮನಪಗಾಮಿನೀಮ್ ।
ಯಸ್ಯಾಂ ಹಿರಣ್ಯಂ ಪ್ರಭೂತಂ ಗಾವೋ ದಾಸ್ಯೋಽಶ್ವಾನ್
ವಿಂದೇಯಂ ಪುರುಷಾನಹಮ್ ॥ ೧೫ ॥

ಯಃ ಶುಚಿಃ ಪ್ರಯತೋ ಭೂತ್ವಾ ಜುಹುಯಾದಾಜ್ಯಮನ್ವಹಮ್ ।
ಶ್ರಿಯಃ ಪಂಚದಶರ್ಚಂ ಚ ಶ್ರೀಕಾಮಃ ಸತತಂ ಜಪೇತ್ ॥ ೧೬ ॥

ಪದ್ಮಾನನೇ ಪದ್ಮಿನಿ ಪದ್ಮಪತ್ರೇ । ಪದ್ಮಪ್ರಿಯೇ ಪದ್ಮದಲಾಯತಾಕ್ಷಿ ।
ವಿಶ್ವಪ್ರಿಯೇ ವಿಶ್ವಮನೋನುಕೂಲೇ । ತ್ವತ್ಪಾದಪದ್ಮಂ ಮಯಿ ಸನ್ನಿಧತ್ಸ್ವ ॥

ಪದ್ಮಾನನೇ ಪದ್ಮಊರೂ ಪದ್ಮಾಕ್ಷೀ ಪದ್ಮಸಂಭವೇ ।
ತನ್ಮೇ ಭಜಸಿ ಪದ್ಮಾಕ್ಷೀ ಯೇನ ಸೌಖ್ಯಂ ಲಭಾಮ್ಯಹಮ್ ॥ ೧೮ ॥

ಅಶ್ವದಾಯೀ ಗೋದಾಯೀ ಧನದಾಯೀ ಮಹಾಧನೇ ।
ಧನಂ ಮೇ ಜುಷತಾಂ ದೇವಿ ಸರ್ವಾನ್ ಕಾಮಾಂಶ್ಚ ದೇಹಿ ಮೇ ॥ ೧೯ ॥

ಪುತ್ರಪೌತ್ರಧನಂ ಧಾನ್ಯಂ ಹಸ್ತ್ಯಶ್ವಾದಿಗವೇರಥಮ್ ।
ಪ್ರಜಾನಾಂ ಭವಸಿ ಮಾತಾ ಆಯುಷ್ಮಂತಂ ಕರೋತು ಮೇ ॥ ೨೦ ॥

ಧನಮಗ್ನಿರ್ಧನಂ ವಾಯುರ್ಧನಂ ಸೂರ್ಯೋ ಧನಂ ವಸುಃ ।
ಧನಮಿಂದ್ರೋ ಬೃಹಸ್ಪತಿರ್ವರುಣಂ ಧನಮಸ್ತು ಮೇ ॥ ೨೧ ॥

ವೈನತೇಯ ಸೋಮಂ ಪಿಬ ಸೋಮಂ ಪಿಬತು ವೃತ್ರಹಾ ।
ಸೋಮಂ ಧನಸ್ಯ ಸೋಮಿನೋ ಮಹ್ಯಂ ದದಾತು ಸೋಮಿನಃ ॥ ೨೨ ॥

ನ ಕ್ರೋಧೋ ನ ಚ ಮಾತ್ಸರ್ಯಂ ನ ಲೋಭೋ ನಾಶುಭಾ ಮತಿಃ
ಭವತಿ ಕೃತಪುಣ್ಯಾನಾಂ ಭಕ್ತಾನಾಂ ಶ್ರೀಸೂಕ್ತಂ ಜಪೇತ್ ಸದಾ ॥ ೨೩ ॥

ಸರಸಿಜನಿಲಯೇ ಸರೋಜಹಸ್ತೇ ಧವಲತರಾಂಶುಕಗಂಧಮಾಲ್ಯಶುಭೇ ।
ಭಗವತಿ ಹರಿವಲ್ಲಭೇ ಮನೋಜ್ಞೇ ತ್ರಿಭುವನಭೂತಿಕರಿ ಪ್ರಸೀದ ಮಹ್ಯಮ್ ॥ ೨೪ ॥

ವಿಷ್ಣುಪತ್ನೀಂ ಕ್ಷಮಾಂ ದೇವೀಂ ಮಾಧವೀಂ ಮಾಧವಪ್ರಿಯಾಮ್ ।
ಲಕ್ಷ್ಮೀಂ ಪ್ರಿಯಸಖೀಂ ದೇವೀಂ ನಮಾಮ್ಯಚ್ಯುತವಲ್ಲಭಾಮ್ ॥ ೨೫ ॥

ಮಹಾದೇವ್ಯೈ ಚ ವಿದ್ಮಹೇ ವಿಷ್ಣುಪತ್ನ್ಯೈ ಚ ಧೀಮಹಿಃ ।
ತನ್ನೋ ಲಕ್ಷ್ಮೀಃ ಪ್ರಚೋದಯಾತ್ ॥ ೨೬ ॥

ಶ್ರೀರ್ವರ್ಚಸ್ವಮಾಯುಷ್ಯಮಾರೋಗ್ಯಮಾವಿಧಾಚ್ಛೋಭಮಾನಂ ಮಹೀಯತೇ । ಧನಂ ಧಾನ್ಯಂ ಪಶುಂ ಬಹುಪುತ್ರಲಾಭಂ ಶತಸಂವತ್ಸರಂ ದೀರ್ಘಮಾಯುಃ ॥ ೨೭ ॥

ವರ್ಷಂತು ತೇ ವಿಭಾವರೀ ದಿವೋ ಅಭ್ರಸ್ಯ ವಿದ್ಯುತಃ ।
ರೋಹಂತು ಸರ್ವಬೀಜಾನ್ಯವ ಬ್ರಹ್ಮದ್ವಿಷೋ ಜಹಿ ॥ ೨೮ ॥

ಓಂ ಶಾಂತಿಃ ಶಾಂತಿಃ ಶಾಂತಿಃ

## ಇತಿ ಶ್ರೀಸೂಕ್ತಮ್

***

**15. ಪ್ರಬೋಧಸುಧಾಕರ:** (ಪ್ರಕರಣಗಳು ಸಂಪುಟ ೮-
ಪ್ರಬೋಧ ಸುಧಾಕರ, ಪ್ರಶ್ನೋತ್ತರ ರತ್ನಮಾಲಿಕಾ,
ಶ್ರೀ ರಾಮಭುಜಂಗ ಪ್ರಯಾತ, ದತ್ತಲಹರೀ ಸಹಿತ) 118

**16. ದೇವೀಮಾಹಾತ್ಮ್ಯ:** (ದುರ್ಗಾಸಪ್ತಶತೀ - ಮೂಲ, ಭಾವಾರ್ಥ ಸಹಿತ) 116

**17. ಗೀತಾಮನನ:** (೧೦೧ ಶ್ಲೋಕಗಳಲ್ಲಿ ಗೀತೆಯ ಸಂಗ್ರಹ - ವಿವರಣೆ) 48

**18. ಗೃಹಪ್ರವೇಶ:** (ಹೊಸದಾಗಿ ಮನೆಯನ್ನು ಕಟ್ಟಿದವರು-
ಅನುಸರಿಸಬೇಕಾದ ಕ್ರಮಗಳ ಅರ್ಥ ವಿವರಣೆ, ಗೃಹಸ್ಥಧರ್ಮದ
ಪ್ರಾಶಸ್ತ್ಯದೊಡನೆ- ಅಧ್ಯಾತ್ಮತತ್ತ್ವವಿಚಾರ ಸಹಿತ) 42

**19. ಸ್ತುತಿಪುಷ್ಪಾಂಜಲಿ:** (ಭಕ್ತರೆಲ್ಲರೂ ಕಂಠಪಾಠಮಾಡಲು ಯೋಗ್ಯವಾದ
ಶ್ಲೋಕಗಳು, ಪ್ರತಿಪದಾರ್ಥಗಳ ಸಹಿತ) 72

## III. ಅಧ್ಯಾತ್ಮ ಜಿಜ್ಞಾಸುಗಳಿಗೆ (ತತ್ತ್ವಪ್ರಧಾನರಾದ ಮುಮುಕ್ಷುಗಳಿಗೆ)

**20. ಮಹಾನಾರಯಣೋಪನಿಷತ್ತು:** (ಕನ್ನಡದಲ್ಲಿ ವಿಸ್ತಾರವಾದ - ಅರ್ಥವಿವರಣೆ) 220

**21. ತೈತ್ತಿರೀಯೋಪನಿಷದ್ಭಾಷ್ಯವಾರ್ತಿಕ:** (ಮೂಲ- ಅನುವಾದ ಸಹಿತ) 200

**22. ಆತ್ಮಪ್ರತಿಬೋಧ:** (ಕೇನೋಪನಿಷತ್ತನ್ನು ಕುರಿತ ಪ್ರಬಂಧ) 48

**23. ಸರಸ್ವತೀರಹಸ್ಯೋಪನಿಷಚ್ಚಂದ್ರಿಕೆ:**
(ಈ ಹೆಸರಿನ ಉಪನಿಷತ್ತಿನ ಮೇಲೆ ಬರೆದಿರುವ ವಿವರಣೆ) 58

**24. ಬೃಹದಾರಣ್ಯಕೋಪನ್ಯಾಸಮಂಜರಿ:**
(ಶಾಂಕರಭಾಷ್ಯಾನುಸಾರವಾದ ಲಘು ವಿವರಣೆ) 340

**25. ಛಾಂದೋಗ್ಯೋಪನ್ಯಾಸಮಂಜರಿ:**
(ಶಾಂಕರ ಭಾಷ್ಯಾನುಸಾರವಾದ ಲಘು ವಿವರಣೆ) 338

**26. ಶ್ವೇತಾಶ್ವತರೋಪನ್ಯಾಸಮಂಜರಿ:** (ಈ ಉಪನಿಷತ್ತಿನ ಲಘು ವಿವರಣೆ) 354

**27. ತೈತ್ತಿರೀಯೋಪನ್ಯಾಸಮಂಜರಿ:** (ಈ ಉಪನಿಷತ್ತಿನ ಲಘು ವಿವರಣೆ) 83

**28. ಐತರೇಯೋಪನ್ಯಾಸಮಂಜರಿ:** (ಈ ಉಪನಿಷತ್ತಿನ ಲಘು ವಿವರಣೆ) 28

**29. ಸನತ್ಸುಜಾತೀಯಮ್:** (ಪ್ರಕರಣಗಳು ಸಂಪುಟ ೭-
(ಮಹಾಭಾರತಾಂತರ್ಗತ ಸನತ್ಸುಜಾತೀಯ ಶಾಂಕರಭಾಷ್ಯ ಅನುವಾದ ಸಹಿತ) 254

✿✿✿✿✿

## ವೇ|| ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿಗಳ ಕಿರುಪರಿಚಯ

ಶ್ರೀ ಕೃಷ್ಣಯಜುರ್ವೇದ ಸಲಕ್ಷಣ ಘನಾಂತ ಸ್ಮಾರ್ತಪ್ರಯೋಗ ಉಭಯ ವಿದ್ವಾನ್ ದಿ|| ಶೃಂಗೇರಿ ಶ್ರೀಕಂಠಘನಪಾಠಿಗಳವರು ಮತ್ತು ಕಮಲಮ್ಮನವರ ಸೀಮಂತ ಪುತ್ರರಾದ **ಶ್ರೀ ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿ**ಗಳು **ತಾ|| ೨-೬-೧೯೨೮**ರಲ್ಲಿ ಜನಿಸಿದರು. ಒಂಭತ್ತನೆಯ ವಯಸ್ಸಿನಲ್ಲಿಯೇ ಬ್ರಹ್ಮಚರ್ಯಾಶ್ರಮವನ್ನು ಸ್ವೀಕರಿಸಿ ತಂದೆಯವರಿಂದಲೇ ವೇದಾಧ್ಯಯನ ಕಾಲೋಚಿತ ಭಾಗಗಳನ್ನು ಅಭ್ಯಾಸ ಮಾಡಿದರು. ೧೪ನೆಯ ವಯಸ್ಸಿನಲ್ಲಿ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ



ಉತ್ತೀರ್ಣರಾದರು. ಅದೇ ಸಂದರ್ಭದಲ್ಲಿ ಪಿತೃವಿಯೋಗವಾದ್ದರಿಂದ ಆಂಗ್ಲವಿದ್ಯಾಭ್ಯಾಸದಿಂದ ನಿವೃತ್ತರಾಗಿ ಬೇಲೂರಿನಲ್ಲಿ ಸಂಸ್ಕೃತಪಾಠಶಾಲೆಗೆ ಸೇರಿ ನಾಲ್ಕು ವರ್ಷಗಳ ಕಾಲ ಸಂಸ್ಕೃತಾಭ್ಯಾಸ ಮಾಡಿ ಚಂಪೂ ನಾಟಕ (ಸಾಹಿತ್ಯ) ಪರೀಕ್ಷೆಯಲ್ಲಿ ಪ್ರಥಮದರ್ಜೆಯಲ್ಲಿ ಉತ್ತೀರ್ಣರಾದರು. ಅನಂತರ ೧೯೪೭ರಲ್ಲಿ ಹೊಳೆನರಸೀಪುರಕ್ಕೆ ಬಂದು **ಅಧ್ಯಾತ್ಮವಿದ್ಯಾನಿಲಯ**ಕ್ಕೆ ಸೇರಿ ಐದು ವರ್ಷಗಳ ಕಾಲ ಶಾಂಕರ ವೇದಾಂತಾಧ್ಯಾಯನವನ್ನು **ಶ್ರೀ ಶ್ರೀಸಚ್ಚಿದಾನಂದೇಂದ್ರ ಸರಸ್ವತೀಸ್ವಾಮಿ**ಗಳವರ ಸನ್ನಿಧಿಯಲ್ಲಿ ಅಭ್ಯಾಸಮಾಡಿ **೧೯೫೨**ರಲ್ಲಿ ''ಅಧ್ಯಾತ್ಮವಿದ್ಯಾಪ್ರವೀಣ'' ಎಂಬ ಪ್ರಶಸ್ತಿಯನ್ನು ಪಡೆದರು. ಆನಂತರ ಅಧ್ಯಾತ್ಮಪ್ರಕಾಶಕಾರ್ಯಾಲಯದಲ್ಲಿಯೇ ಪಂಡಿತರಾಗಿ ನೇಮಿಸಲ್ಪಟ್ಟು ಪಾಠ ಪ್ರವಚನಗಳು, ಉಪನ್ಯಾಸಗಳು ಹಾಗೂ ಸಂಸ್ಥೆಯ ಆಡಳಿತ ವಿಭಾಗದಲ್ಲಿಯೂ ಸೇವೆಯನ್ನು ಸಲ್ಲಿಸುತ್ತಾ ಈಗಲೂ ಸಂಸ್ಥೆಯಲ್ಲಿ ಸೇವಾತತ್ಪರರಾಗಿದ್ದಾರೆ.

ಅಧ್ಯಾತ್ಮಪ್ರಕಾಶಕಾರ್ಯಾಲಯದ ಸಂಸ್ಥಾಪಕರಾದ ಪೂಜ್ಯ ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳು ೧೯೭೫ರಲ್ಲಿ ಬ್ರಹ್ಮೀಭೂತರಾದ ಮೇಲೆ ಇವರು ''ಅಧ್ಯಾತ್ಮಪ್ರಕಾಶ'' ಮಾಸಪತ್ರಿಕೆಯ ಸಂಪಾದಕರೂ, ಲೇಖಕರೂ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಜೊತೆಗೆ ಅಧ್ಯಾತ್ಮಗ್ರಂಥಗಳ ಬರಹಗಾರರೂ ಪ್ರಕಾಶಕರೂ ಆಗಿ ಸೇವೆ ಸಲ್ಲಿಸುತ್ತಾ ಪ್ರಧಾನಕಾರ್ಯಾಲಯದಲ್ಲಿಯೇ ೫೨ ವರ್ಷಗಳಿಂದಲೂ ಸಂಸ್ಥೆಯ ಅಭಿವೃದ್ಧಿಗೆ ಸೇವೆ ಸಲ್ಲಿಸುತ್ತಿದ್ದಾರೆ. ಶ್ರೀಶ್ರೀಗಳವರ ಕಾಲಾನಂತರ ವೇದ ಪುರಾಣ ಮತ್ತು ವೇದಾಂತಗಳ ಮೇಲೆ ಸುಮಾರು ೩೦ ಗ್ರಂಥಗಳನ್ನು ಬರೆದು ಕಾರ್ಯಾಲಯದ ಮೂಲಕ ಪ್ರಕಟಿಸಿದ್ದಲ್ಲದೆ, **ಬ್ರಹ್ಮಸೂತ್ರಶಾಂಕರಭಾಷ್ಯ, ಶ್ರೀಮದ್ಭಗವದ್ಗೀತಾ ಭಾಷ್ಯ, ಮಹಾನಾರಾಯಣೋಪ ನಿಷತ್ತು**ಗಳ ಮೇಲೆ ಪ್ರವಚನಗಳನ್ನೂ ನೀಡಿದ್ದಾರೆ. ಇವುಗಳೆಲ್ಲವೂ ಧ್ವನಿಸುರಳಿ/ ಸಿ.ಡಿ.ಗಳಲ್ಲಿ ಅಡಕವಾಗಿದ್ದು ಜನಪ್ರಿಯವಾಗಿವೆ ಮತ್ತು ಕಾರ್ಯಾಲಯದಲ್ಲಿ ಮಾರಾಟಕ್ಕೆ ದೊರೆಯುತ್ತವೆ.